ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಚದುರಂಗರ ಕಥೆಗಳು ಮತ್ತು ಪ್ರಗತಿಶೀಲ ಸಾಹಿತ್ಯ

ನಿಬಂಧಕಾರರು
ಎ.ಎಸ್.ನಂದೀಶ
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು
ಡಾ. ಕಾಳೇಗೌಡ ನಾಗವಾರ
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯-೧೦

[illegible]

[illegible]

[illegible]

[illegible]

888

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯–೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಚದುರಂಗರ ಕಥೆಗಳು ಮತ್ತು ಪ್ರಗತಿಶೀಲ ಸಾಹಿತ್ಯ

ನಿಬಂಧಕಾರರು
ಎ.ಎಸ್.ನಂದೀಶ
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು
ಡಾ. ಕಾಳೇಗೌಡ ನಾಗವಾರ
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯–೧೦

ದೃಢೀಕರಣ ಪತ್ರ

೨೦೦೯-೧೦ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00423**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ ಎ.ಎಸ್.ನಂದೀಶ ಅವರು ನನ್ನ ಮಾರ್ಗದರ್ಶನದಲ್ಲಿ **"ಚದುರಂಗರ ಕಥೆಗಳು ಮತ್ತು ಪ್ರಗತಿಶೀಲ ಸಾಹಿತ್ಯ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೧೮-೦೮-೨೦೧೦

(ಡಾ. ಕಾಳೇಗೌಡ ನಾಗವಾರ)
ಮಾರ್ಗದರ್ಶಕರು
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

[illegible]

[illegible]

[illegible]

[illegible]

[illegible]

[illegible]

ಅಭ್ಯರ್ಥಿಯ ಘೋಷಣಾ ಪತ್ರ

"ಚದುರಂಗರ ಕಥೆಗಳು ಮತ್ತು ಪ್ರಗತಿಶೀಲ ಸಾಹಿತ್ಯ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS-00423**ರ ವಿದ್ಯಾರ್ಥಿಯಾದ ನಾನು ೨೦೦೯-೧೦ನೇ ಸಾಲಿನ ಪರೀಕ್ಷೆಗಾಗಿ ಪ್ರೊ. ಕಾಳೇಗೌಡ ನಾಗವಾರ, ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೧೮-೦೮-೨೦೧೦

(ಎ.ಎಸ್.ನಂದೀಶ)
೨೦೦೯-೧೦ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಚದುರಂಗರ ಕಥೆಗಳು ಮತ್ತು ಪ್ರಗತಿಶೀಲ ಸಾಹಿತ್ಯ

ಪರಿವಿಡಿ

*****

ಅಧ್ಯಾಯ – ೧
ಪ್ರವೇಶಿಕೆ

ಆಧುನಿಕ ಸಣ್ಣಕತೆ ಪ್ರಕಾರಕ್ಕೆ ನೂರುವರ್ಷ. ಇದು ಕನ್ನಡದ ಅನೇಕ ಕಥೆಗಾರರನ್ನು ತನ್ನೊಡಲೊಳಗೆ ತಬ್ಬಿಕೊಂಡು ಇದು ಒಂದು ಪ್ರಕಾರವಾಗಿ ಬೆಳೆದಿದೆ. ಇದರ ಬೇರುಗಳು ಕಥಾಸರಿತ್ಸಾಗರ, ಪಂಚತಂತ್ರ, ಜಾತಕಕಥೆಗಳು, ಜೈನಕಥೆಗಳು, ಸೂಫಿ ಹಾಗೂ ಜನಪದ ಕಥೆಗಳು ಹೀಗೆ ವಿವಿಧ ಪ್ರಾಚೀನ ಕಥಾಭಿತ್ತಿಗಳಲ್ಲಿವೆ. ಆಧುನಿಕ ಕಥೆಗಳಲ್ಲಿ ಈ ಹಳೆಯ ಕಥೆಗಳು ವಿವಿಧ ವಿನ್ಯಾಸಗಳಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿವೆ. ಸಣ್ಣಕಥಾ ಸಾಹಿತ್ಯದ ಆರಂಭದಲ್ಲಿ ಹುಟ್ಟಿದ ಕಥೆಗಳು ಕೇಳಿಕೊಂಡ ಸಾಮಾಜಿಕ ಪ್ರಶ್ನೆಗಳನ್ನು ಸಾಂಸ್ಕೃತಿಕ ಕಾಳಜಿಗಳನ್ನು ಈಗಿನ ಆಧುನಿಕ ಸಣ್ಣಕತೆಗಳಲ್ಲಿ ನೋಡಿದಾಗ ಈ ಪ್ರಕಾರದಲ್ಲಿ ಅಗಾಧವಾದ ಬದಲಾವಣೆ ಹಾಗೂ ಬೆಳವಣಿಗೆ ಉಂಟಾಗಿರುವುದನ್ನು ಕಾಣಬಹುದು.

ಕನ್ನಡದ ಆರಂಭದ ಕಥೆಗಳಲ್ಲಿ ಕಥೆಗಾರರು ಇಂಗ್ಲಿಷ್ ಶಿಕ್ಷಣ, ವಿಧವಾವಿವಾಹ, ನೈತಿಕತೆ, ಸ್ತ್ರೀಸ್ವಾತಂತ್ರ್ಯ, ಸಮಾನತೆಯ ಪ್ರಶ್ನೆಗಳನ್ನು ಎದುರಿಸಿರುವುದನ್ನು ಪ್ರಧಾನವಾಗಿ ಕಾಣಬಹುದು. ಇದು ಈಗಿನ ಆಧುನಿಕ ಸಣ್ಣಕತೆಗಳನ್ನು ಗಮನಿಸಿದಾಗ ಸಣ್ಣಕತೆಗಳಲ್ಲಿ ಸ್ತ್ರೀಸಂವೇದನೆ, ದಲಿತ ಸಮಸ್ಯೆ, ನಿರುದ್ಯೋಗ, ಪಟ್ಟಣ, ನಗರಗಳ ಸಮಸ್ಯೆ, ಬಡತನದ ಸಮಸ್ಯೆಗಳು, ವೇಶ್ಯಾವಾಟಿಕೆ, ಗ್ರಾಮೀಣ ಬದುಕು, ಪರಿಸರ ಹಾಗೂ ಜಾಗತೀಕರಣ ಸಂಬಂಧ, ಸಮಾಜ ಮತ್ತು ವಿವಿಧ ಪ್ರಗತಿಪರ ಚಳುವಳಿಗಳ ಮಹತ್ವ – ಹೀಗೆ ವಿವಿಧ ಸಮಸ್ಯೆಗಳು, ಸಂವೇದನೆಗಳು ಹಾಗೂ ಸವಾಲುಗಳು ಕಾಣಿಸಿಕೊಂಡು ಸಣ್ಣಕತೆಯ ವ್ಯಾಪ್ತಿ ಹಾಗೂ ಮಹತ್ವವನ್ನು ಮತ್ತಷ್ಟು ಹಿಂದಿಗಿಂತ ಹೆಚ್ಚಿನ ಜವಾಬ್ದಾರಿಯಲ್ಲಿ ವಿಸ್ತರಿಸಿವೆ. ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕತೆಯೇ ಅತ್ಯಂತ ಲೋಕಪ್ರಿಯವಾದ ರೂಪವಾಗಿದೆ. ಈ ಮಾತು ಭಾರತದ ಉಳಿದೆಲ್ಲ ಪ್ರಾಂತಗಳ ಸಾಹಿತ್ಯಗಳಿಗೂ ಅನ್ವಯಿಸುತ್ತದೆ. ಕತೆಯ ಬಗ್ಗೆ ಮನುಷ್ಯನಿಗಿರುವ ಜನ್ಮಜಾತವಾದ ಕುತೂಹಲವೂ ಅಲ್ಲದೆ ಸಣ್ಣಕತೆ ಭಾವಗೀತದೊಡನೆ ಹೊಸದಾಗಿ ಬಂದ ಸಾಹಿತ್ಯಪ್ರಕಾರವಾಗಿರುವುದೂ ಇದಕ್ಕೆ ಕಾರಣವಾಗಿದೆ.

"ಹೊಸಗನ್ನಡದಲ್ಲಿ ಈವರೆಗೆ ಬಂದಿರುವ ಸಣ್ಣಕತೆಗಳ ಸಂಖ್ಯೆಯನ್ನು ಹೇಳುವುದು ಕೂಡ ಪ್ರಯಾಸದ ಕೆಲಸವಾಗಿದೆ. ದಿನಪತ್ರಿಕೆ, ವಾರಪತ್ರಿಕೆ ಹಾಗೂ ಮಾಸಪತ್ರಿಕೆಗಳಲ್ಲಿ ಬ್ಯಾಕ್ಟೀರಿಯಾದ ಮರಿಗಳಂತೆ ಸಣ್ಣಕತೆಗಳು ಹುಟ್ಟುತ್ತಲೇ ಇವೆ.

ಯಾವ ಸಮೃದ್ಧಿ ಕಾಲದಲ್ಲಿಯೂ ಈ ಬಗೆಯ ಸಾಹಿತ್ಯ ಸೃಷ್ಟಿ ನಡೆದೇ ಇರುವಂತೆ ತೋರುತ್ತದೆ. ಹಿಂದಿನ ಕಾಲಕ್ಕೆ ಸಂಸ್ಕೃತದಲ್ಲಿ ಲೆಕ್ಕವಿಲ್ಲದಷ್ಟು ಸುಭಾಷಿತಗಳು ಜನ್ಮ ತಾಳಿದಂತೆ ಈಗಿನ ಕಾಲಕ್ಕೆ ಸಣ್ಣಕತೆಗಳು ಹುಟ್ಟುತ್ತಿವೆ"[೧] ಎಂಬುದಾಗಿ ಕೀರ್ತಿನಾಥ ಕುರ್ತಕೋಟಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ರೀತಿಯಾಗಿ ಕಥೆ ಪ್ರಕಾರ ಬೆಳೆದರೂ ಸಣ್ಣಕಥೆ ಸಾಹಿತ್ಯ ಪ್ರಕಾರಕ್ಕೆ ಕ್ರಮಬದ್ಧವಾದ ಬೆಳವಣಿಗೆ ಇಲ್ಲವೆಂದೇ ಹೇಳಬಹುದು. ಇವುಗಳಲ್ಲಿ ಕೆಲವು ಪತ್ರಿಕೆಗಳು ಪುಟ ತುಂಬುವುದಕ್ಕಾಗಿ ಬರೆದವುಗಳು. ಕೆಲವು ಲೇಖಕರ ಅಡ್ಡಪ್ರವೃತ್ತಿಯ ಫಲದಿಂದಾಗಿ ಬಂದವುಗಳು: ಇನ್ನೂ ಕೆಲವು ತರುಣ ಬರಹಗಾರರ ಮೀಸಲು ಪ್ರಯತ್ನಗಳು; ಕೆಲವು ಮಾತ್ರ ಪರಿಪೂರ್ಣವಾದ ಸಾಹಿತ್ಯ ಕೃತಿಗಳಾಗಿವೆ. ಆದ್ದರಿಂದ ಭಾವಗೀತ ಹಾಗೂ ಹರಟೆಗಳೊಡನೆ ಪಾಶ್ಚಾತ್ಯ ಸಾಹಿತ್ಯದಿಂದ ಬಂದ ಸಣ್ಣಕತೆ ಭಾವಗೀತದಂತೆ ನವೋನವ – ಸಂಸ್ಕಾರವನ್ನು ಪಡೆದು ಸಾಹಿತ್ಯದ ಒಂದು ಪ್ರಮುಖ ಅಂಗವಾಗಿ ಬೆಳೆದು ಬರಲಿಲ್ಲ.

ಸಣ್ಣಕತೆಯ ತಂತ್ರ, ವ್ಯಾಪ್ತಿ ಬರವಣಿಗೆಯ ರೀತಿ, ಅದರ ಒಟ್ಟಂದದ ಪರಿಣಾಮ ಹಾಗೂ ಅದು ತೊಡಬಹುದಾದ ಅನೇಕ ರೂಪಗಳು, ಇವುಗಳ ಬಗ್ಗೆ ವಿಮರ್ಶಕರು ಅಭ್ಯಾಸಪೂರ್ಣವಾದ ಲೇಖನಗಳನ್ನು ಬರೆದು, ಅದರ ಬರವಣಿಗೆ ತಿಳಿದುಕೊಂಡಷ್ಟು ಸುಲಭವಾಗಿಲ್ಲವೆಂದು ಮನವರಿಕೆ ಮಾಡಿಕೊಟ್ಟಿದ್ದಾರೆ. ಹೀಗೆ ಸಣ್ಣಕತೆ ರಚನೆಯ ಬಗ್ಗೆ ಚರ್ಚೆ ನಡೆದು ಅದರ ಸ್ವರೂಪ ನಿಶ್ಚಿತವಾದ ಮೇಲೆ ಅದರ ಬರವಣಿಗೆಯು ಸುಲಭವಾಗುತ್ತ ಬಂದಿತು. ಸಾಹಿತ್ಯದ ಉಳಿದ ಪ್ರಕಾರಗಳಂತೆ ಸಣ್ಣಕತೆ ಒಂದು ಮೊತ್ತದಲ್ಲಿ ಸಾಹಿತ್ಯದಲ್ಲಿ ಪ್ರಗತಿ ಕಾಣಲಿಲ್ಲ ಎಂಬ ಅಂಶ ಕಂಡುಬರುತ್ತದೆ. ಶ್ರೀನಿವಾಸರಂತೆ ಸಣ್ಣಕತೆಯನ್ನೇ ತಮ್ಮ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿ ಮಾಡಿಕೊಂಡ ಕತೆಗಾರರು ಹೊಸಪೀಳಿಗೆಯಲ್ಲಿ ಹುಟ್ಟಿಬರಲಿಲ್ಲ. ಆದರೂ ಕತೆಗಳ ಪ್ರಮಾಣ ಸಾಕಷ್ಟು ಇದೆ. ಅದು ಸಂಖ್ಯೆಯ ದೃಷ್ಟಿಯಲ್ಲಿ ಮಾತ್ರ. ಉತ್ತಮಿಕೆಯ ಬಗ್ಗೆ ಅಲ್ಲ. ಬೇರೆಲ್ಲ ಸಾಹಿತ್ಯ ಪ್ರಕಾರಕ್ಕೆ ಹೋಲಿಸಿದರೆ ಸಣ್ಣಕತೆ ಅಷ್ಟೇನೂ ಪ್ರಚುರತೆ ಪಡೆಯಲಿಲ್ಲವೆನಿಸುತ್ತದೆ.

---

೧. ಯುಗಧರ್ಮ ಹಾಗೂ ಸಾಹಿತ್ಯದರ್ಶನ, ಲೇ. ಕೀರ್ತಿನಾಥ ಕುರ್ತಕೋಟಿ, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ೨೦೦೮, ಪು. ೧೪೦.

ಸಣ್ಣಕಥೆಯ ಪ್ರಕಾರಕ್ಕೆ ವಿಶಿಷ್ಟರೂಪು ನೀಡಿ ಅದನ್ನು ಪರಿಣಾಮಕಾರಿ ಮಾಧ್ಯಮವನ್ನಾಗಿ ಬಳಸಿದವರಲ್ಲಿ ಶ್ರೀನಿವಾಸರು (ಮಾಸ್ತಿ) ಮೊದಲಿಗರು ಅಲ್ಲಿಂದೀಚೆಗೆ ಹಲವಾರು ಜನ ಲೇಖಕರು ಈ ಪ್ರಕಾರವನ್ನು ಬೆಳೆಸಿದ್ದಾರೆ. ಆರಂಭದ ಸಣ್ಣಕಥೆಗಳನ್ನು ಬರೆದವರ ಸಾಲಿಗೆ ಪಂಜೆ ಮಂಗೇಶರಾಯರು, ಕೆರೂರು ವಾಸುದೇವಾಚಾರ್ಯರು, ಎಂ.ಎನ್.ಕಾಮತರು ಸೇರುತ್ತಾರೆ. ಇದೇ ಸಾಲಿಗೆ ಆನಂದ, ಅಶ್ವತ್ಥ ಮುಂತಾದವರಿಂದ ಹಿಡಿದು ಇಂದಿನವರೆಗೆ ಹಲವಾರು ಲೇಖಕರು ಈ ಪ್ರಕಾರದಲ್ಲಿ ಕೆಲಸಮಾಡಿದ್ದಾರೆ.

ಚದುರಂಗರು ನಮ್ಮ ನೆನಪಿನಲ್ಲುಳಿಯುವುದು ವೈಶಾಖದಂಥ ಕಾದಂಬರಿಗಳ ಮೂಲಕವಾಗಿಯೇ ಎನ್ನುವುದು ನಿಜವಾದರೂ ಸಣ್ಣಕಥೆ ಕೂಡ ಅವರ ಪ್ರಿಯವಾದ ಮಾಧ್ಯಮವೇ. ಎಲ್ಲ ಕಾಲಘಟ್ಟಗಳಲ್ಲಿಯೂ ಎಲ್ಲ ಚಳುವಳಿಗಳ ಸಂದರ್ಭದಲ್ಲಿಯೂ ಆರೋಗ್ಯಕಾರಿಯಾದ ನಿಲುವನ್ನು ಇಟ್ಟುಕೊಂಡು ಕಥೆಗಳನ್ನು ಬರೆದ ಹಿರಿಯ ಕಥೆಗಾರರಲ್ಲಿ ಚದುರಂಗರು ಒಬ್ಬರು. ಇವರ ಕಥೆಗಳು ಭೂಮಿ ಮತ್ತು ಮನುಷ್ಯನ ಸಂಬಂಧ, ಮನುಷ್ಯ ಮತ್ತು ಪ್ರತಿಭಟನೆ, ಕ್ರಾಂತಿಯ ಸಂಬಂಧ ಹೀಗೆ ವಿವಿಧ ಬಗೆಗಳನ್ನು ಶೋಧಿಸುವ ಪ್ರವೃತ್ತಿಯನ್ನು ಪ್ರಕಟಿಸುತ್ತವೆ. ಇವರ ಕಥೆಗಳ ವಸ್ತು ಆವರಣ ಮತ್ತು ಭಾಷೆಯ ವೈವಿಧ್ಯತೆ ಮುಖ್ಯವಾಗಿ ಹಳೇ ಮೈಸೂರು, ಹುಣಸೂರು, ಪಿರಿಯಾಪಟ್ಟಣದ ಪ್ರಾಂತ್ಯಕ್ಕೆ ಸೇರಿದ್ದು ಕಥೆಗಾರರಾಗಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಚದುರಂಗರ ಸಾಧನೆ ಗಮನಾರ್ಹವಾದುದಾಗಿದೆ. ಚದುರಂಗರು ಕನ್ನಡ ಸಾರಸ್ವತಲೋಕಕ್ಕೆ ಕಾಲಿಟ್ಟದ್ದೇ "ಸ್ವಪ್ನ ಸುಂದರಿ" ಕಥಾಸಂಕಲನದ ಮೂಲಕ ೧೯೪೦ರಲ್ಲಿ ಪ್ರಗತಿಶೀಲ ಕಾಲಘಟ್ಟವದು. ಚದುರಂಗರ ಆರಂಭದ ಕಥೆಗಳನ್ನು ಆ ಕಾಲದ ಸಾಹಿತ್ಯದ ಇತ್ಯಾತ್ಮಕ ಅಂಶಗಳು ಮತ್ತು ಪರಿಮಿತಿಗಳನ್ನು ಒಳಗೊಂಡೇ ಮೌಲ್ಯಮಾಪನ ಮಾಡಬೇಕಾಗುತ್ತದೆ.

ಚದುರಂಗರು ತಮ್ಮ ಸುದೀರ್ಘವಾದ ಸಾಹಿತ್ಯಿಕ ಜೀವನದಲ್ಲಿ ತಮ್ಮ ಕಾಲದ ಎಲ್ಲ ಸಾಹಿತ್ಯಿಕ ಚಳುವಳಿಗಳೊಡನೆ ಜೋಡಿಸಿಕೊಂಡರಾದರೂ, ಎಸ್.ಅನಂತ-ನಾರಾಯಣ ಅವರು ಗುರುತಿಸಿದಂತೆ ಅವರದು ಮೂಲತಃ ಪ್ರಗತಿಶೀಲ ವ್ಯಕ್ತಿತ್ವ ಅಭಿವ್ಯಕ್ತಿಯ ರೂಪಗಳು ಬದಲಾಗುತ್ತ ಹೋದರೂ ಅಭಿವ್ಯಕ್ತವಾದದು ಈ ವ್ಯಕ್ತಿತ್ವವೇ. ಹೀಗಾಗಿ ಈ ಪ್ರಸ್ತುತ ಸಂಪ್ರಬಂಧದಲ್ಲಿ ಚದುರಂಗರ ಕತೆಗಳನ್ನು ಪ್ರಗತಿಶೀಲ ಸಾಹಿತ್ಯದ ಹಿನ್ನೆಲೆಯಲ್ಲಿ ವಿವೇಚಿಸುವ ಪ್ರಯತ್ನವಿದೆ.

ಚದುರಂಗರ ಏಳು ಕಥಾಸಂಕಲನಗಳು ಮತ್ತು ಎರಡು ಪ್ರಜಾವಾಣಿ ವಿಶೇಷಾಂಕದಲ್ಲಿ ಪ್ರಕಟವಾದ ಕಥೆಗಳು ಸೇರಿ ಒಟ್ಟು ಅರವತ್ತು ಕಥೆಗಳಿವೆ. ಇವೆಲ್ಲ "ಚದುರಂಗರ ಸಮಗ್ರ ಕಥೆಗಳು" ಎಂಬುದಾಗಿ ಪ್ರಕಟವಾಗಿವೆ.

"ಸ್ವಪ್ನಸುಂದರಿ" ಚದುರಂಗರ ಮೊದಲ ಕಥಾಸಂಕಲನ ಇದು. ೧೯೪೮ರಲ್ಲಿ ಪ್ರಕಟವಾಯಿತು. ಆ ಕಾಲಘಟ್ಟ ಪ್ರಗತಿಶೀಲ ಕಾಲಘಟ್ಟ. ಇದರಲ್ಲಿ ಒಂಭತ್ತು ಕಥೆಗಳಿವೆ. ೧) ಅವರು, ೨) ಗುಲಾಬಿ ೩) ೧೯೬೭, ೪) ತುಲಸಿ, ೫) ಮೂರು ಮತ್ತೊಂದು, ೬) ಕೆಂಪುಶಾಹಿ, ೭) ಪ್ರಜಾ ಹೋರಾಟ, ೮) ನನ್ನ ಮಗು? ೯) ಸ್ವಪ್ನ ಸುಂದರಿ – ಇವುಗಳೇ ಆ ಒಂಬತ್ತು ಕಥೆಗಳು. ಈ ಸಂಕಲನದ ಕಥೆಗಳ ವಸ್ತು, ಪ್ರೇಮ, ಕಾಮ, ನೋವು, ಸಂತೋಷ, ಬಡತನ, ಹಸಿವು, ಆದರ್ಶ – ಹೀಗೆ ಜೀವನದ ಪರಿಕರಗಳನ್ನೇ ಒಳಗೊಂಡಿರುವಂಥವುಗಳಾಗಿವೆ.

ಶವದಮನೆ:

೧೯೫೦ರಲ್ಲಿ ಪ್ರಕಟಗೊಂಡಿದೆ. ಸಂಕಲನದ ಮೊದಲ ಕಥೆ ಶವದ ಮನೆ ಚದುರಂಗರಿಗೆ ಸಾಕಷ್ಟು ಹೆಸರು ತಂದುಕೊಟ್ಟಿದೆ. ಈ ಸಂಕಲನದ ಮಹತ್ವದ ಕಥೆಯೂ ಹೌದು. ಈ ಸಂಕಲನದಲ್ಲಿ ಒಟ್ಟಾರೆ ಒಂಭತ್ತು ಕಥೆಗಳಿವೆ. ೧) ಶವದಮನೆ (೨) ಸಯ್ಯಾಜಿರಾವ್ ರಸ್ತೆ (೩) ಕಾಳಿ (೪) ನಾಲ್ಕು ಮನೆಯ ನಂದಾದೀಪ (೫) ನಿಟ್ಟುಸಿರು (೬) ಬಳೇ ಬೇಕ್ ಬಳೇ (೭) ಇಪ್ಪತ್ತು ರೂಪಾಯಿ (೮) ತುಚೀಪ್, ತುದಾಂಡ್, ತುಬದ್‌ರೆಡೀ (೯) ಸತ್ಯ. ಈ ಸಂಕಲನದಲ್ಲಿ ಸಮಾಜದ ವ್ಯವಸ್ಥೆಯ ಕೊಳಕುಗಳನ್ನು ನೇರವಾಗಿ, ನಯವಾಗಿ ಹೊರತೆಗೆಯುವ ಕಥೆಗಳಾಗಿವೆ.

ಇಣುಕುನೋಟ:

ಇದು ಚದುರಂಗರ ಐದು ಕಥೆಗಳುಳ್ಳ ಮೂರನೆಯ ಕಥಾಸಂಕಲನ. ಇದು ೧೯೫೦ರಲ್ಲಿ ಪ್ರಕಟವಾಗಿದೆ. (೧) ಇಣುಕುನೋಟ (೨) ಮರಳಿ ಅಲ್ಲಿಗೆ (೩) ಬಣ್ಣದ ಬೊಂಬೆ (೪) ಬರಲು ತಿರುಗುತ್ತಿತ್ತು. (೫) ಹೇರ್‌ಪಿನ್

ಈ ಕಥೆಗಳಲ್ಲಿ ಮನುಷ್ಯನ ಮುಗ್ಧತೆ, ಬಡತನ, ಹಸಿವು, ಅವುಗಳಿಂದ ಸಮಾಜದ ಕೆಳವರ್ಗ ಅನುಭವಿಸುತ್ತಿರುವ ನೋವಿನ ಬದುಕಿನ ದುರಂತವನ್ನು ಚಿತ್ರಿಸುತ್ತವೆ.

ಬಂಗಾರದ ಗೆಜ್ಜೆ:

ಈ ಕಥಾಸಂಕಲನ ೧೯೫೧ರಲ್ಲಿ ಪ್ರಕಟವಾಗಿದ್ದು ಇದರಲ್ಲಿ ಒಟ್ಟು ಏಳು ಕಥೆಗಳಿವೆ.

(೧) ಬಂಗಾರದ ಗೆಜ್ಜೆ (೨) ಎರಡು ಕಂಠ – ಒಂದು ರಾಗ (೩) ಹಣದ ಚೀಲ (೪) ಭೂತದ ಚೇಷ್ಟೆ (೫) ಹೂಮಾಲೆ (೬) ಎಲಾಜೀವನ! (೭) ವ್ಯಾಮೋಹ.

ಇಲ್ಲಿನ ಕಥೆಗಳು ಮಧ್ಯಮವರ್ಗ ಮತ್ತು ಕೆಳವರ್ಗ ಜನರ ಆಸೆಗಳು, ಈಡೇರದ ಬಯಕೆಗಳು, ನಿರ್ದಿಷ್ಟತೆ ಇಲ್ಲದ ಬದುಕಿನ ನಡೆ, ಈ ಎಲ್ಲದರ ಬಗೆಗೆ ಇಲ್ಲಿನ ಕಥೆಗಳು ಪರಿಮಿತ ನೆಲೆಯಲ್ಲಿ ನೇರವಾದ ನಿರೂಪಣೆಯಲ್ಲಿ ಕಟ್ಟಿಕೊಡುತ್ತವೆ.

ಮೀನಿನ ಹೆಜ್ಜೆ:

೧೯೫೮ರಲ್ಲಿ ಪ್ರಕಟವಾದ ಐದನೆಯ ಕಥಾಸಂಕಲನ (೧) ಮೀನಿನ ಹೆಜ್ಜೆ (೨) ನಾಲ್ಕುಮೊಳ ಭೂಮಿ (೩) ಅನುಗ್ರಹ (೪) ಕಸ್ತೂರಿ (೫) ನಾನೊಬ್ಬನೇ ಪಾಪಿ (೬) ರಾತ್ರಿಯಲ್ಲಿ ನಾಟಕ (೭) ಕೊನೆಯ ಅವಕಾಶ (೮) ಹತ್ತು ಲಕ್ಷ ಮೈನಸ್ ಒಂದು. ಹೀಗೆ ಒಟ್ಟು ಎಂಟು ಕಥೆಗಳಿದ್ದು ಇಲ್ಲಿಯೂ ಹೆಣ್ಣು ಗಂಡಿನ ಸಮಸ್ಯೆ, ಬಡತನದ ಸಮಸ್ಯೆ, ಮನುಷ್ಯ ಮತ್ತು ಭೂಮಿಯ ಸಂಬಂಧ ಮುಂತಾದ ಅಂಶಗಳು ಕಂಡುಬರುತ್ತವೆ.

ಕ್ವಾಟೆ:

೧೯೬೨ರಲ್ಲಿ ಪ್ರಕಟವಾದ, ಹದಿಮೂರು ಕಥೆಗಳನ್ನುಳ್ಳ ಕಥಾಸಂಕಲನ ಇದು. ಅರಿಕೆಯಲ್ಲಿ ಚದುರಂಗರೇ ಹೇಳುವಂತೆ "ಹಿಂದಿನ ಕಥೆಗಳಿಗಿಂತ ಈ ಕಥೆಗಳು ಭಿನ್ನವಾಗಿರುವುದನ್ನು ಗಮನಿಸಬಹುದು.

(೧) ಕ್ವಾಟೆ (೨) ಆರುಬೆರಳು (೩) ಪರೀಕ್ಷಿತ (೪) ಒಂದು ಉಂಗುರದ ಕಥೆ (೫) ಮೂಗಾಯಣ (೬) ತಿರುವು (೭) ಗಾಳಿ (೮) ಅಂಕ (೯) ಹಂಬಲ (೧೦) ಜಾದು (೧೧) ಚಿಟ್ಟೆ ಮತ್ತು ಕಿಟಕಿಯ ಗಾಜು (೧೨) ಗಪೂರ ಹೇಳಿದ ಕಥೆ (೧೩) ದಬಕ್ ದಬಕ್ ಗುಲ್ಬೋರಿಯಾ.

ಈ ಎಲ್ಲ ಕಥೆಗಳು ಚದುರಂಗರ ಹಿಂದಿನ ಕಥೆಗಳಿಗಿಂತ ಹೆಚ್ಚು ಆಳವನ್ನೂ ಸಂಕೀರ್ಣತೆಯನ್ನು ಮೈಗೂಡಿಸಿಕೊಂಡು ರಚನೆಗೊಂಡಿವೆ. ಅವು ಕತೆಗಾರನ ಕಲಾತ್ಮಕ ಅಭಿವ್ಯಕ್ತಿ. ಸಂಕೀರ್ಣ ಅನುಭವಗಳೆರಡನ್ನು ಏಕಕಾಲದಲ್ಲಿ ಪ್ರತಿಬಿಂಬಿಸುತ್ತವೆ.

ಮೃಗಯಾ:

೧೯೯೪ರಲ್ಲಿ ಪ್ರಕಟವಾದ ಮೃಗಯಾ ಚದುರಂಗರ ಕೊನೆಯ ಕಥಾಸಂಕಲನ. ಇದರಲ್ಲಿ ಒಟ್ಟು ೭ ಕಥೆಗಳಿವೆ.

(೧) ಮೃಗಯಾ (೨) ತಲ್ಲಣ (೩) ತೀರ್ಪು (೪) ಕಲ್ಲಿನ ಕೊಳಲು (೫) ಸ್ವಪ್ನ (೬) ಚಾಕೋಲೇಟ್ ಮಾಮಾ (೭) ಹಿಂದಿರುಗಿದ ಭೂತ.

ಈ ಕಥೆಗಳಲ್ಲಿ ಮನುಷ್ಯನ ನಿಸರ್ಗಸಿದ್ದವಾದ ಪುರುಷಾರ್ಥಗಳಲ್ಲಿ ಒಂದಾಗಿರುವ ಕಾಮ, ಸೃಷ್ಟಿಶೀಲ ಪ್ರಕ್ರಿಯೆಯ ಶಕ್ತಿಹೊಂದಿರುವ ಕಾಮ ಪಡೆದುಕೊಳ್ಳಬಹುದಾದ ನೇತ್ಯಾತ್ಮಕ ಮುಖಗಳನ್ನು ಕಥೆ ಸರಳ ಹಾಗೂ ನೇರ ನಿರೂಪಣೆಯಲ್ಲಿ ತೆರೆದಿಡುತ್ತದೆ. ಕಾಮ ತನ್ನ ಎಲ್ಲೆಯನ್ನು ಮೀರಿದಾಗ ಆಗಬಹುದಾದ ಅನಾಹುತಗಳ ಚಿತ್ರಣ ಇಲ್ಲಿದೆ.

"ದಿಬ್ಬ" ಮತ್ತು "ಬಸ್ಲಿಂಗುಇವತ್ತೂ ಬರಲಿಲ್ಲವಾ" ಕ್ರಮವಾಗಿ ೧೯೯೫, ೧೯೯೭ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕಗಳಲ್ಲಿ ಪ್ರಕಟವಾದ ಕಥೆಗಳು. ಸಾವು ಮತ್ತು ಬದುಕನ್ನು ಬದುಕಿನ ನಾಣ್ಯದ ಎರಡು ಮುಖಗಳಾಗಿ ಒಂದೇ ವೇದಿಕೆಯಲ್ಲಿ ತರುವ ಪ್ರಯತ್ನವನ್ನು "ದಿಬ್ಬ"ದ ಕಥೆ ನಿರೂಪಿಸುತ್ತದೆ.

ಚದುರಂಗರ ಏಳು ಕಥಾಸಂಕಲನಗಳಲ್ಲಿ ಹರಡಿಕೊಂಡಿರುವ ಮೇಲಿನ ಕಥೆಗಳನ್ನು ಗಮನಿಸಿದಾಗ ತಿಳಿದುಬರುವ ಬಹುಮುಖ್ಯ ಅಂಶವೆಂದರೆ ಅವರ ಸಣ್ಣಕಥೆಗಳಲ್ಲಿ ಸಾಮಾನ್ಯವಾಗಿ ಸಮಾಜದ ಕೆಳವರ್ಗಕ್ಕೆ ಸೇರಿದ ಜನರ ದಾರುಣ ಜೀವನವನ್ನು ಕಥಾವಸ್ತುವಾಗಿ ಬಳಸಿಕೊಳ್ಳುವುದು ಪದ್ಧತಿ. ಈ ಅಂಶ ಅವರ ಕಥೆಗಳಲ್ಲಿನ ನಗರಕೇಂದ್ರಿತ ಹಾಗೂ ಗ್ರಾಮ್ಯ ಕೇಂದ್ರಿತ ಕಥೆಗಳೆರಡರಕ್ಕೂ ಅನ್ವಯಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಅವರ ಕಥೆಗಳಲ್ಲಿ ಕಂಡುಬರುವ ಬಹುಪಾಲು ಪಾತ್ರಗಳು ಬಹುಮಟ್ಟಿಗೆ ದಾರಿದ್ರ್ಯ, ಹಸಿವು, ಅಜ್ಞಾನ ಇತ್ಯಾದಿ ದುರ್ಭರವಾದ ಬಾಳಿನ ಅಂಧಕಾರದಿಂದ ಆಚೆಗೆ ದಾರಿತೋರಬಲ್ಲ ಬೆಳಕನ್ನು ಅರಸುತ್ತಾ ಅದಕ್ಕಾಗಿ ತವಕಪಡುವ ದುರ್ದೈವಿಗಳ ಚಿತ್ರವನ್ನು ಸಾಮಾನ್ಯವಾಗಿ ಅವರ ಕಥೆಗಳಲ್ಲಿ ಮುಖ್ಯವಾಗಿ ಗಮನಿಸಬಹುದಾಗಿದೆ. ಹಾಗಾಗಿ ಅವರ ಕಥೆಗಳಲ್ಲಿ ಬರುವ ಪಾತ್ರಗಳು ಸಹಿಸಲು ಅಸಾಧ್ಯವಾದ ತಮ್ಮ ನಿಜಜೀವನದೊಂದಿಗೆ ಈ ಪಾತ್ರಗಳು ನಿರಂತರ ನಡೆಸುವ ಹೋರಾಟವನ್ನು ಆ ಹೋರಾಟದ ಬದುಕನ್ನು ಭಿನ್ನ ಭಿನ್ನ

ಸ್ವರೂಪಗಳಲ್ಲಿ ಚಿತ್ರಿಸುವ ಮೂಲಕ ಓದುಗನನ್ನು ತನ್ಮಯಗೊಳಿಸುವ ನಿಟ್ಟಿನಲ್ಲಿ ಯಶಸ್ವಿ ಕಥೆಗಾರರಾಗಿದ್ದಾರೆ ಎಂಬುದಕ್ಕೆ ಅವರ ಕಥೆಗಳೇ ಸಾಕ್ಷಿಗಳಾಗಿವೆ.

"ಬಸ್ಲಿಂಗು ಇವತ್ತೂ ಬರಲಿಲ್ಲವಾ" ಕಥೆ ಕಳೆದು ಹೋಗಿರುವ ಮಗನ ನಿರೀಕ್ಷೆಯಲ್ಲಿ ಜೀವನ ಸಾಗಿಸುವ ನಿಂಗಾಜಿಯ ಕಾಯುವಿಕೆಯನ್ನು ಚಿತ್ರಿಸುತ್ತದೆ.

ಹೀಗೆ ಏಳು ಕಥಾ ಸಂಕಲನಗಳು ಹಾಗೂ ಎರಡು ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾದ ಕಥೆಗಳು ಸೇರಿ ಒಟ್ಟಾರೆ. ಅರವತ್ತು ಕಥೆಗಳು ಚದುರಂಗರನ್ನು ಸಣ್ಣಕತೆಯ ಕ್ಷೇತ್ರದಲ್ಲಿ ಗುರುತಿಸುವಂತೆ ಮಾಡಿದೆ. ಈ ರೀತಿ ತಮ್ಮ ಸಾಹಿತ್ಯಿಕ ಜೀವನದಲ್ಲಿ ತಮ್ಮ ಕಾಲದ ಎಲ್ಲ ಸಾಹಿತ್ಯಿಕ ಚಳುವಳಿಯೊಡನೆ ಜೋಡಿಸಿಕೊಂಡರಾದರೂ ಅವರದು ಮೂಲತಃ ಪ್ರಗತಿಶೀಲ ವ್ಯಕ್ತಿತ್ವವೇ ಎಂಬುದರಲ್ಲಿ ಸಂದೇಹವಿಲ್ಲ ಹಾಗಾಗಿ ಅವರ ಕಥೆಗಳನ್ನು ಪ್ರಗತಿಶೀಲ ಸಾಹಿತ್ಯದ ಹಿನ್ನೆಲೆಯಲ್ಲಿ ನೋಡುವ ಉದ್ದೇಶ ಇದಾಗಿದೆ.

ಚದುರಂಗರ ಆರಂಭದ ಕತೆಗಳು ಹುಟ್ಟಿದ ಕಾಲಘಟ್ಟ ಪ್ರಗತಿಶೀಲ ಸಾಹಿತ್ಯ. ಹಾಗಾಗಿ ಅವರ ಆರಂಭದ ಕಥೆಗಳನ್ನು ಪ್ರಗತಿಶೀಲ ಕಾಲದ ಸಾಹಿತ್ಯಿಕ ಇತ್ಯಾತ್ಮಕ ಅಂಶಗಳು ಮತ್ತು ಪರಿಮಿತಿಗಳನ್ನು ಒಳಗೊಂಡೇ ಮೌಲ್ಯಮಾಪನ ಮಾಡಬೇಕಾಗುತ್ತದೆ. ಆ ಕಾಲಘಟ್ಟದ ಸಣ್ಣ ಕಥೆ ಸಾಹಿತ್ಯ ಪ್ರಕಾರದ ಸ್ವರೂಪ-ಸವಾಲುಗಳನ್ನು ಕುರಿತಂತೆ 'ಸ್ವಪ್ನಸುಂದರಿ' ಕಥಾ ಸಂಕಲನಕ್ಕೆ ಬರೆದಿರುವ ಅನಕೃರವರ ಮುನ್ನುಡಿಯೇ ಬೇಕಾದಷ್ಟು ಅಂಶಗಳನ್ನು ತಿಳಿಸುತ್ತದೆ. ಈ ರೀತಿ ಸಣ್ಣಕಥೆ ಪ್ರಕಾರಕ್ಕೆ ಆಗಿದ್ದ ಸ್ಥಿತಿಯನ್ನು ಮೀರಿ ಕಥೆಗಳನ್ನು ಯಶಸ್ವಿಗೊಳಿಸಿದವರಲ್ಲಿ ಚದುರಂಗರು ಒಬ್ಬರು.

ಚದುರಂಗರ ಕಥೆಗಳನ್ನು, ಕಾದಂಬರಿಗಳನ್ನು ಗಮನಿಸಿದಾಗ ಪ್ರಗತಿಶೀಲ ಕಾಲಘಟ್ಟದ ಪ್ರಭಾವ ಪ್ರೇರಣೆಗಳನ್ನು ಅರಗಿಸಿಕೊಂಡ ನಿಲುವುಗಳನ್ನು ಅವರ ಕೃತಿಗಳಲ್ಲಿ ಕಾಣಬಹುದಾಗಿದೆ. ಆದರೆ ಎಲ್ಲಾ ಕಥೆಗಳು ಕೂಡ ಆ ಕಾಲಘಟ್ಟದಲ್ಲಿಯೇ ಆ ಮಟ್ಟದಲ್ಲಿಯೇ ಉಳಿದು ಬಿಡುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಅವರ ಪರಿಪಕ್ವಗೊಂಡ ಕಥನ ಕಲೆಯ ಅಭಿವ್ಯಕ್ತಿಯನ್ನು ಮುಂದಿನ ಹಲವಾರು ಕಥೆಗಳಲ್ಲಿ ಗಮನಿಸಬಹುದಾಗಿದೆ. ಚದುರಂಗರನ್ನು ನಾವು ಪ್ರಗತಿಶೀಲತೆಯ ಮನೋಧರ್ಮದ ಪ್ರಮುಖ ಲೇಖಕರು ಎಂದರೂ ಸಹ ಅವರಲ್ಲಿ ನವೋದಯದ ಆದರ್ಶವಾದ, ಪ್ರಗತಿಶೀಲ ನಿಲುವು, ನವ್ಯರ ಚಿಂತನಶೀಲತೆ, ವ್ಯಕ್ತಿ ವಿಶಿಷ್ಟಮಾರ್ಗ, ವರ್ಗ, ವರ್ಣ, ಜಾತಿ, ಲಿಂಗಾಧಾರಿತ ಶೋಷಣೆಯ ವಿರುದ್ಧದ ದಲಿತ-ಬಂಡಾಯದ ಪ್ರತಿಭಟನೆ ಹೀಗೆ

ಎಲ್ಲಾ ಕಾಲಘಟ್ಟಗಳ ಅಂಶಗಳು ಕಾಲಕಾಲಕ್ಕೆ ತಕ್ಕಂತೆ ಅವರ ಕಥೆಗಳಲ್ಲಿ ನಿರೂಪಿತವಾಗಿರವುದನ್ನು ಅಲ್ಲಗಳೆಯುವಂತಿಲ್ಲ.

ಈ ನಿಬಂಧದಲ್ಲಿ ಒಟ್ಟು ಏಳು ಅಧ್ಯಾಯಗಳಿವೆ.

ಮೊದಲನೆಯ ಅಧ್ಯಾಯದಲ್ಲಿ – ಸಂಪ್ರಬಂಧದ ಉದ್ದೇಶ, ವ್ಯಾಪ್ತಿ ಹಾಗೂ ಮಹತ್ವದ ಬಗ್ಗೆ ನಿರೂಪಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ – ಪ್ರಗತಿಶೀಲ ಸಾಹಿತ್ಯದ ಹುಟ್ಟು, ಪ್ರೇರಣೆ ಮತ್ತು ಪ್ರಭಾವವನ್ನು ಕುರಿತು ನಿರೂಪಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ – ಸಣ್ಣ ಕತೆಯ ಹುಟ್ಟು, ಬೆಳವಣಿಗೆ ಮತ್ತು ಕನ್ನಡದಲ್ಲಿ ಸಣ್ಣಕತೆ ಬೆಳೆದು ಬಂದ ಬಗೆ ಹಾಗೂ ಪ್ರಗತಿಶೀಲ ಕತೆಗಾರರನ್ನು ಕುರಿತು ನಿರೂಪಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ – ಕಥೆಗಾರರ ಜೀವನ, ವ್ಯಕ್ತಿತ್ವ ಮತ್ತು ಹಿನ್ನೆಲೆಯನ್ನು ನಿರೂಪಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ – ಚದುರಂಗರ ಪ್ರಗತಿಶೀಲ ಅಭಿವ್ಯಕ್ತಿಯುಳ್ಳ ಹತ್ತು ಕತೆಗಳ ವಿಶ್ಲೇಷಣೆ ಇದೆ.

ಆರನೆಯ ಅಧ್ಯಾಯದಲ್ಲಿ – ಚದುರಂಗರ ಆಯ್ದ ಕತೆಗಳಲ್ಲಿನ ಗ್ರಾಮೀಣ ಅಭಿವ್ಯಕ್ತಿ, ಕುಟುಂಬ, ವೃತ್ತಿ, ಸಮಾಜ ಜೀವನ, ಸ್ತ್ರೀಪಾತ್ರಗಳು, ಸಾಹಿತ್ಯಿಕ ಗುಣ ಮುಂತಾದ ಅಂಶಗಳ ವಿಶ್ಲೇಷಣೆ ಇದೆ.

ಏಳನೆಯ ಅಧ್ಯಾಯ – ಉಪಸಂಹಾರ.

ಅಧ್ಯಾಯ – ೨

ಪ್ರಗತಿಶೀಲ ಸಾಹಿತ್ಯ

ಹುಟ್ಟು, ಪ್ರೇರಣೆ ಮತ್ತು ಪ್ರಭಾವ

ಹೊಸಗನ್ನಡ ಸಾಹಿತ್ಯದ ನಾಲ್ಕು ಘಟ್ಟಗಳಾದ ನವೋದಯ, ನವ್ಯ, ಪ್ರಗತಿಶೀಲ ಮತ್ತು ದಲಿತ–ಬಂಡಾಯ ಘಟ್ಟಗಳಲ್ಲಿ ಪ್ರಗತಿಶೀಲ ಸಾಹಿತ್ಯವು ಸಹ ತನ್ನದೇ ಆದ ಸಾಂಸ್ಕೃತಿಕ ಕೊಡುಗೆಯನ್ನು ನಾಡಿಗೆ ನೀಡಿದೆ. ಪ್ರಗತಿಶೀಲ ಸಾಹಿತ್ಯ ಎಂದರೆ ಪ್ರಗತಿಯನ್ನೇ ಲಕ್ಷಣವಾಗಿ ಉಳ್ಳದ್ದು. ಹಾಗೆ ನೋಡಿದರೆ ನವೋದಯ ಲೇಖಕರಿಗಿಂತ ಭಿನ್ನವಾದ ಧೋರಣೆಗಳನ್ನು ಸ್ಪಷ್ಟವಾಗಿ ಮುಂದುವರೆಸಿಕೊಂಡು ಬಂದವರೆಂದರೆ ಪ್ರಗತಿಶೀಲ ಬರಹಗಾರರೆ. ಇವರ ಉದ್ದೇಶವೆಂದರೆ ಸಾಮಾಜಿಕ ವಿಷಮತೆ, ಶೋಷಣೆ, ಬಂಡವಾಳಗಾರರು, ಭೂಮಾಲೀಕರ ವಿರುದ್ಧದ ಸಮರದಲ್ಲಿ ತಮ್ಮನ್ನು ಬರಹದ ಮೂಲಕ ತೊಡಗಿಸಿಕೊಳ್ಳಬೇಕು ಎಂಬುದು.

ಪ್ರಗತಿ ಎಂದರೆ ಸಮಾಜ ಈಗಿರುವ ಸ್ಥಿತಿಯಿಂದ ಇನ್ನೂ ಒಳ್ಳೆಯ ಸ್ಥಿತಿಯ ಕಡೆಗೆ ನಡೆಯುವ ಚಲನೆ ಎನ್ನುವ ಅರ್ಥದಲ್ಲಿ ವ್ಯಾಖ್ಯಾನಿಸಬಹುದು. ಪ್ರಗತಿಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡಿರುವ ಸಾಹಿತ್ಯವೇ ಪ್ರಗತಿಶೀಲ ಸಾಹಿತ್ಯ. "ಪ್ರಗತಿಯ ಅರ್ಥ ಮತ್ತು ಸಾಧ್ಯತೆಗಳನ್ನು ಕುರಿತ ಸಾಮಾಜಿಕ ಚಿಂತನೆಯ ಒಂದು ಪರಿಕಲ್ಪನೆ ಪ್ರಗತಿಶೀಲ ಸಾಹಿತ್ಯ, ಇಡೀ ಕನ್ನಡ ಸಾಹಿತ್ಯ ಚರಿತ್ರೆಯ ಸಾಮಾಜಿಕ ಪ್ರಜ್ಞೆ ಜಾಗೃತ–ವಾಗುತ್ತಾ ಬಂದಿದ್ದರ ಚರಿತ್ರೆಯಾಗಿದೆ"[೧] ಎಂದು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು ಹೇಳುತ್ತಾರೆ.

ಫ್ಯಾಸಿಸ್ಟ್ ಶಕ್ತಿಗಳ ದಬ್ಬಾಳಿಕೆಗೆ ಗುರಿಯಾಗಿದ್ದ ಯುರೋಪಿನಲ್ಲಿ ಪ್ರಗತಿಶೀಲ ಸಾಹಿತ್ಯದ ಬೀಜಾರೋಹಣ ನಡೆಯಿತು. ೧೯೩೫ರಲ್ಲಿ ಉರ್ದು ಸಾಹಿತಿ ಸಜ್ಜಾದ್ ಜಾಹೀರ್ ಅವರು ಸಿದ್ಧಪಡಿಸಿದ – ಪ್ರಣಾಳಿಕೆಯೊಂದಿಗೆ ಈ ಚಳವಳಿ ಆರಂಭ–ವಾಯಿತು. ಅಲ್ಲದೆ ಮುಲ್ಕರಾಜ್ ಆನಂದ್, ಡಾ. ಘೋಷ್ ಮೊದಲಾದವರು ಇದ್ದರು. ಅದೇ ವೇಳೆಗೆ ಇದಕ್ಕೆ ಪ್ರೇರಕವಾಗಿ ಪ್ಯಾರಿಸ್‌ನಲ್ಲಿ ಸಂಸ್ಕೃತಿಯ ರಕ್ಷಣೆಗಾಗಿ 'ವಿಶ್ವದ ಸಾಹಿತಿಗಳ ಮೇಳ' ನಡೆಯಿತು. ಇದು ಈಬೆಳವಣಿಗೆಗೆ ಇನ್ನಷ್ಟು ಸ್ಫೂರ್ತಿ ನೀಡಿತು. ಇದು ಮುಂದೆ ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ತನ್ನ ಅಸ್ತಿತ್ವದ

---

೧. ಜಿ.ಎಸ್.ಎಸ್. – ಸಾಹಿತ್ಯ, ಸಾಮಾಜಿಪ್ರಜ್ಞೆ, ಬೆಂಗಳೂರು ವಿಶ್ವವಿದ್ಯಾನಿಲಯ – ೭೭.

ಹೋರಾಟವನ್ನು ಪ್ರಾರಂಭಿಸಿತು. ಹೀಗೆ ಬ್ರಿಟನ್ನಿನಲ್ಲಿ ನಡೆದ ವಿಶ್ವಸಾಹಿತಿಗಳ ಸಮಾವೇಶದಲ್ಲಿ ಡಾ. ಘೋಷ್, ಮುಲ್ಕರಾಜ್ ಆನಂದ್, ಮ್ಯಾಕ್ಸಿಂಗಾರ್ಕಿ, ರೂಮೆರೂಲಾ, ಹೆನ್ರಿಬಾರ್ಬೂಸೆ ಮುಂತಾದವರು ಭಾಗವಹಿಸಿದ್ದರು.

ಪ್ರಗತಿಶೀಲ ಸಾಹಿತ್ಯ ಚಳವಳಿಯ ಸಾಹಿತಿಗಳು ನವೋದಯಕ್ಕಿಂತಲೂ ಹೆಚ್ಚಿನ ಪ್ರಗತಿಪರ ಧೋರಣೆ, ಸಾಧನೆಗಳನ್ನು ಸಾಹಿತ್ಯದಲ್ಲಿ ಸಾಧಿಸಲು ಪ್ರಯತ್ನಪಟ್ಟರು. ಈ ಪ್ರಯತ್ನಕ್ಕೆ ಹೊರಗಿನಿಂದ ಅಂದರೆ ಪಾಶ್ಚಾತ್ಯರಿಂದ ಪ್ರೇರಣೆ ಸಿಕ್ಕಿದುದೇ ಕಾರಣ ಎಂದರೆ ತಪ್ಪಾಗಲಾರದು. ಫ್ರಾನ್ಸಿನ ಮೋಪಾಸ, ಎಮಿಲಿಜೋಲಾ, ನಾರ್ವೆ ದೇಶದ ಇಬ್ಸನ್, ರಷ್ಯಾದ ಮ್ಯಾಕ್ಸಿಂಗಾರ್ಕಿ ಮುಂತಾದವರಿಂದ ಪ್ರಗತಿಶೀಲ ಸಾಹಿತಿಗಳು ಪ್ರೇರಣೆಯನ್ನು ದೊರಕಿಸಿಕೊಂಡರು. ಮಾರ್ಕ್ಸ್‌ವಾದವು ಪ್ರಗತಿಶೀಲ ಸಾಹಿತ್ಯದ ತಳಹದಿ ಎನಿಸಿತು. ಈ ರೀತಿ ಮಾರ್ಕ್ಸ್‌ವಾದದ ತಳಹದಿಯ ಮೇಲೆ ಪ್ರಗತಿಶೀಲ ಸಾಹಿತ್ಯವು ಒಂದು ಕಟ್ಟಡದ ರೂಪು ಪಡೆಯಿತು ಎಂದರೆ ತಪ್ಪಾಗಲಾರದು.

ಪ್ರಗತಿಶೀಲ ಚಳುವಳಿಯು ಸಾಮಾಜಿಕ ಉದ್ದೇಶಗಳನ್ನು ಇಟ್ಟುಕೊಂಡ ಸಾಹಿತ್ಯಕ ಚಳವಳಿಯೆನ್ನುವುದು ಅದರ ಮುಖ್ಯ ಲಕ್ಷಣ ಎಂದು ಹೇಳಬಹುದು. ಅಲ್ಲದೆ ಪ್ರಗತಿಶೀಲ ಸಾಹಿತ್ಯದ ತಳಹದಿ ಮಾರ್ಕ್ಸ್‌ವಾದ ಎಂಬುದಾಗಿ ತಿಳಿಯುವುದರಿಂದ ಮಾರ್ಕ್ಸವಾದದ ನಿಲುವು "ಕಾರ್ಮಿಕರ ಸರಕಾರವನ್ನು ಸ್ಥಾಪಿಸಿ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನುಂಟುಮಾಡುವುದು ಹಾಗೂ ಪ್ರಗತಿಗೆ ಆತಂಕಕಾರಿಯಾದ ಪ್ರಗತಿ ಆತಂಕಕಾರಿಯಾದ ಪ್ರಗತಿಗಾಮಿ ಶಕ್ತಿಗಳನ್ನು ದಮನಮಾಡಿ ಸಾಮ್ಯವಾದವನ್ನು ಸ್ಥಾಪಿಸುವುದೇ ಮಾರ್ಕ್ಸ್‌ನ ಉದ್ದೇಶವಾಗಿತ್ತು. ಹೀಗೆ ಕ್ರಾಂತಿಕಾರಕವಾಗಿ ಸಾಮಾಜಿಕ ವ್ಯವಸ್ಥೆಯನ್ನು ಮಾರ್ಪಡಿಸಲು ಆಡಳಿತಾತ್ಮಕ ವ್ಯವಸ್ಥೆಯಲ್ಲಿಯೂ ಅಭೂತಪೂರ್ವ ಬದಲಾವಣೆಯಾಗಬೇಕಾದುದರ ಅಗತ್ಯವಿರು- ವುದನ್ನು ಅವನು ಮನಗಂಡನು.

ಮಾರ್ಕ್ಸ್‌ವಾದದ ಅನುಸರಣೆಯಂತೆಯೇ ಸಮತಾವಾದದ ಉದ್ದೇಶ ಸಾಧನೆಗಾಗಿ ಹೋರಾಟ ನಡೆಸಬೇಕಾದುದನ್ನೇ ಪ್ರಗತಿಶೀಲ ಎಂದು ಕರೆಯಲಾಯಿತು. ಪ್ರತ್ಯಕ್ಷ ಜೀವನದಲ್ಲಿ ನಡೆಯಬೇಕಾದ ಈ ಚಳವಳಿಗೆ ಸಾಹಿತ್ಯ ಮಾಧ್ಯಮವಾದಾಗ ಅದು ಪ್ರಗತಿಶೀಲ ಸಾಹಿತ್ಯವೆನಿಸಿತು. ಲೆನಿನನು "The Real art is always linked with great social ideas" ಎಂದು ಹೇಳಿ ಕಲೆಗಳು ಸಾಮಾಜಿಕ ಮುಖವಾಗಿರಬೇಕೆಂದು ಸಾಮಾಜಿಕ ವಿಚಾರಗಳನ್ನು ಒಳಗೊಂಡಿರಬೇಕೆಂದು ಸಾರಿ ಹೇಳಿದನು.

ಪಾಶ್ಚಾತ್ಯ ದೇಶಗಳಲ್ಲಿ ಪ್ರಗತಿಶೀಲ ಲೇಖಕರ ಸಂಘವು ಸ್ಥಾಪನೆಗೊಂಡುದು ಕ್ರಿ.ಶ. ೧೯೩೫ರಲ್ಲಿ ಪ್ಯಾರಿಸ್ಸಿನಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಘಕ್ಕೆ ಇ.ಎಂ.ಫಾರ್ಸ್ಟರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಲಾಯಿತು. ಅಲ್ಲದೆ ಆ ಸಂಘವನ್ನು "ಪ್ರೋಗ್ರೆಸ್ಸಿವ್ ರೈಟರ್ಸ್ ಅಸೋಸಿಯೇಷನ್" ಎಂದು ಕರೆಯಲಾಯಿತು.

೧೯೩೬ರಲ್ಲಿ ಲಖನೌ ನಗರದಲ್ಲಿ ನಡೆದ 'ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಂಘ'ದ ಮೊದಲ ಅಧಿವೇಶನವು ಈ ದೇಶದಲ್ಲಿ ಸಾಂಘಿಕವಾದ ಪ್ರಗತಿಪರ ಚಟುವಟಿಕೆಗಳ ಬೀಜಾರೋಪಣೆ ಮಾಡಿತು. ಆ ವೇಳೆಗಾಗಲೇ ಅಂತಹ ಕೃತಿಗಳ ರಚನೆಯಲ್ಲಿ ತೊಡಗಿದ್ದ ಲೇಖಕರಿಂದ ಪ್ರೇರಣೆಯನ್ನು ಪಡೆದಂತೆಯೇ ಅವರಲ್ಲಿ ಕೆಲವರ ನಾಯಕತ್ವವನ್ನು ಈ ಚಳವಳಿಯು ಪಡೆಯಿತು. ಪ್ರೇಮ್‌ಚಂದ್, ಆಚಾರ್ಯ ನರೇಂದ್ರದೇವ್, ಕಾಕಾ ಕಾಲೇಲ್ಕರ್, ಮುಲ್ಕರಾಜ್ ಆನಂದ್, ಸುಮಿತ್ರಾನಂದನ್ ಪಂಥ್, ಉಮಾಶಂಕರಜೋಶಿ ಮುಂತಾದ ಹೆಸರುಗಳನ್ನು ಗಮನಿಸಿದಾಗ ಇಲ್ಲಿ ಸಾಹಿತಿಗಳ ಹಾಗೆಯೇ ಸಾಮಾಜಿಕ ಮುಂದಾಳುಗಳು ಭಾಗಿಯಾಗಿರುವುದನ್ನು ಗಮನಿಸಬಹುದು.

೧೯೩೮ರಿಂದ ೧೯೪೩ರ ಅವಧಿಯಲ್ಲಿ ನಡೆದ ಪ್ರಗತಿಶೀಲ ಅಧಿವೇಶನಗಳ ವರದಿಯಿಂದ ಸ್ಪಷ್ಟವಾಗುವಂತೆ ಚಳವಳಿಯು ಭದ್ರವಾದ ಬೇರುಗಳನ್ನು ಬಿಡುವುದಕ್ಕೆ ಮುಂಚಿತವಾಗಿಯೇ ಪರಸ್ಪರ ವಿರುದ್ಧವಾದ ಸೆಳೆತಗಳನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಕಮ್ಯುನಿಸ್ಟ್ ಪರವಾದ ಹಾಗೂ ವಿರೋಧಿಯಾದ ನಿಲುವುಗಳಿದ್ದುದನ್ನು ಗಮನಿಸಬಹುದು. ಅಲ್ಲದೆ ಕೆ.ಎ.ಅಬ್ಬಾಸ್, ವರಾಮಾ ವರೇರ್ಕರ್, ಬಿಷ್ಣುಡೇ ಮುಂತಾದವರು ಒಂದು ಕಡೆ ಇದ್ದರೆ ಹೀರಾಲಾಲ್ ವಾತ್ಸಾಯನ್ (ಅಜ್ಞೇಯ), ಮುಲ್ಕರಾಜ್ ಆನಂದ್ ಮುಂತಾದವರು ಕಮ್ಯುನಿಸಂ ಅನ್ನು ನಿರಾಕರಿಸಿದರು. ಈ ಗುಂಪುಗಳ ನಡುವಿನ ಘರ್ಷಣೆಯು ಕನ್ನಡದಲ್ಲಿ ಪ್ರತಿಫಲಿತವಾಗಿದೆ. ಈ ರೀತಿ ಸಮತಾವಾದ, ಸಮಾಜವಾದ, ಗಾಂಧೀವಾದ ಹಾಗೂ ಅಂಬೇಡ್ಕರ್‌ವಾದಗಳನ್ನು ಪುರಸ್ಕರಿಸುವುದರ ಮೂಲಕ ಸ್ಥೂಲವಾಗಿ ಜನಪರತೆಯ ನೆಲೆಗಳನ್ನು ಉಳಿಸಿಕೊಂಡರೂ ತಾತ್ವಿಕತೆ ಮತ್ತು ಕಾರ್ಯವಿಧಾನಗಳ ನೆಲೆಯಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳನ್ನು ಹೊಂದಿರುವ ವಾಸ್ತವ ಅಂಶವನ್ನು ಪ್ರಗತಿಶೀಲ ಸಾಹಿತ್ಯದಲ್ಲಿ ಕಾಣಬಹುದು.

ಡಿಸೆಂಬರ್ ೧೯೫೩ರಲ್ಲಿ ಕರ್ನಾಟಕದಲ್ಲಿ "ಕನ್ನಡನಾಡಿನ ಪ್ರಗತಿಶೀಲ ಲೇಖಕರ ಸಂಘ' ಅಸ್ತಿತ್ವಕ್ಕೆ ಬಂದಿತು. ಇದರ ಅಧ್ಯಕ್ಷ ಜವಾಬ್ದಾರಿಯನ್ನು ಅನಕೃ ಹೊತ್ತರು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಶ್ರೀರಂಗರು ಕಾರ್ಯದರ್ಶಿಗಳಾಗಿ ಎ.ಎಂ.ಇನಾಂದಾರ್ ಮತ್ತು ಕೃಷ್ಣಕುಮಾರ್ ಕಲ್ಲೂರ್ ನೇಮಕವಾದರು. ನಾಡಿಗೇರ ಕೃಷ್ಣರಾಯ, ಕುಮಾರವೆಂಕಣ್ಣ ಎಸ್.ಅನಂತನಾರಾಯಣ, ಅರ್ಚಕ ವೆಂಕಟೇಶ್, ತ.ರಾ.ಸು, ಚದುರಂಗ, ಬಸವರಾಜ ಕಟ್ಟೀಮನಿ, ನಿರಂಜನ ಮೊದಲಾದವರು ಈ ಚಳುವಳಿಯ ಪ್ರಮುಖ ಬರಹಗಾರರಾಗಿದ್ದಾರೆ. ಬೆಂಗಳೂರಿನಂತೆಯೇ ಧಾರವಾಡ, ಮಂಗಳೂರುಗಳಲ್ಲಿಯೂ ಇದರ ಶಾಖೆಗಳು ಕಾಣಿಸಿಕೊಂಡವು. ಪ್ರಾರಂಭದಲ್ಲಿ ಕಂಡ ರಭಸ ನಿಧಾನವಾಗಿ ಕಡಿಮೆಯಾಯಿತು ಎನ್ನಬಹುದು. ಅಲ್ಲದೆ ಈ ಲೇಖಕರ ಬರಹದಲ್ಲಿ ಕಾಣಿಸಿಕೊಂಡ ಪ್ರಗತಿಶೀಲ ನೆಲೆಗಳು ನಿಧಾನವಾಗಿ ಮಾಯವಾದವು. ಹೆಚ್.ಎಸ್.ರಾಘವೇಂದ್ರರಾವ್‌ರವರು ಹೇಳುವಂತೆ "ಪ್ರಗತಿಶೀಲ ಸಾಹಿತ್ಯ ತಮಗಿಂತ ಹಿಂದೆಯೇ ಬರೆಯತೊಡಗಿದ್ದ ಜನಪರ ಕವಿಗಳಾದ ಕುವೆಂಪು, ಕಾರಂತ ಮುಂತಾದ ಅನೇಕ ಲೇಖಕರನ್ನು ಅನಗತ್ಯವಾಗಿ ಟೀಕಿಸುವುದರ ಮೂಲಕ ಈ ಚಳವಳಿಯು ತನಗಿದ್ದ ಒಳ್ಳೆಯ ಮಾದರಿಗಳನ್ನು ನಿರ್ಲಕ್ಷಿಸಿತು."[೧]

ಪ್ಯಾರಿಸ್‌ನಲ್ಲಿ ಆಗಿಹೋದ ಸಿದ್ಧಾಂತಗಳನ್ನು ಅಧ್ಯಯನಮಾಡಿ ಅವುಗಳನ್ನು ಭಾರತೀಯ ಸಂದರ್ಭಕ್ಕೆ ಅಳವಡಿಸಿಕೊಳ್ಳಲಾಯಿತಾದರೂ ಇದು ಮೊದಲು ಕಾಣಿಸಿಕೊಂಡದ್ದು ಬಂಗಾಳಿ ಮತ್ತು ಹಿಂದಿ ಭಾಷೆಯಲ್ಲಿ. ನಂತರ ಇತರ ಭಾಷೆಗಳಲ್ಲಿ ಕಾಣಿಸಿಕೊಂಡಿತು. ಅಲ್ಲದೆ ಮಾರ್ಕ್ಸ್ ಮತ್ತು ಲೆನಿನ್‌ರ ಕೃತಿಗಳ ಅಧ್ಯಯನದಿಂದ ಬಂಗಾಳ ಮತ್ತು ಹಿಂದಿ ಸಾಹಿತ್ಯಕ್ಕಿಂತ ಭಿನ್ನವಾಗಿ ಕನ್ನಡದಲ್ಲಿ ಮೂಡಿಬಂದಿತು. ಬರಹಗಾರರು "ಕಲೆಗಾಗಿ ಕಲೆ ಅಲ್ಲ" ಎಂಬುದನ್ನು ತಮ್ಮ ನಿಲುವನ್ನು ಬರಹದ ಮೂಲಕ ತೋರಿಸಿಕೊಟ್ಟರು. ಈ ಹಿನ್ನೆಲೆಯಲ್ಲಿ ಸಮಸ್ಯೆಗಳ ನಿವಾರಣೆಗೆ ಪ್ರಗತಿಶೀಲರು ಪ್ರಯತ್ನಿಸಿದರಾದರೂ ಬದ್ಧತೆ ಮತ್ತು ಜವಾಬ್ದಾರಿಗಳ ವಿಶೇಷತೆಯಿಂದ ಎರಡು ಪಂಥಗಳು ಪ್ರಗತಿಶೀಲರಲ್ಲಿ ಕಾಣಿಸಿಕೊಂಡವು. ಅವುಗಳೆಂದರೆ

೧) ಮಾರ್ಕ್ಸ್‌ವಾದಕ್ಕೆ ಅಥವಾ ಎಡಪಂಥೀಯ ವಾದಕ್ಕೆ ಮಾರು ಹೋದವರು.

೨) ಮಾರ್ಕ್ಸ್‌ವಾದವನ್ನು ವಿರೋಧಿಸುವ ಪ್ರಗತಿ ವಿರೋಧಿಗಳು.

---

೧. ೨೦ನೇ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು, ಸಂ. ಬಸವರಾಜ ಸಾದರ, ಪು. ೭೭.

ಅದೇನೆ ಇರಲಿ ಮಾರ್ಕ್ಸ್ ಮತ್ತು ಲೆನಿನ್‌ರ ತತ್ವಗಳಲ್ಲಿ ನಂಬಿಕೆ ಇದ್ದಂತಹ ಅ.ನ.ಕೃ. ತ.ರಾ.ಸು., ಬಸವರಾಜ ಕಟ್ಟೀಮನಿ, ಚದುರಂಗ, ನಿರಂಜನ ಮುಂತಾದವರು ರಾಜ್ಯಾದ್ಯಂತ ಬರಹ ಸಭೆ, ಅಧಿವೇಶನಗಳಿಂದ ಪ್ರಗತಿಶೀಲ ಧೋರಣೆಗಳನ್ನು ಹರಡಿದರು. ಆದರೆ ಅಖಿಲ ಭಾರತ ಮಟ್ಟದಲ್ಲಿ ಕಾಣಿಸಿಕೊಂಡ ಬಿರುಕು ಮತ್ತು ಒಳಜಗಳ ಕರ್ನಾಟಕದಲ್ಲೂ ಬಹುಬೇಗ ಕಾಣಿಸಕೊಂಡವು. ಕಮ್ಯುನಿಸ್ಟ್ ಪರವಾದ ಗುಂಪಿನ ನಾಯಕರಾಗಿ ನಿರಂಜನರು, ಇನ್ನೊಂದು ಬಣದ ನಾಯಕರಾಗಿ ಅ.ನ.ಕೃ ಅವರು ಕಾಣಿಸಿಕೊಂಡರು. ಸಾಹಿತ್ಯ ಕೃತಿಗಳಲ್ಲಿ ಅಶ್ಲೀಲತೆ ಮತ್ತು ಅವತಾರ ಹಾಗೂ ಯಥಾಸ್ಥಿತಿ ಸಮರ್ಥನೆಯನ್ನು ನಿರಂಜನರು ಖಂಡಿಸಿದರು. ಒಟ್ಟಾರೆ ೧೯೫೨ರ ವೇಳೆಗೆ ಪ್ರಗತಿಶೀಲ ಲೇಖಕರ ಸಂಘವು ತನ್ನ ಕೊನೆಯುಸಿರನ್ನು ಎಳೆಯಿತು ಎನ್ನಬಹುದು.

ಆ) ಪ್ರಗತಿಶೀಲ ಸಾಹಿತ್ಯದ ಧೋರಣೆಗಳು

೧) ಪ್ರಗತಿಶೀಲ ಸಾಹಿತ್ಯವು ಸಾಮಾಜಿಕ ಸಮಸ್ಯೆಗಳಾದ ಹಸಿವು, ಬಡತನ, ವೇಶ್ಯಾಸಮಸ್ಯೆ ಮುಂತಾದವುಗಳು ಈ ಸಾಹಿತ್ಯದಲ್ಲಿ ಒಡಮೂಡಿ ಬಂದಿರುವುದನ್ನು ಕಾಣಬಹುದು.

೨) ಶೋಷಣೆಯ ವಿರುದ್ಧ ಪ್ರತಿಭಟಿಸುವುದು, ಸಾಮಾಜಿಕ ಸುಧಾರಣೆಯತ್ತ ಗಮನ ನೀಡುವುದು.

೩) ವಾಸ್ತವದ ಬದುಕಿಗೆ ಮೊದಲ ಆದ್ಯತೆ ನೀಡುವುದು.

೪) ಸಿದ್ಧಾಂತ ಮತ್ತು ಸಿದ್ದಾಂತಗಳ ಹಿನ್ನೆಲೆಯಲ್ಲಿ ಬಂಡವಾಳಗಾರರು, ಜಮೀನುದಾರರು, ಅಧಿಕಾರಿ ವರ್ಗದ ಅಪವಿತ್ರ ಮೈತ್ರಿಯನ್ನು ವಿರೋಧಿಸಿ ಸಾಹಿತ್ಯ ರಚಿಸುವುದು.

೫) ಪ್ರಗತಿಶೀಲ ಚಳವಳಿಯ ಕಾಳಜಿಯ ಕೇಂದ್ರವಾಗಿ ಶ್ರಮಿಕ ಮತ್ತು ಕೃಷಿಕ ಸಮಾಜವನ್ನು ಚಿತ್ರಿಸುವುದು ಹಾಗೂ ಉದ್ಯಮ ಅಥವಾ ದುಡಿಯುವ ವರ್ಗದ ಜನಸಾಮಾನ್ಯರ ತಲ್ಲಣಗಳ ಚಿತ್ರಣ ನೀಡಿರುವುದು ಅದರ ಪ್ರಮುಖ ಲಕ್ಷಣ.

೬) ಪ್ರಗತಿಶೀಲ ಸಾಹಿತ್ಯ ತಮ್ಮ ಸಾಹಿತ್ಯ ರಚನೆಗೆ ಆರಿಸಿಕೊಂಡ ಮಾರ್ಗ ಹೆಚ್ಚಾಗಿ ಕತೆ, ಕಾದಂಬರಿಗಳಾಗಿದ್ದು ಇದು ಜನರ ಓದುವ ಅಭಿರುಚಿಯನ್ನು

ವೃದ್ಧಿಗೊಳಿಸಿದ್ದಲ್ಲದೆ ಆ ಮೂಲಕ ಸಾಮಾಜಿಕ ಸಮಸ್ಯೆಗಳತ್ತ ಜನಸಾಮಾನ್ಯರ ಗಮನ ಸೆಳೆದದ್ದು.

೭) ಸ್ವತಂತ್ರಪೂರ್ವದ ಮತ್ತು ಸ್ವತಂತ್ರ ನಂತರದ ಸಮಯದಲ್ಲಿದ್ದ ಊಳಿಗಮಾನ್ಯ ಪದ್ಧತಿ, ಭೂಮಾಲೀಕತ್ವ, ಕಾರ್ಮಿಕ ಶೋಷಣೆಗಳನ್ನು ತಮ್ಮ ಬರಹದ ವಸ್ತುವಾಗಿ ಮಾಡಿಕೊಂಡದ್ದು.

೮) ಪರಂಪರಾಗತ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನೆಮಾಡುವ ಸಾಹಿತ್ಯ ಸೃಷ್ಟಿಸಿದ್ದು.

೯) ನವೋದಯ ಸಾಹಿತ್ಯಕ್ಕಿಂತ ಭಿನ್ನವಾಗಿ ಬರಹಗಳ ನಿರೂಪಣೆಯಲ್ಲಿ ಆಕ್ರೋಶ, ಸಿಟ್ಟು, ಸಾಮಾಜಿಕ ನ್ಯಾಯ, ಕಾಳಜಿಗಳನ್ನು ಪ್ರಧಾನವಾಗಿ ಚಿತ್ರಿಸಿದ್ದು.

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ತಿಳಿದುಬರುವ ಎರಡು ಅಂಶಗಳೆಂದರೆ ಪ್ರಗತಿಶೀಲ ಸಾಹಿತಿಗಳು ಮಾದರಿಯಾಗಿ ಆರಿಸಿಕೊಂಡದ್ದು.

ಅ) ಕ್ರಾಂತಿ ನಡೆಯದ ಬಂಡವಾಳಶಾಹಿ ದೇಶಗಳ ಪ್ರಗತಿಪರ ಲೇಖಕರ ಮಾದರಿ.

ಆ) ಕ್ರಾಂತಿ ನಡೆದ ಸಮಾಜವಾದಿ ರಾಷ್ಟ್ರಗಳ ಲೇಖಕರ ಮಾದರಿ.

ಇವೆರಡೂ ದೇಶಗಳ ಲಕ್ಷಣಗಳನ್ನು ಪ್ರಗತಿಶೀಲರು ತಮ್ಮ ಸಾಹಿತ್ಯ ಸೃಜನೆಯ ಭಾಗವಾಗಿ ಬಳಸಿಕೊಂಡರಲ್ಲದೆ ಅವರು ನವೋದಯರಂತೆ ಕಾವ್ಯಪ್ರಕಾರಕ್ಕೆ ಹೆಚ್ಚು ಒತ್ತು ನೀಡದೆ ಪ್ರಗತಿಶೀಲ ಚಳುವಳಿಯ ಆಸಕ್ತಿ ಮತ್ತು ಸಾಧನೆಗಳು ಕಥಾಸಾಹಿತ್ಯಕ್ಕೆ ಅದರಲ್ಲಿಯೂ ಕಾದಂಬರಿಗಳಿಗೆ ಸೀಮಿತವಾಯಿತೆಂದರೆ ತಪ್ಪಾಗಲಾರದು. ಇದಕ್ಕೆ ಕಾರಣಗಳೆಂದರೆ ಮನುಕುಲದ ಹಾಡುಪಾಡುಗಳನ್ನು ಮೂರ್ತವಾದ ವಿವರಗಳ ಮೂಲಕ ಚಿತ್ರಿಸಲು ಆ ಮಾಧ್ಯಮಗಳು ಹೆಚ್ಚು ಸೂಕ್ತವಾದವು. ಅಲ್ಲದೆ ಪ್ರಗತಿಶೀಲ ಸಾಹಿತಿಗಳು ಆರಿಸಿಕೊಂಡ ಸಾಹಿತ್ಯಿಕ ಮಾದರಿಗಳು ಸಹ ಸಮಾಜವಾದಿ, ವಾಸ್ತವತೆ ಅಥವಾ ನ್ಯಾಚುರಲಿಸಂನ ನೆಲೆಯಿಂದ ಮೂಡಿಬಂದು ೨೦ನೇ ಶತಮಾನವನ್ನು "ಕಾದಂಬರಿಗಳ ಯುಗ" ಎಂದು ಕರೆಯುವ ರೀತಿ ಒಂದು ಓದುವ ವರ್ಗವನ್ನು ನಿರ್ಮಿಸಿತು. ಕನ್ನಡ ಸಾಹಿತ್ಯದ ಪ್ರಮುಖ ಘಟ್ಟವಾದ ನವೋದಯ ಸಾಹಿತ್ಯಕ್ಕೆ ಇರುವಂತೆ ಪ್ರಗತಿಶೀಲ ಸಾಹಿತ್ಯಕ್ಕೂ ತನ್ನದೇ ಆದ ಮಿತಿಗಳಿರುವುದನ್ನು

ಗಮನಿಸಬಹುದು. ಒಟ್ಟಾರೆಯಾಗಿ ಪ್ರಗತಿಶೀಲ ಸಾಹಿತ್ಯವನ್ನು ವಿಶ್ಲೇಷಣೆ ಮಾಡಿದಾಗ ತಿಳಿದುಬರುವ ಅಂಶಗಳೆಂದರೆ

೧) ಪ್ರಗತಿಶೀಲ ಚಳವಳಿ ಒಂದು ಖಚಿತವಾದ ಅಂಗರಚನೆಯುಳ್ಳ ಚಳವಳಿಯಾಗಿ ಪ್ರಾರಂಭವಾಯಿತಾದರೂ, ತನ್ನ ಚಳವಳಿಯ ಜೊತೆಯಾಗ ಹೆಜ್ಜೆಹಾಕಿ ತನಗೆ ಶಕ್ತಿ ನೀಡಬಲ್ಲ ಸಾಮಾಜಿಕ, ರಾಜಕೀಯ ಚಳವಳಿಗಳ ಸಾಂಗತ್ಯವನ್ನು ಈ ಸಾಹಿತ್ಯ ಪಡೆದಿರಲಿಲ್ಲ.

೨) ಪ್ರಗತಿಶೀಲ ಚಳವಳಿಯ ಕಾಳಜಿಗಳ ಕೇಂದ್ರವು ಶ್ರಮಿಕವರ್ಗ ಮತ್ತು ಕೃಷಿಕ ವರ್ಗಗಳಾದರೂ ಅದರಲ್ಲಿ ತೊಡಗಿಸಿಕೊಂಡ ಲೇಖಕರು ಮಧ್ಯಮವರ್ಗದಿಂದ ಬಂದವರೇ ಆಗಿದ್ದರು. ಆದರೆ ಅವರು ಉನ್ನತ ಶಿಕ್ಷಣ ಪಡೆದವರೂ ಆಗರ್ಭ ಶ್ರೀಮಂತರೂ ಆಗಿರಲಿಲ್ಲ (ಚದುರಂಗರನ್ನು ಹೊರತುಪಡಿಸಿ)

೩) ಈ ಕಾಲಘಟ್ಟದ ಲೇಖಕರು ಸಾವಿರಾರು ಪುಸ್ತಕಗಳನ್ನು ಓದಿರಬಹುದು. ಆದರೆ ಅದೆಲ್ಲದರ ನೆರವಿನಿಂದ ಒಂದು ಆಲೋಚನಾಕ್ರಮವನ್ನು ರೂಪಿಸಿಕೊಳ್ಳಲು ಅಗತ್ಯವಾದ ಬೌದ್ಧಿಕ ಶಿಸ್ತು ಅವರಿಗೆ ಇರಲಿಲ್ಲ. ಅಲ್ಲದೆ ಅವರು ಮಾರ್ಕ್ಸ್‌ವಾದವನ್ನು ಗ್ರಹಿಸಿದ ರೀತಿ ಕೂಡ ಹೀಗೆಯೇ ಮೇಲುಮೇಲಿನದೂ ಅತಿ ಸರಳೀಕೃತವಾದದೂ ಆಗಿತ್ತು.

೪) ಪ್ರಗತಿಶೀಲ ಕಾಲಘಟ್ಟದಲ್ಲಿ ಈ ಚಳವಳಿಗಿಂತ ಹೆಚ್ಚು ತುರ್ತು ಎನಿಸುತ್ತಿದ್ದ ಒಂದೆರಡು ಚಳವಳಿಗಳು ಆಗ ಕರ್ನಾಟಕದಲ್ಲಿ ಪ್ರವೃತ್ತವಾಗಿದ್ದವು; ಅವುಗಳೆಂದರೆ ಸ್ವಾತಂತ್ರ್ಯ ಹೋರಾಟ. ಏಕೀಕರಣ ಚಳವಳಿ. ಅಲ್ಲದೆ ಸಾಹಿತ್ಯಕ ಚಳುವಳಿಗೆ ವಿಶೇಷ ಶಕ್ತಿ ಕೊಡುವ ವಿಶ್ವವಿದ್ಯಾಲಯ, ಅಧಿಕಾರಿವರ್ಗ, ರಾಜಕೀಯಪಕ್ಷ ಮುಂತಾದವುಗಳ ಬೆಂಬಲವು ಈ ಚಳವಳಿಗೆ ಇರಲಿಲ್ಲ. ಅದರ ಬದಲಾಗಿ ಅಂತಹ ಶಕ್ತಿಗಳೊಂದಿಗೆ ವಿರೋಧದ ನೆಲೆಗಳೇ ರೂಪಿತವಾಗಿದ್ದವು. ಈ ಎಲ್ಲ ಅಂಶಗಳು ಪ್ರಗತಿಶೀಲ ಚಳವಳಿಯು ತನ್ನ ಪ್ರಖರತೆ ಕಳೆದುಕೊಳ್ಳಲು ಕಾರಣಗಳಾದವು. ಇಷ್ಟಾದರು ಪ್ರಗತಿಶೀಲ ಸಾಹಿತ್ಯವು ತನ್ನದೇ ಆದ ವಾಚಕವರ್ಗವನ್ನು ಪಡೆದುಕೊಂಡಿದ್ದು "೨೦ನೇ ಶತಮಾನವನ್ನು ಕಾದಂಬರಿಗಳ ಯುಗ" ಎಂದು ಕರೆಯುವ ಮಟ್ಟಿಗೆ ಅದು ಯಶಸ್ವಿಯಾಯಿತು. ಈ ಓದುಗರು ಜನಪ್ರಿಯ ಸಾಹಿತ್ಯದ ಹೆಸರಿನಲ್ಲಿ ಬರತೊಡಗಿದ ಕಾದಂಬರಿಗಳ ಮಹಾಪೂರದ

ಕಡೆಗೆ ಚಲಿಸಿದರು. ಅದರ ಜೊತೆ ಕತೆಗಳು ಕೂಡ ಪ್ರಮುಖ ಮಾಧ್ಯಮವಾದವು. ಹೀಗೆ ಪ್ರಗತಿಶೀಲ ಕಾಲಘಟ್ಟದಲ್ಲಿ ಕಥೆ, ಕಾದಂಬರಿ, ಸಾಹಿತ್ಯ ತನ್ನದೇ ಆದ ಪ್ರಾಮುಖ್ಯತೆ ಪಡೆದವು. ಆದರೆ ಈ ಕಾಲಘಟ್ಟದಲ್ಲಿ ಕಾವ್ಯ,ನಾಟಕ ಪ್ರಕಾರ ಬರಲಿಲ್ಲವೆಂದು ಹೇಳಲಾಗುವುದಿಲ್ಲ. ಬದಲಿಗೆ ಸಂಖ್ಯೆಯ ದೃಷ್ಟಿಯಿಂದ ಗಮನಿಸಿದಾಗ ಕಡಿಮೆ ಎನ್ನುವುದು ತೋರುತ್ತದೆ.

ಅಧ್ಯಾಯ – ೩
ಸಣ್ಣಕಥೆ ಪ್ರಕಾರ, ಹುಟ್ಟು, ಬೆಳವಣಿಗೆ

ಪ್ರೇರಣೆ ಪ್ರಭಾವ ಸಣ್ಣಕಥೆ ಕುರಿತಾಗಿ

ಹೆಸರೇ ಸೂಚಿಸುವಂತೆ 'ಸಣ್ಣಕತೆಯ ಪರಿಕಲ್ಪನೆಯೇ ಸಾಪೇಕ್ಷವಾದದು. "ಕಥೆ" ಎಂದರೇನು ಎನ್ನುವುದು ಸ್ಪಷ್ಟವಾಗದೇ ಸಣ್ಣಕತೆಯ ಸ್ವರೂಪ ತಿಳಿಯುವುದಿಲ್ಲ. "ಕಥೆ" ಕೂಡ ಕಥನಸಾಹಿತ್ಯದ ಒಂದು ಪ್ರಕಾರವಾದುದರಿಂದ 'ಕಥನ'ದ ವ್ಯಾಖ್ಯೆಯು ನಮಗೆ ಅಗತ್ಯವಾಗುತ್ತದೆ. ಈಗಿದ್ದ ರೂಪದಲ್ಲಿ ಕನ್ನಡ ಸಣ್ಣಕಥೆಗೆ ಪ್ರೇರಣೆ ಪಶ್ಚಿಮದಿಂದ ದೊರೆತಿರುವುದು ನಿಜವಾದರು ಅದರ ಬೇರುಗಳು ಭಾರತೀಯ ಕಥನ ಪರಂಪರೆಯಲ್ಲಿರುವುದರಿಂದ ಸಣ್ಣಕತೆಯನ್ನು ಕುರಿತ ಪಾಶ್ಚಿಮಾತ್ಯ ಕಲ್ಪನೆಗಳು ನಮಗೆ ಪರ್ಯಾಪ್ತವಾಗಲಾರವು. ಉದಾಹರಣೆಗೆ[೧] "ಸಣ್ಣಕಥೆ ತನ್ನ ಸ್ವರೂಪದಲ್ಲಿ ಜನಾಂಗ-ದಿಂದ ಜನಸಮುದಾಯದಿಂದ ದೂರವಾದದ್ದು" ಎನ್ನುವ ಫ್ರಾಂಕ್ ಓಕೋನರನ ಹೇಳಿಕೆಯನ್ನೇ ನೋಡಬಹುದು (Oconnor 1965, 21) ಮೌಖಿಕ ಪರಂಪರೆ-ಯಲ್ಲಿಯೇ ಬೆಳೆದುಬಂದ ಕನ್ನಡ ಸಣ್ಣಕತೆಯ ಸಂದರ್ಭದಲ್ಲಿ ಈ ಹೇಳಿಕೆ ಅಸಂಬದ್ಧವಾಗಿ ತೋರಿದರೆ ಆಶ್ಚರ್ಯವಿಲ್ಲ.

ಕಥನ ಸಾಹಿತ್ಯಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸ್ಥಾನವನ್ನು ನೀಡಿದೆ ಹಾಗೂ ಕಥನ ಸಾಹಿತ್ಯ ಇಲ್ಲಿ ದೊರಕಿರುವ ಪ್ರಮಾಣದಷ್ಟು ಬೇರೆಲ್ಲೂ ದೊರಕಲಾರವು. ವೇದ ಉಪನಿಷತ್ತುಗಳಲ್ಲಿ ಬರುವ ಕತೆಗಳು ಭಾಗವತ ಮೊದಲಾದ ಪುರಾಣಗಳು ರಾಮಾಯಣ ಮಹಾಭಾರತದಂಥ ಇತಿಹಾಸ ಕಾವ್ಯಗಳು "ರಘುವಂಶ"ದಂಥ ಮಹಾಕಾವ್ಯಗಳು "ಪಂಚತಂತ್ರ' ಹಿತೋಪದೇಶಗಳಂಥ ನೀತಿಕಥೆಗಳಿಂದ, ಕಥಾಸರಿತ್ಸಾಗರ, ಪರಿಕಥೆಗಳು, ಜಾತಕ ಕಥೆಗಳು, ಜೈನಕಥಾಸಾಹಿತ್ಯ, ಭಾರತದ ಎಲ್ಲ ಭಾಷೆಗಳಲ್ಲೂ ದೊರೆಯುವ ಜಾನಪದ ಕಥೆಗಳು ಹೀಗೆ ಕಥನ ಪ್ರಪಂಚದ ವಿಸ್ತಾರವಿದೆ. ಇವೆಲ್ಲ ಕಥನದ ಬೇರೆ ಬೇರೆ ಮಾದರಿಗಳಾದ್ದರಿಂದ ಈ ಕಥನ ಪ್ರಪಂಚ ವಿಸ್ತಾರದೊಂದಿಗೆ ವೈವಿಧ್ಯವನ್ನು ಹೊಂದಿದೆ.

ಭಾರತೀಯ ಕಥನ ಸಾಹಿತ್ಯದ ಉದ್ದೇಶ ಎಂದೂ ಕೇವಲ ಮನರಂಜನೆಯೊಂದೇ ಆಗಿರಲಿಲ್ಲ. ವೇದವ್ಯಾಸ ಮಹರ್ಷಿಯೇ ಸೂಚಿಸಿದಂತೆ,

---

೧. ಕನ್ನಡ ಕಥನಸಾಹಿತ್ಯ, ಸಣ್ಣಕತೆ, ಜಿ.ಎಸ್.ಆಮೂರ, ಪು. ೨.

ಮಹಾಭಾರತ, ರಾಮಾಯಣಗಳಂಥ ಇತಿಹಾಸಗಳಲ್ಲಿ ಹಾಗೂ ಪುರಾಣಗಳಲ್ಲಿ ವೇದದ ಜ್ಞಾನವೇ ಅಡಗಿದೆ ಎಂಬುದಾಗಿ ತಿಳಿಸಿದ್ದಾರೆ. ಕೆ.ಭುಜಬಲಶಾಸ್ತ್ರಿಗಳು ಜೈನಕಥೆಗಳ ಬಗ್ಗೆ ಹೇಳುತ್ತ "ಜೈನ ಕಥೆಗಳು ವಿಶುದ್ದ ಭಾರತೀಯ ಕಥೆಗಳಾಗಿದ್ದು ಪರ್ಯಾಪ್ತ ಸಂಖ್ಯೆಯಲ್ಲಿ ಪೂರ್ಣಮೌಲಿಕವಾಗಿರುವುವು. ಅಲ್ಲದೆ ಜೈನ ಕಥಾಕಾರನು ಲೀಲಾಜಾಲವಾಗಿ ತನ್ನ ರೋಚಕ ಶೈಲಿಯಲ್ಲಿ ಹೇಳುತ್ತಾ ಹೋಗುತ್ತಾನೆ. ಪ್ರತಿಯೊಂದು ಕತೆಯ ಕೊನೆಯಲ್ಲಿ ಪ್ರಸಂಗದ ತತ್ವದ ಪ್ರದರ್ಶನ ಅಥವಾ ಪುಣ್ಯದ ಸುಫಲ ಹಾಗೂ ಪಾಪದ ಕುಫಲದ ಕಡೆ ಸಂಕೇತ ಮಾತ್ರ ಇದ್ದೇ ಇರುವುದು. ಕಥೆಯಿಂದ ಯಾವುದಾದರೊಂದು ನಿಷ್ಕರ್ಷವನ್ನು ಕಡೆದು ಕಥಾಕಾರನು ಪ್ರಸ್ತುತ ಕಥೆಯು ಇಂತಹ ಒಂದು ಧಾರ್ಮಿಕ ಮಾನ್ಯತೆ ಅಥವಾ ಸಿದ್ಧಾಂತಕ್ಕೆ ಇವು ದೃಷ್ಟಾಂತವಾಗಿವೆಯೆಂದು ಸೂಚಿಸುತ್ತಾನೆ"[೧] ಎಂದು ವಿವರಿಸಿದ್ದಾರೆ.

ಕಥೆಗಳ ಮೇಲೆ ಬಹಳ ಪ್ರಭಾವ ಇರುವುದು ಜಾನಪದದಿಂದ ಜಾನಪದ ಕತೆಗಳು ಬರಹಕ್ಕಿಳಿಸಿದಾಗ ತಮ್ಮ ಸತ್ವವನ್ನು ಕೆಲಮಟ್ಟಿಗೆ ಕಳೆದುಕೊಳ್ಳುತ್ತವೆಯಾದರೂ ಅವು ಭಾರತೀಯ ಪ್ರತಿಭೆಯ ಶ್ರೇಷ್ಠ ನಿದರ್ಶನಗಳಾಗಿವೆಯೆನ್ನುವುದನ್ನು ವಿದ್ವಾಂಸರು ಒಪ್ಪಿಕೊಂಡಿದ್ದಾರೆ.[೨] ಜಾನಪದ ಸಾಹಿತ್ಯದ ಪ್ರಸ್ತುತತೆಯನ್ನು ಕುರಿತು "ಜಿ.ಎನ್.ದೇವಿ ಹೇಳುವ ಮಾತು ಹೀಗಿವೆ. "ಭಾರತೀಯ ಸಾಹಿತ್ಯ ಕಳೆದ ಎರಡು ಶತಮಾನಗಳಲ್ಲಿ ಪಾಶ್ಚಾತ್ಯ ಮೂಲದ "Prespective" ಕಲ್ಪನೆಯ ಬಾರದಲ್ಲಿ ನರಳಿದೆ. ಪಾಶ್ಚಾತ್ಯ ಜ್ಞಾನಮಾರ್ಗಗಳು ನಮ್ಮ ಜ್ಞಾನಮಾರ್ಗಗಳ ಸ್ಥಾನವನ್ನು ಆಕ್ರಮಿಸಿಕೊಂಡಿರುವುದರಿಂದ ಆದಿವಾಸಿ ಕಲ್ಪನೆಯೊಂದೇ ವಸಾಹತೀ ಚಿಂತನಾಕ್ರಮದಿಂದ ಮುಕ್ತವಾಗಿ ಉಳಿದಿದೆ".

ಭಾರತೀಯ ಕಥನಗಳ ಪಾರಂಪರಿಕ ಉದ್ದೇಶಗಳನ್ನು ವಿದ್ಯಾನಿವಾಸ ಮಿಶ್ರರು ಹೀಗೆ ವಿವರಿಸುತ್ತಾರೆ.

೧. ಆಶಯ ಆಕೃತಿಗಳ ಸಾಂಗತ್ಯದ ಮೂಲಕ ಬದುಕಿನ ಸಮಗ್ರತೆಯ ದರ್ಶನ.

೨. ದೈಹಿಕ, ಮಾನಸಿಕ ಹಾಗೂ ವಾಚಕ ಕ್ರಿಯೆಗಳ ಏಕೀಕರಣದಿಂದ ಭಾಗಗಳನ್ನು ಇಡಿಯಾದುದರಲ್ಲಿ ಮತ್ತೆ ಸೇರಿಸುವುದು.

೩. ಮನುಷ್ಯನ ಸಮಸ್ಯೆಗಳಿಗೆ ಸಮುದಾಯದ ನೆಲೆಯಲ್ಲಿ ಹಾಗೂ ಸಮುದಾಯದ ಪ್ರಯತ್ನದಿಂದ ಪರಿಹಾರ ಕಂಡುಹಿಡಿಯುವುದು.

---

೧. ಕನ್ನಡ ಕಥನಸಾಹಿತ್ಯ, ಸಣ್ಣಕತೆ, ಜಿ.ಎಸ್.ಆಮೂರ, ಪು. ೨.

೨. ಕನ್ನಡ ಕಥನಸಾಹಿತ್ಯ, ಸಣ್ಣಕತೆ, ಜಿ.ಎಸ್.ಆಮೂರ, ಪು. ೨.

೪. ಸಂಸಾರದ ಸುಖದುಃಖಗಳಲ್ಲಿ ಆಸೆ, ಆದರ್ಶಗಳಲ್ಲಿ ತೊಡಗಿಸಿಕೊಂಡು ಮಾನವೀಯ ಸಂಬಂಧಗಳ ಚಿತ್ರಣಗಳ ಮೂಲಕ ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸಿ ಬಿಡುಗಡೆ ಪಡೆಯುವುದು.

ಕನ್ನಡದ ಸಣ್ಣಕತೆಗಾರರಿಗೆ ಇಷ್ಟು ದೊಡ್ಡ ಪರಂಪರೆ ಬಳುವಳಿಯಾಗಿ ಬಂದಿರುವಾಗ ಅದನ್ನು ಅವರು ಅಲಕ್ಷಿಸಿರುವ ಸಾಧ್ಯತೆಯಿಲ್ಲ. ಮೊದಮೊದಲಿನ ಕತೆಗಾರರಂತೂ ಈ ನೆನಪುಗಳು ಸ್ಪಷ್ಟವಾಗಿ ಉಳಿಸಿಕೊಂಡು ಬಂದವು. ಉದಾ: ಆನಂದಕಂದರು ಜಾನಪದ ಪರಂಪರೆಯನ್ನು ವಿವರಿಸುವುದನ್ನು ಗಮನಿಸಬಹುದು. "ನಮ್ಮ ಜಾನಪದ ಪರಂಪರೆಯಲ್ಲಿ ಕಥೆಯ ಸಾಹಿತ್ಯ ರಾಶಿರಾಶಿಯಾಗಿ ಸಿಕ್ಕುವುದು. ಅಜ್ಜಿ ಕತೆಗಳನ್ನು ಮೊದಲುಮಾಡಿ ವೇದಾಂತ ತತ್ವವನ್ನು ಬೋಧಿಸುವ ಪೌರಾಣಿಕ ಕಥೆಗಳವರೆಗೆ ಕಥಾ ಜಾತಿಯ ವಿವಿಧ ಸ್ವರೂಪಗಳು ಇದರಲ್ಲಿ ನೋಡಲು ದೊರೆಯುವುವು. ವ್ಯಕ್ತಿವ್ಯಕ್ತಿಗಳ ಸ್ವಭಾವಗಳನ್ನು ಸಾಮಾನ್ಯ ಸಮಾಜ ಜೀವನವನ್ನು ಅಣಕಿಸಿ ತೋರಿಸುವ ಚುಟುಕು ಕತೆಗಳ ತ್ಯಾಗವೀರರನ್ನು, ಧರ್ಮವೀರರನ್ನು, ಯುದ್ಧವೀರರನ್ನು ಬಣ್ಣಿಸುವ ಪವಾಡ ಕತೆಗಳಿರುವವು. ಶೃಂಗಾರ ಸರಸಿಗಳಾದ ರಾಜ–ರಾಣಿಯರ ಸರಸ–ರಂಜಕ ಕತೆಗಳೂ ಇರುವವು. ಇವುಗಳಲ್ಲಿಯ ಹಲವು ಕತೆಗಳು ಅರಳಿಕೆಯಲ್ಲಿ ಅಲ್ಲದೆ ಹೋದರು ಮೂಲ ಸ್ವರೂಪದಲ್ಲಿ ಆಧುನಿಕ ಸಣ್ಣಕತೆಗಳ ತಂತ್ರಕ್ಕೆ ಹೊಂದುವಂತಹವೇ.

'ಸಣ್ಣಕಥೆ ಕಥನ"ದ ಒಂದು ಪ್ರಕಾರವಾದುದರಿಂದ 'ಕಥನ' ಪ್ರಕಾರ ಕುರಿತು ಮೇಲಿನ ಕೆಲ ಮಾತುಗಳನ್ನು ಗಮನಿಸುವುದು ಸೂಕ್ತ ಜೊತೆಗೆ ನೇರವಾಗಿ ಸಣ್ಣಕತೆಯ ಬಗ್ಗೆ ಬರುವುದಾದರೆ 'ಸಣ್ಣಕತೆ' ಎಂಬ ಪದಪ್ರಯೋಗ ಇಂಗ್ಲಿಷಿನ Short storyಯ ಭಾಷಾಂತರವಾಗಿಯೇ ಕನ್ನಡದಲ್ಲಿ ಪ್ರಚಲಿತವಾಗಿದೆ. ಉದಾ: ಮರಾಠಿಯಲ್ಲಿ ಸಣ್ಣಕತೆಯನ್ನು 'ಕಥಾ' ಎಂದೇ ಗುರುತಿಸಲಾಗುತ್ತದೆ. ಆದರೆ Short ಪದಕ್ಕೆ ಕೂಡುವ ಪ್ರಧಾನ ಅರ್ಥ ಹೀಗಿದೆ:

೧. ಸಣ್ಣಕತೆ ಸ್ಥಳ, ಕಾಲಗಳನ್ನು ತೀರಾ ಚಿಕ್ಕ ಪ್ರಮಾಣದಲ್ಲಿ ಉಪಯೋಗಿಸಿ–ಕೊಳ್ಳಲಾಗುತ್ತದೆ.

೨. ಅದು ಅಪೇಕ್ಷಿತ ಅಥವಾ ನಿರೀಕ್ಷಿತ ಮಿತಿಗಳನ್ನು ತಲುಪುವುದಿಲ್ಲ ಹಾಗೂ

೩. ಅದು ಹೇಳುವುದು ಬಹಳ ಕಡಿಮೆ ಅಥವಾ ಸ್ವಲ್ಪದರಲ್ಲಿಯೇ ಅದು ಬಹಳಷ್ಟನ್ನು ಹೇಳುತ್ತದೆ.

Short ಹಾಗೂ 'ಸಣ್ಣ' ಸಮಾನಾರ್ಥಕಗಳೆಂದು ಗ್ರಹಿಸಿ ಸಣ್ಣಕತೆಯ ಸಂದರ್ಭದಲ್ಲಿ ಸ್ವೀಕರಿಸಿದಾಗಲೂ 'ಸಣ್ಣ' ಎಂಬ ವಿಶೇಷಣ ಸಮಸ್ಯಾತ್ಮಕವಾಗಿಯೇ ಉಳಿಯುತ್ತದೆ ಎನ್ನುವುದನ್ನು ಒಪ್ಪಲೇಬೇಕು. What makes a short story short ಎಂಬ ಲೇಖನದಲ್ಲಿ ನಾರ್ಮನ್ ಫ್ರೀಡ್‌ಮನ್. ಸಣ್ಣಕತೆಯ ಮೀಮಾಂಸೆಯಲ್ಲಿ 'ಸಣ್ಣ'ತನವೇ (ಸಣ್ಣತನಕ್ಕೆ ಬೇರೆ ಅರ್ಥಗಳಿವೆ) ಮೂಲ ಸಮಸ್ಯೆ ಎಂದು ವಾದಿಸುವುದನ್ನು ಗಮನಿಸಬಹುದು.

ನಾರ್ಮನ್ ಫ್ರೀಡ್‌ಮನ್ ಅಭಿಪ್ರಾಯದಂತೆ ಸಣ್ಣಕತೆಯ ಈ ಸಣ್ಣತನಕ್ಕೆ ಎರಡು ಕಾರಣಗಳಿರುತ್ತವೆ. ಈ ಕತೆಯ ವಿಷಯದ ವ್ಯಾಪ್ತಿ ಚಿಕ್ಕದಾಗಿರಬಹುದು.

ಉದ್ದೇಶಿತ ಪರಿಣಾಮಕ್ಕಾಗಿ ವಿಷಯವನ್ನು ಬೇಕೆಂದೇ ಚಿಕ್ಕದಾಗಿಸಿರಬಹುದು. ಮೊದಲನೆಯ ಕಾರಣದಲ್ಲಿ ವಸ್ತು ಮುಖ್ಯವಾದರೆ ಎರಡನೆಯದರಲ್ಲಿ ತಂತ್ರ ನಿರ್ಣಾಯಕವಾಗುತ್ತದೆ.

ಸಣ್ಣಕತೆಯನ್ನು ಒಂದು ಪ್ರತ್ಯೇಕ ಸಾಹಿತ್ಯ ಪ್ರಕಾರವಾಗಿ ಸ್ವೀಕರಿಸಬೇಕೇ ಎನ್ನುವ ವಿಷಯದಲ್ಲಿಯೂ ವಾದಗಳಿವೆ. ವ್ಯಾಲೆಂಶಾಳ ಪ್ರಕಾರ ಅದೊಂದು 'ಬೆರಿಕೆ'ಯ ಸಾಹಿತ್ಯ ಪ್ರಕಾರ (Show – 1983-16). ಈ ಹೇಳಿಕೆ ಕೂಡ ಫ್ರೀಡಮನನ ಹೇಳಿಕೆಗೆ ಹತ್ತಿರವಾಗಿ ನಿಲ್ಲುತ್ತದೆ ಹಾಗೂ ಸಮರ್ಥಿಸುತ್ತದೆ.

"ಸಣ್ಣಕತೆಯ ವಿಶಿಷ್ಟ ಗುಣಗಳಾದ ಮಿತವ್ಯಯ, ತೀವ್ರತೆ ಸ್ಪಷ್ಟತೆಗಳ ಮೂಲ 'ಸಣ್ಣತನ'ದಲ್ಲಿಯೇ ಇದೆ. ಕಾದಂಬರಿಗೆ ಹೋಲಿಸಿದರೆ ಸಣ್ಣಕತೆಯಲ್ಲಿ ಕ್ರಿಯೆ ಸೀಮಿತವಾಗಿರುತ್ತದೆ. ವಿ.ಎಸ್.ಪ್ರಿಚೆಟ್ ವಿವರಿಸುವಂತೆ "ಕಾದಂಬರಿ ಎಲ್ಲವನ್ನು ಹೇಳುತ್ತದೆ. ಆದರೆ ಸಣ್ಣಕತೆ ಒಂದನ್ನು ಮಾತ್ರ ಹೇಳುತ್ತದೆ. ಆದರೆ ಹೇಳಿಕೆಯಲ್ಲಿ ತೀವ್ರತೆ ಇರುತ್ತದೆ (Bailey 2000:7)"[೧]

"ಸಣ್ಣಕತೆ ಒಂದು ಚಿತ್ರವಾಗಿರುತ್ತದೆ. ಅದರ ಹಿಂದೆ ಒಂದು ವಿಚಾರವಿರುತ್ತದೆ. ಅದು ತನ್ನ ವಿಷಯದ ಸತ್ಯವನ್ನು ನಿದರ್ಶಿಸುತ್ತದೆ" ಎಂದು ಹೆನ್ರಿ ಜೇಮ್ಸ್ ಹೇಳುವುದು ಇದನ್ನೇ ಸೂಚಿಸುತ್ತದೆ.

---

೧. ಕನ್ನಡ ಕಥನಸಾಹಿತ್ಯ, ಸಣ್ಣಕತೆ, ಜಿ.ಎಸ್.ಆಮೂರ, ಪು. ೨೧.

ಸಣ್ಣಕತೆಯ ಬಗ್ಗೆ ಹೆಸರಾಂತ ಅಮೇರಿಕನ್ ಕತೆಗಾರ್ತಿ ಯುಡೋರ ವೆಲ್ಟಿಯೂ ಅಭಿಪ್ರಾಯದಲ್ಲಿ ಸಣ್ಣಕತೆಯ ಸಂವಿಧಾನವನ್ನು ನಿಯಂತ್ರಿಸುವ ಎರಡು ಆಶಯಗಳೆಂದರೆ

೧. ಬದುಕು ಸಾವುಗಳ ವೈರುದ್ಯ

೨. ಅನ್ವೇಷಣೆ ಅಥವಾ ಹುಡುಕಾಟ. ಅವರ ಅಭಿಪ್ರಾಯದಂತೆ ಜಗತ್ತಿನ ಎಲ್ಲ ಕತೆಗಳಲ್ಲೂ ಈ ಅಂಶಗಳು ಕಂಡುಬರುತ್ತವೆ.

"ದಿ ಲೋನ್ಲಿ ವಾಯ್ಸ್" ಎಂಬ ತನ್ನ ಗ್ರಂಥದಲ್ಲಿ ಫ್ರ್ಯಾಂಕ್ ಓಕಾನರ್ ಸಣ್ಣಕತೆಗಳ ಪಾತ್ರಗಳು ಹೆಚ್ಚಾಗಿ ಬದುಕಿನಲ್ಲಿ ಬಲಿಪಶುಗಳಾದ ವ್ಯಕ್ತಿಗಳ ನೋವು, ಅವಮಾನ, ಏಕಾಕೀತನ ಹಾಗೂ ಪರಕೀಯತೆಯನ್ನು ಕುರಿತು ಚಿತ್ರಿಸುವಂತಹವು ಎಂದು ಹೇಳುತ್ತಾರೆ. ಆದರೆ ಕಥೆಗಳ ಎಲ್ಲ ಅಂಶಗಳನ್ನು ಗಮನಿಸಿದಾಗ ಕಾದಂಬರಿಯಂತೆ ಸಣ್ಣಕತೆ ಕೂಡ ಮೊತ್ತದಲ್ಲಿ ಬದುಕಿನ ಸಮಗ್ರತೆಯನ್ನು ಒಳಗೊಳ್ಳುವುದರಿಂದ ಮನುಷ್ಯನ ಸಂತೋಷ, ಗೆಲುವು ಮುಂತಾದ ಅಂಶಗಳು ಕೂಡ ಅದರ ವಿಷಯಗಳಾಗಬಲ್ಲವು ಎಂಬುದನ್ನು ಗಮನಿಸಬಹುದು.

ಸಣ್ಣಕತೆಯಲ್ಲಿ ಕಾಲಕ್ಕೆ ವಿಶೇಷವಾದ ಮಹತ್ವವಿದೆ. ಕಾರ್ತಜೂರ ಅದನ್ನು ಕಾಲದ ಜೊತೆಗೆ ನಡೆವ ಸ್ಪರ್ಧೆ ಎಂದೇ ಕರೆದಿದ್ದಾನೆ. ಸಣ್ಣಕತೆ ಹಾಗೂ ಕಾದಂಬರಿಗಳ ನಡುವಿನ ಅಂತರವನ್ನು ಗುರುತಿಸಲು ಕಾಲ ಒಂದು ಮಹತ್ವದ ಸೂಚಕವಾಗಿದೆ. ಕಾದಂಬರಿ ಎಪಿಕ್ ಪ್ರಕಾರಕ್ಕೆ ಹತ್ತಿರವಾದುದರಿಂದ ಅದು ವಾಸ್ತವ ಕಾಲವನ್ನು ಹೆಚ್ಚಿನ ಪ್ರಮಾಣದಲ್ಲಿ ಒಳಗೊಳ್ಳುತ್ತದೆ.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಸಣ್ಣಕತೆ ಭಾವಗೀತೆಗೆ ಸಮೀಪವಾದುದರಿಂದ ಅದು ನಿರ್ವಹಿಸುವ ವಾಸ್ತವ ಕಾಲ ಸೀಮಿತವಾಗಿರುತ್ತದೆ. ಕಾದಂಬರಿಯನ್ನು ಫಿಲ್ಮ್‌ಗೆ ಹೋಲಿಸಿದಂತೆ ಸಣ್ಣಕತೆಯನ್ನು ಫೋಟೋಗ್ರಾಫ್‌ಗೆ ಹೋಲಿಸಲಾಗುತ್ತದೆ. ಕತೆಗಾರ ಆಯ್ದುಕೊಳ್ಳುವ ದೃಷ್ಟಿಕೋನವೇ ಈ ಕ್ರಮವನ್ನು ನಿರ್ಧರಿಸುತ್ತದೆಯಾದುದರಿಂದ ಕತೆಯಲ್ಲಿ ಅದರ ಸ್ವರೂಪವನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ.

ಸಣ್ಣಕತೆಯ ಬಗ್ಗೆ ವಿವಿಧ ವಿದ್ವಾಂಸರು ಹೇಳಿದ ಅಂಶಗಳನ್ನು ಈ ರೀತಿ ಗಮನಿಸುವುದರ ಜೊತೆಗೆ ಈ ಪ್ರಕಾರವನ್ನು ಕುರಿತು ಕನ್ನಡದ ಲೇಖಕರ

ಅಭಿಪ್ರಾಯಗಳನ್ನು ಈ ರೀತಿಯಾಗಿ ಗಮನಿಸಬಹುದಾಗಿದೆ. ಅಂದರೆ ಕನ್ನಡದಲ್ಲಿ ಕೂಡ ಈ ಪ್ರಕಾರದ ಬಗ್ಗೆ ತಕ್ಕಮಟ್ಟಿನ ಚರ್ಚೆ ನಡೆದಿರುವುದನ್ನು ಗಮನಿಸಬಹುದು.

ವರಕವಿ ಬೇಂದ್ರೆಯವರು ಬರೆದದ್ದು ಕೆಲವೇ ಕಥೆಗಳಾದರೂ ಕತೆಗಳ ಸ್ವರೂಪದ ಬಗ್ಗೆ ಈ ರೀತಿ ಹೇಳಿದ್ದಾರೆ.

೧. "ಸಣ್ಣಕತೆಗಳು ಭಾವಗೀತಗಳಿದ್ದಂತೆ" ಎಂದು ಹೇಳುವವರು ಅವುಗಳ ಜೀವಕ್ಕೆ ಸಂಬಂಧಿಸಿದ್ದು ದೇಹಕ್ಕಲ್ಲ. ಅಂದರೆ ಭಾವಗೀತೆ ಪದ್ಯ, ಕತೆ, ಗದ್ಯ.

೨. ಕತೆಗೆ ಸ್ವಯಂಬೂಶಕ್ತಿ ಇರುತ್ತದೆ. ಕತೆಗಾರ ಅದಕ್ಕೆ ಭಂಗ ತರಬಾರದು. ಕತೆಯ ಸ್ವಾಯತತ್ತೆಗೆ ಭಂಗ ಬರದಂತೆ ಕತೆಗಾರನ ಪ್ರತಿಭೆ ದುಡಿಯಬೇಕು.

"ಜೀವನದ ವಾಸ್ತವ ಆದ ಹಾಗೆಯೇ ರಸವತ್ತಾದ ಚಿತ್ರಗಳನ್ನು ಕೊಡುವುದಷ್ಟೆ ನನ್ನ ಕೆಲಸ" ಎಂದು ಹೇಳಿದ ಮಾಸ್ತಿಯವರು ಸಣ್ಣಕತೆಯ ವಾಸ್ತವ ಆಯಾಮವನ್ನೇ ತೋರಿಸಿದರೂ ಬೇರೆ ಕತೆಗಾರರ ಕತೆಗಳಿಗೆ ಬರೆದ ಮುನ್ನುಡಿಗಳಲ್ಲಿಯೂ ಅವರು ಈ ಕತೆಗಳಲ್ಲಿ ನಾಡಿನ ಜನರ ಜೀವನ ಮೂಡಿಬಂದುದನ್ನೇ ಹೆಚ್ಚಾಗಿ ಮೆಚ್ಚಿಕೊಂಡರು. ಕತೆಗಾರರಾಗಿ ತಮ್ಮ ಅನುಭವವನ್ನು ವಿವರಿಸುತ್ತ ಅವರು ಕತೆಗಳಿಂದ ತಮಗೆ ದೊರೆತ ಆನಂದದ ಮೂಲ 'ಬೇರೆ ಜೀವನವನ್ನು ಅರಿತು ಅವರ ಜೊತೆ ಸೇರುವುದರಲ್ಲಿದೆ ಎಂದು ಹೇಳಿದರು.

ಬೇಂದ್ರೆಯವರು ಕಥೆಗಳನ್ನು ಭಾವಗೀತಕ್ಕೆ ಹೋಲಿಸಿದರೆ ಚಿತ್ತಾಲರು ಸಣ್ಣಕತೆಯನ್ನು ಕಾವ್ಯಕ್ಕೆ ಹೋಲಿಸಿದ್ದಾರೆ. ಒಂದು ಕವನಕ್ಕೂ ಒಂದು ಸಣ್ಣಕತೆಗೂ ಮೂಲತಃ ಯಾವ ವ್ಯತ್ಯಾಸವು ಇಲ್ಲ. ವ್ಯತ್ಯಾಸವಿರುವುದು ಅವುಗಳ ಸಂಯೋಜನೆ–ಯಲ್ಲಿ ಸಾಧನದಲ್ಲಿ ನಿರೂಪಣಾ ಮಾರ್ಗದಲ್ಲಿ ಸಾಹಿತ್ಯದಲ್ಲಿ ಕಾವ್ಯ, ನಾಟಕ, ಕಾದಂಬರಿ ಮುಂತಾದ ಅನೇಕ ಪ್ರಕಾರಗಳಿದ್ದರೂ ಅವೆಲ್ಲಕ್ಕೂ ಸಾಮಾನ್ಯವಾದ ಗುಣ ಅತ್ಯಗತ್ಯ. ಏಕೆಂದರೆ ಈ ಎಲ್ಲವೂ ಭಾಷೆಯ ಮೂಲಕ ಮೈತಳೆವ ಕಲಾಕರ್ಮಗಳು, ಕೃತಿಗಳು

ಯು.ಆರ್.ಅನಂತಮೂರ್ತಿ ಕತೆಗಳನ್ನು ಎರಡು ವಿಧವಾಗಿ ನೋಡುತ್ತಾನೆ. ಒಂದು ತಿಳಿಯೋ ಕತೆಗಳು, ಮತ್ತೊಂದು ತಿಳಿಸೋ ಕತೆಗಳು. ಮೊದಲನೆಯದು ನವ್ಯ ಕತೆಯ ವಿಧಾನವಾದರೆ ಎರಡನೆಯದು ಮಾಸ್ತಿ ಸಂಪ್ರದಾಯದ ಕತೆ.

ಇವರಲ್ಲದೆ ಇನ್ನೂ ಹಲವಾರು ಕನ್ನಡ ಕತೆಗಾರರು ಕತೆಯ ಸ್ವರೂಪದ ಬಗ್ಗೆ ತಮ್ಮದೇ ಆದ ವಿಚಾರಗಳನ್ನು ಮಂಡಿಸಿದ್ದಾರೆ.

ಸಣ್ಣ ಕಥೆಗೆ ಭಾರತೀಯ ಪರಂಪರೆಯಲ್ಲಿ ಇಷ್ಟೆಲ್ಲಾ ನೆಲೆಯಿರುವುದನ್ನು ಗಮನಿಸಬಹುದು. ಜೊತೆಗೆ "ಸಣ್ಣಕತೆ" ಎಂಬ ಶಬ್ದವೇ ಇಂಗ್ಲೀಷಿನ "Short Story" ಎಂಬುದಾಗಿ ನೇರ ಭಾಷಾಂತರವಾಗಿರುವುದರಿಂದ ಈ ಪ್ರಕಾರ ಕೂಡ ಕಾದಂಬರಿ-ಯಂತೆ ಯುರೋಪ್ ಅದರಲ್ಲೂ ಇಂಗ್ಲೆಂಡಿನಿಂದ ಹೊಸದಾಗಿ ಬಂದ ಸಾಹಿತ್ಯ ಪ್ರಕಾರ ಎಂಬ ಮಾತನ್ನು ಅಲ್ಲಗಳೆಯುವಂತಿಲ್ಲ. ಆಧುನಿಕ ಸಣ್ಣಕತೆಗಳ ವಸ್ತು ಮತ್ತು ತಂತ್ರಗಳ ದೃಷ್ಟಿಯಿಂದ ಈ ಗದ್ಯ ಕಥೆಗಳಿಗಿಂತ ಭಿನ್ನವಾಗಿದ್ದು, ಪಶ್ಚಿಮದ ನೇರ ಪ್ರಭಾವದಿಂದ ಜನಿಸಿದ ಸಾಹಿತ್ಯ ಪ್ರಕಾರವಾಗಿದೆ. ಓಹೆನ್ರಿ, ಲಿಯೋ ಟಾಲ್‌ಸ್ಟಾಯ್, ಆಂಟನ್ ಚಿಕಾವ್, ಸಾಮರ್ ಸೆಟ್‌ಮಾಮ್, ಎಡ್ಗರ್ ಅಲೆನ್‌ಪೊ, ಮೊಪಾಸಾ ಮುಂತಾದವನ್ನು ಮಾದರಿಯಾಗಿ ಸ್ವೀಕರಿಸಿ ಆ ಪ್ರಭಾವದ ಮೂಲಕ ಇಂದು ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ.

ಅ) ಕನ್ನಡದಲ್ಲಿ ಸಣ್ಣಕಥೆ ಬೆಳೆದ ಬಗೆ

ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯನ್ನು ಬಿಟ್ಟರೆ ಸಣ್ಣಕಥೆ ಪ್ರಮುಖ ಪ್ರಕಾರವಾಗಿ ಬೆಳೆದಿರುವುದನ್ನು ಕಾಣಬಹುದಾಗಿದೆ. ಕಾರಣವೇನೆಂದರೆ ಕೈಗಾರಿಕಾ ಕ್ರಾಂತಿಯ ನಂತರ ಸಮಯದ ಅಭಾವದ ಪರಿಣಾಮವಾಗಿ ದೀರ್ಘವಾದ ಮಹಾಕಾವ್ಯಗಳನ್ನು, ಕಾದಂಬರಿಗಳನ್ನು ಓದುವ ತಾಳ್ಮೆ ಕಡಿಮೆಯಾದ್ದರಿಂದ ಸಣ್ಣಕಥೆ ಜನಪ್ರಿಯವಾಗಿ ಈ ಪ್ರಕಾರದಲ್ಲಿ ಸಾಹಿತ್ಯ ರಚನೆಗೆ ಹೆಚ್ಚು ಪ್ರೋತ್ಸಾಹ ದೊರೆಯಿತು. "ಸಣ್ಣಕತೆ ಓದಿ ಮುಗಿಸಲು ಅರ್ಧಗಂಟೆಯಿಂದ ಹಿಡಿದು ಒಂದು ಗಂಟೆ ಬೇಕಾಗುವ ಗದ್ಯ ಕಥನ" ಎಂಬುದಾಗಿ ಎಡ್ಗರ್ ಆಲನ್‌ಪೊ ಅಭಿಪ್ರಾಯಿಸಿದ್ದಾರೆ. ಇನ್ನೊಂದು ಹೇಳಿಕೆಯಂತೆ "ಒಂದೇ ಸಲಕ್ಕೆ ಓದಿ ಮುಗಿಸಬಹುದಾದ ಕತೆ ನಿಜವಾದ ಸಣ್ಣಕತೆ. ಸಣ್ಣಕತೆ ಕಾದಂಬರಿಯಿಂದ ಬೇರ್ಪಟ್ಟ ಸಾಹಿತ್ಯ ಪ್ರಕಾರವಾಗಿದೆ. ಆಧುನಿಕ ಕನ್ನಡದಲ್ಲಿ ನವೋದಯ, ಪ್ರಗತಿಶೀಲ, ನವ್ಯ ದಲಿತ-ಬಂಡಾಯದ ಮುಖ್ಯ ಅಭಿವ್ಯಕ್ತಿಯಾಗಿರುವ ಈ ಪ್ರಕಾರ ದಿನದಿನಕ್ಕೂ ಹೊಸ ರೂಪ ಮತ್ತು ತಂತ್ರಗಳ ಅನ್ವೇಷಣಾ ಭೂಮಿಕೆಯಾಗಿದೆ. ಸಣ್ಣಕತೆ ಮತ್ತು ಕಾದಂಬರಿಗಳು ಸ್ವರೂಪದಲ್ಲಿ, ಪರಿಣಾಮದಲ್ಲಿ ಹೇಗೆ ಬೇರೆಯಾಗುತ್ತವೆಯೆಂಬುದಕ್ಕೆ ಒಂದು ಹೇಳಿಕೆ; 'ಸಣ್ಣಕತೆ ಸಾವಿನ ಸಂದೇಶ ತಲುಪಿಸುವವನ ಹಾಗೆ, ಕಾದಂಬರಿ ಮೆರವಣಿಗೆ ಹೊರಟ ಹಾಗೆ' ಎಂದಿದೆ.

ಆಧುನಿಕ ಕನ್ನಡ ಸಣ್ಣ ಕಥೆಗಳ ಚರಿತ್ರೆ, ಪಂಜೆ ಮಂಗೇಶರಾಯರಿಂದ ಪ್ರಾರಂಭವಾಯಿತೆನ್ನಬೇಕು. "ಭಾರತ ಶ್ರವಣ" ಕಮಲಾಪುರದ ಹೋಟೆಲಿನಲ್ಲಿ" "ನನ್ನ

ಚಿಕ್ಕತಾಯಿ" ಮುಂತಾದ ಕಥೆಗಳನ್ನು ಕ್ರಿ.ಶ. ೧೯೦೦ರಲ್ಲಿ ಪ್ರಕಟಿಸಿದರು. ಅವರ ಕಥೆಗಳ ವಸ್ತು ಸಾಮಾಜಿಕ ಹಾಗೂ ಚಾರಿತ್ರಿಕ ಅಲ್ಲಿನ ಪಾತ್ರಗಳು ವೀರ ಮತ್ತು ಪ್ರೇಮಕ್ಕೆ ಆದರ್ಶ ವೀರಮಣಿಯರು ಕಾಣಿಸಿಕೊಳ್ಳುವ ಅವರ ಕಥೆಗಳಲ್ಲಿ ಹಾಸ್ಯಕ್ಕೆ ಪ್ರಧಾನತೆ ಇದೆ.

ಆಧುನಿಕ ಜಗತ್ತಿನ ಕಥಾಸಾಹಿತ್ಯವನ್ನು ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ವಿಕಾಸಗೊಳಿಸಿದ ಕೀರ್ತಿ 'ಮಾಸ್ತಿ'ಯವರಿಗೆ ಸಲ್ಲುತ್ತದೆ. ಆದ್ದರಿಂದ ಮಾಸ್ತಿಯವರು ಕನ್ನಡದ ಸಣ್ಣಕತೆಗಳ ಜನಕರೂ ಆಗಿದ್ದಾರೆ. ಅಲ್ಲದೆ ಅವರ ಕಥಾ ಜಗತ್ತು ವಿಪುಲವೂ, ವೈವಿಧ್ಯವೂ ಆಗಿದೆ. ಒಟ್ಟು ನೂರು ಕಥೆಗಳಿದ್ದು ಅವು ಹದಿನೈದು ಸಂಕಲನಗಳಲ್ಲಿ ಪ್ರಕಟಗೊಂಡಿವೆ. "ಮಾಸ್ತಿ ಕನ್ನಡದ ಆಸ್ತಿ" ಎಂಬ ಮಾತು ಸಣ್ಣ ಕಥಾಕ್ಷೇತ್ರಕ್ಕಂತೂ ಅನ್ವರ್ಥವಾಗಿದೆ. ಹಾಗೂ ಅವರ ವಿಶಿಷ್ಟ ಕಲೆಗಾರಿಕೆಗೆ ನಿದರ್ಶನವಾಗಿ "ಮೊಸರಿನ ಮಂಗಮ್ಮ" "ವೆಂಕಟಿಗನ ಹೆಂಡತಿ", 'ಕಲ್ಮಾಡಿಯ ಕೋಣ', 'ನಿಜಗಲ್ಲಿನರಾಶಿ' ಮುಂತಾದವನ್ನು ಹೆಸರಿಸಬಹುದು.

ಆರಂಭದಲ್ಲಿ ಸಣ್ಣಕತೆಗಳನ್ನು ಬರೆದ ಪಂಜೆ ಮಂಗೇಶರಾಯರ ಸಾಲಿಗೆ ಕೆರೂರ ವಾಸುದೇವಾಚಾರ್ಯರು ಎಂ.ಎನ್.ಕಾಮತ್ ಮುಂತಾದವರು ಸೇರುತ್ತಾರೆ. ಅನಂತರ ಸಣ್ಣಕತೆಯ ಜನಕರೆಂದು ಖ್ಯಾತರಾದ ಶ್ರೀನಿವಾಸರನ್ನು ಬಿಟ್ಟರೆ ಪ್ರಮುಖ ಕಥೆಗಾರರಾಗಿ ಉಳಿಯುವುದು ಆನಂದ (ಅಜ್ಜಂಪುರ ಸೀತಾರಾಂ) "ಭವತಿ ಭಿಕ್ಷಾಂದೇಹಿ" "ನಾಕೊಂದ ಹುಡುಗಿ" ಮುಂತಾದ ಅವರ ಕಥೆಗಳನ್ನು ಗಮನಿಸ–ಬಹುದು. ಕುವೆಂಪುರವರ "ಧನ್ವಂತರಿಯ ಚಿಕಿತ್ಸೆ" ಇಂದಿಗೂ ಸಹ ರೈತರ ಸಮಸ್ಯೆಗಳ ದ್ಯೋತಕದಂತಿವೆ. ಕೊಡೆಕಲ್ ಶ್ರೀನಿವಾಸರ "ಧನಿಯರ ಸತ್ಯನಾರಾಯಣ" ಪ್ರಗತಿಶೀಲ ಧೋರಣೆಯನ್ನು ವ್ಯಕ್ತಪಡಿಸುವಂಥದ್ದು. ಪ್ರಗತಿಶೀಲ ಕತೆಗಾರರಲ್ಲಿ ನಿರಂಜನ, ಬಸವರಾಜ ಕಟ್ಟಿಮನಿ, ಚದುರಂಗ ಮುಂತಾದವರು ಸ್ವಾತಂತ್ರಾನಂತರದ ಜೀವನ ಶೈಲಿಯನ್ನು ಬಿಂಬಿಸುವ ಕತೆಗಳನ್ನು ರಚಿಸಿದ್ದಾರೆ. "ಶವದ ಮನೆ" ಚದುರಂಗರ ಪ್ರಸಿದ್ದ ಕತೆ. ಅಂದಿನ ರಾಜಕೀಯ ಬೆಳವಣಿಗೆಯ ಪರಿಣಾಮವನ್ನು ತೋರು–ವಂಥದ್ದು. ಬೆಂಗಳೂರು ಮಹಾನಗರಗಳಲ್ಲಿ ಅಮಾಯಕರು ಒಳಗಾಗುವ ಶೋಷಣೆಯ ಚಿತ್ರಣ ಕೊಡುವ 'ಕೊನೆಯ ಗಿರಾಕಿ' ನಿರಂಜನರ ಯಶಸ್ವಿ ಕತೆಗಳಲ್ಲಿ ಒಂದು ಅ.ನ.ಕೃ ಅವರು ಸಂಪಾದಿಸಿದ 'ಕಾಮನಬಿಲ್ಲು' ಪ್ರಗತಿಶೀಲ ಮನೋಧರ್ಮದ ಕತೆಗಳನ್ನು ಒಳಗೊಂಡಿದೆ.

[illegible]

ಕಾವ್ಯದಂತೆ ಸಣ್ಣಕತೆಗಳಲ್ಲಿ 'ನವ್ಯ' ತಂತ್ರ ಮತ್ತು ಮನೋಧರ್ಮದಲ್ಲಿ ವ್ಯಕ್ತವಾಗುವ ಅಂಶ. ಹೊಸದನಿ ಹೊಸ ತುಡಿತ ಕೇಳಿ ಬಂದದು ನವ್ಯತೆಯಲ್ಲಿ. ಅಡಿಗರ ಕಾವ್ಯದಲ್ಲಿ ಕಂಡುಬಂದ ಈ ಅಂಶ ನವ್ಯಕತೆಗಳಲ್ಲಿ ಇನ್ನೂ ಕಲಾತ್ಮಕವಾಗಿ ಕಂಡುಬಂದವು.

ವ್ಯಕ್ತಿ ಕೇಂದ್ರವಾದ ನವ್ಯದಲ್ಲಿ ಅಂತರಂಗದ ತುಡಿತ ದ್ವಂದ್ವಗಳು, ವ್ಯಕ್ತಿ ಮತ್ತು ಪರಿಸರದ ನಡುವಿನ ಬಿರುಕು. ವ್ಯಕ್ತಿಯ ಏಕಾಂಗಿ ಭಾವ, ಪರಕೀಯತೆ, ಅನಾಥಪ್ರಜ್ಞೆ, ಕಾಮದ ಒಳತೋಟಿಗಳು, ಅತೃಪ್ತಭಾವ, ವಿಷಾದಭಾವಗಳು – ನವ್ಯಕತೆಗಳಿಗೆ ಚೌಕಟ್ಟು ಒದಗಿಸಿದ ಅಂಶಗಳು. ಪ್ರಾಯ್ಡನ ಮನೋವೈಜ್ಞಾನಿಕ ವಿಚಾರ ಮಾನವನ ಮನೋಜಗತ್ತಿನ ದರ್ಶನ ಒದಗಿಸಿತು. ಸಂಕೀರ್ಣವೂ ವರ್ಣಮಯವೂ ಆದ ಮನೋಜಗತ್ತನ್ನು ಕುರಿತು ಬರೆಯುವಾಗ ಭಾಷೆ, ವಸ್ತು, ತಂತ್ರಗಳು ಸಂಕೀರ್ಣವಾಗುವುದು ಅನಿವಾರ್ಯವಾಯಿತು. ಸಂಕೇತ, ಪ್ರತಿಮಾರೂಪಗಳು ರೂಪತಾಳಿದವು.

ಆಲನಹಳ್ಳಿ ಶ್ರೀಕೃಷ್ಣ ಅವರ ಫಿನಿಕ್ಸ್, ಅನಂತಮೂರ್ತಿಯವರ "ಬೋಜರಾಜ", "ಮೌನಿ" "ಸೂರ್ಯನ ಕುದುರೆ" "ಪ್ರಶ್ನೆ"ಗಳನ್ನು ಉದಾಹರಿಸಬಹುದು. ಸುಮಾರು ೧೯೫೦ರಿಂದ ಎರಡು ದಶಕಗಳಲ್ಲಿ ನವ್ಯಕತೆ, ನವ್ಯಕಾವ್ಯ, ನವ್ಯ ಕಾದಂಬರಿಗಳು ರಚಿತವಾದವು. ಬಿ.ಸಿ.ರಾಮಚಂದ್ರಶರ್ಮರ "ಏಳನೆಯ ಜೀವ" ಅನಂತಮೂರ್ತಿ–ಯವರ "ಎಂದೆಂದೂ ಮುಗಿಯದ ಕತೆ" ಯಶವಂತ ಚಿತ್ತಾಲರ 'ಬೇನ್ಯಾ', 'ಕಥೆಯಾದಳು ಹುಡುಗಿ' ಶಾಂತಿನಾಥ ದೇಸಾಯಿಯವರ 'ಕ್ಷಿತಿಜ', 'ಕೂರ್ಮಾವತಾರ', ಪಿ.ಲಂಕೇಶ್ ಅವರ 'ನಾನಲ್ಲ', 'ಉಮಾಪತಿಯಾ ಸ್ಕಾಲರ್‌ಶಿಪ್', ಯಾತ್ರೆ, 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ', ಪೂರ್ಣಚಂದ್ರ ತೇಜಸ್ವಿಯವರ 'ಸ್ವರೂಪ' – ಇವು ಪ್ರಮುಖ ಕೃತಿಗಳು ರಾಜಲಕ್ಷ್ಮಿ (ಸಂಗಮ), ವೀಣಾಶಾಂತೇಶ್ವರ (ಮುಳ್ಳುಗಳು) ಸ್ತ್ರೀ ಲೇಖಕಿಯರು ಈ ವರ್ಗದಲ್ಲಿದ್ದಾರೆ.

ಬಂಡಾಯ ಚಳುವಳಿ ಕಾವ್ಯ ಪ್ರಧಾನವೆಂಬಂತೆ ಕಂಡರೂ ಕತೆಕಾದಂಬರಿಗಳು ಹೊಸ ಸತ್ವದಿಂದ ಕೂಡಿದ್ದವು. ಶಿಕ್ಷಣ ಪಡೆದ ಗ್ರಾಮೀಣ ಕೆಳವರ್ಗದ ಲೇಖಕರು, ಕತೆ–ಕಾದಂಬರಿಗಳನ್ನು ಪ್ರಕಟಿಸುತ್ತಿರುವರು.[೧] "ಆಧುನಿಕ ಕನ್ನಡದ ಮೊದಲ ದಲಿತ

೧. ಕನ್ನಡ ಸಾಹಿತ್ಯ ಚರಿತ್ರೆ, ತ.ಸು.ಶ್ಯಾಮರಾಯ, ೨೦೦೬, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು.

ಲೇಖಕ ದೇವನೂರು ಮಹಾದೇವ" ನಮ್ಮ ರಕ್ತಪೂರ್ಣ ಸಂವೇದಿಸುವಂತಹದನ್ನೇ ಹಿಡಿಯ ಹೊರಡುವುದು. ಇಂದು ಆಗಬೇಕಾದದ್ದು ಎಂಬ ಗ್ರಹಿಕೆಯಿಂದ ಬರವಣಿಗೆಯ ತೊಡಗಿದವರು. "ದ್ಯಾವನೂರು" ಮುಂತಾದ ಅವರ ಕಥೆಗಳು ಭಾಷೆ, ಅನುಭವ, ಸಂವಹನ ಎಲ್ಲ ದೃಷ್ಟಿಗಳಿಂದಲೂ ಉತ್ಕೃಷ್ಟವೆನಿಸಿವೆ. ಬಂಡಾಯ ಸಾಹಿತ್ಯವನ್ನು ಪ್ರತಿನಿಧಿಸುವ ಬರಗೂರು ರಾಮಚಂದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕುಂ. ವೀರಭದ್ರಪ್ಪ ಮುಂತಾದ ಅನೇಕ ಬರಹಗಾರರು ಸಾಮಾಜಿಕ ಕಳಕಳಿಯನ್ನು ಹೊತ್ತು, ಪ್ರತಿಭಟನೆಯ ಗಟ್ಟಿ ದನಿಗೆ ಜನಪದ ಸಾಮಾಜಿಕ, ರಾಜಕೀಯ ಪ್ರಜ್ಞೆಗೆ ಒತ್ತುಕೊಟ್ಟವರು.

ಕಳೆದ ಸುಮಾರು ಒಂದೆರಡು ದಶಕದ ಅವಧಿಯಲ್ಲಿ ಹೊಸ ಹೊಸ ಕಥೆಗಾರರು ಬೆಳಕಿಗೆ ಬರುತ್ತಿದ್ದು ಕನ್ನಡ ಕಥಾ ಪ್ರಪಂಚ ಶ್ರೀಮಂತಕೊಳ್ಳುತ್ತಲೇ ನಡೆದಿದೆ. ಪರಂಪರೆಯ ಕೇವಲ ಅನುಕರಣೆಯನ್ನು ಬಿಟ್ಟು ಹೊಸ ಬಗೆಯ ಸೃಜನಶೀಲ ರಚನೆಯಲ್ಲಿ ತೊಡಗಿರುವ ಬರಹಗಾರರನ್ನು ಕಾಣಬಹುದು. ಎಸ್.ದಿವಾಕರ್, ಮೊಗಳ್ಳಿ ಗಣೇಶ್, ಕೇಶವ ಮಳಗಿ, ವಿವೇಕ ಶಾನ್‌ಭಾಗ್, ಜಯಂತ ಕಾಯ್ಕಿಣಿ, ಶಶಿಕಾಂತ ಕುಲಕರ್ಣಿ, ಕಾ.ತ.ಚಿಕ್ಕಣ್ಣ ಮುಂತಾದವರನ್ನು ಹೆಸರಿಸಬಹುದು.

ಇತ್ತೀಚಿನ ಸಣ್ಣಕಥೆ ರಚನೆಯಲ್ಲಿ ಕಥೆಗಾರ್ತಿಯರ ಕಾರ್ಯ ಮಹತ್ತರವಾದುದು. ವೈದೇಹಿ, ಕಮಲಾ ಹೆಮ್ಮಿಗೆ, ಹೇಮಾಪಟ್ಟಣಶೆಟ್ಟಿ, ನೇಮಿಚಂದ್ರ ಅಲ್ಲದೆ ಸಾ.ರಾ.ಅಬೂಬಕ್ಕರ್, ಬಾನುಮುಷ್ತಾಕ್ ಮುಂತಾದ ಮುಸ್ಲಿಂ ಸಂವೇದನೆಯ ಕಥೆಗಾರ್ತಿಯರನ್ನು ಸಹ ಗಮನಿಸಬಹುದು. ಹೀಗೆ ಕನ್ನಡ ಸಣ್ಣ ಕಥೆ ಪ್ರಬುದ್ಧವಾಗಿ ಬೆಳೆದು ನಿಂತಿದೆ.

ಆ) ಪ್ರಮುಖ ಪ್ರಗತಿಶೀಲ ಕಥೆಗಾರರು

ಸಣ್ಣಕಥೆಗಳ ಬೆಳವಣಿಗೆ ಪ್ರಗತಿಶೀಲತೆಯ ಚಳುವಳಿಯೊಂದಿಗೆ ಹೆಣೆದು-ಕೊಂಡಿದೆ. ೧೯೩೫ರಿಂದ ೪೨ರವರೆಗಿನ ರಾಜಕೀಯ ಆಗುಹೋಗುಗಳು, ಪ್ರಗತಿಶೀಲತೆಯ ಪ್ರಚಾರ, ರಷ್ಯನ್ ಮತ್ತು ಹಿಂದಿ ಸಾಹಿತ್ಯಗಳಿಂದ ದೊರಕಿದ್ದ ವಿಚಾರ ಸಂಪತ್ತು, ಇವುಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪ್ರಮುಖ ಬದಲಾವಣೆಗಳಿಗೂ ಸತ್ವಯುತವಾದ ಸಾಹಿತ್ಯ ರಚನೆಗೆ ಕಾರಣವಾದವು. ಪ್ರಗತಿಶೀಲರ ದೃಷ್ಟಿಯಲ್ಲಿ ಹಳೆಯ ಸಾಹಿತ್ಯವೆಲ್ಲಾ "ಬುರ್ಜ್ವಾ ಸಾಹಿತ್ಯ"ವೆನಿಸಿತು. ಕಾವ್ಯ, ನಾಟಕ ಪ್ರಕಾರಗಳು

ಪ್ರಗತಿಶೀಲತೆಯ ಬಿಸಿಯಿಂದ ದೂರವೇ ಉಳಿದಿದ್ದವು. ಆದರೆ ಜನಪ್ರಿಯ ಸಾಹಿತ್ಯ ಪ್ರಕಾರಗಳಾದ ಕಥೆ, ಕಾದಂಬರಿಗಳ ಮೇಲೆ ಈ ವಾದ ಸಾಕಷ್ಟು ಪ್ರಭಾವ ಬೀರಿತು.

ಸಣ್ಣಕಥಾ ಪ್ರಕಾರದಲ್ಲಿ ಪ್ರಗತಿಶೀಲತೆಯನ್ನು ದಟ್ಟವಾಗಿ ತಂದವರು ಅ.ನ.ಕೃ ಮತ್ತು ಅನುಯಾಯಿಗಳಾದ ತ.ರಾ.ಸು., ನಿರಂಜನ, ಬಸವರಾಜ ಕಟ್ಟೀಮನಿ, ಚದುರಂಗ ಮುಂತಾದವರು. ಶೋಷಣೆಯ ವಿರುದ್ಧ ಪ್ರತಿಭಟನೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ ತೀವ್ರ ಕಾಳಜಿ, ಕೆಳವರ್ಗಗಳ ಬಗ್ಗೆ ಸಹಾನುಭೂತಿ ಇವುಗಳನ್ನು ಚಿಂತನೆಯ ಕೇಂದ್ರವಾಗುಳ್ಳ ಪ್ರಗತಿಶೀಲರು ಸಿದ್ಧಾಂತವೊಂದನ್ನು ತಮ್ಮ ಮುಂದಿರಿಸಿಕೊಂಡು ಸ್ಪಷ್ಟವಾದ ಬರವಣಿಗೆಯಲ್ಲಿ ತೊಡಗಿದರು. ಪ್ರಗತಿಶೀಲತೆ-ಯಿಂದಾಗಿ ವಸ್ತು ವೈಯಕ್ತಿಕ ತೀವ್ರತೆಯನ್ನು ಕಳೆದುಕೊಂಡು ಸಾಮಾಜಿಕ ನೆಲೆಯೇ ಮುಖ್ಯ ಕಾಳಜಿಯಾಯಿತು. ಆದರೆ ವಸ್ತುವಿನ ಆಯ್ಕೆ ಸೀಮಿತಗೊಂಡಿತು. ಮನೋಧರ್ಮದಲ್ಲಿ ಮತ್ತು ವಸ್ತುವಿನಲ್ಲಿ ಉಂಟಾದ ಬದಲಾವಣೆಯಿಂದಾಗಿ ಬರವಣಿಗೆಯ ಧಾಟಿಯೂ ಬದಲಾಯಿತು. ಆಡುಮಾತಿನ ಬಳಕೆ ಹೆಚ್ಚಾಯಿತು. ಬರವಣಿಗೆಯ ದಾಟಿಯೂ ಬದಲಾಯಿತು. ಬರವಣಿಗೆಗೆ ಹೊಸ ರಭಸ ಮೂಡಿತು. ಪ್ರತಿಯೊಂದು ಹೊಸ ಕಥೆಯಲ್ಲೂ ಬಡತನ, ವೇಶ್ಯಾವಾಟಿಕೆ, ಶೋಷಣೆ, ನಿರುದ್ಯೋಗ, ವರ್ಗ ತಾರತಮ್ಯ, ಬಾಲಕಾರ್ಮಿಕ ಪದ್ಧತಿ – ಹೀಗೆ ಹೊಸ ಸಮಸ್ಯೆಯೊಂದನ್ನು ಎತ್ತಿಕೊಂಡು ಕಥೆಗಳಲ್ಲಿ ಸಮಸ್ಯೆಗಳ ಚರ್ಚೆ ಪರಿಹಾರಗಳ ಹುಡುಕಾಟ ಆರಂಭವಾಯಿತು.

ಕಥನಕಲೆಯನ್ನು ಅದ್ಭುತವಾಗಿ ಸಾಧಿಸಿದ್ದ ಅ.ನ.ಕೃ. ಜೀವಂತ ಶೈಲಿಯ ಮೂಲಕ ಓದುಗರನ್ನು ಮೋಡಿಗೊಳಿಸಿದರು. ಇವರ 'ಅಗ್ನಿಕನ್ಯೆ' ಎಂಬ ಸಂಕಲನ ಕೆಲವು ಪ್ರಗತಿಶೀಲ ಕಥೆಗಳನ್ನು ಒಳಗೊಂಡಿದೆ. ೧೯೩೩ರಲ್ಲೇ 'ಕಾಮನಬಿಲ್ಲು' ಎಂಬ ಸಣ್ಣ ಕಥಾಸಂಕಲನವನ್ನು ಅ.ನ.ಕೃ. ಸಂಪಾದಿಸಿದರು. ಇದು ಕನ್ನಡ ಸಣ್ಣಕತೆಗಳ ಮೊದಲ ಮುಖ್ಯ ಸಂಕಲನವು ಹೌದು.

ಅ.ನ.ಕೃ. ಅವರ ಪ್ರಗತಿಶೀಲತೆಯ ವಾದದ ಪ್ರಭಾವಕ್ಕೆ ಒಳಗಾದ ಹಲವಾರು ಲೇಖಕರಲ್ಲಿ ಮುಖ್ಯವಾಗಿ ತ.ರಾ.ಸು., ನಿರಂಜನ, ಚದುರಂಗ, ಬಸವರಾಜ ಕಟ್ಟೀಮನಿ, ಅರ್ಚಕ ವೆಂಕಟೇಶ ಮೊದಲಾದವರನ್ನು ಹೆಸರಿಸಬಹುದು. ವಸ್ತುವಿನ ಆಯ್ಕೆಯಲ್ಲಿ ತ.ರಾ.ಸು. ಮತ್ತು ಅ.ನ.ಕೃ ಇವರಿಬ್ಬರ ನಡುವೆ ಸಾಕಷ್ಟು ಸಾಮ್ಯವನ್ನು ಗುರುತಿಸಬಹುದು. ಆದರೆ ತ.ರಾ.ಸು. ತಂತ್ರ ಮತ್ತು ಬರವಣಿಗೆಯ ಸ್ವರೂಪದ

ಬಗ್ಗೆಯೂ ಕಾಳಜಿ ವಹಿಸಿದರು. ಅವರ "೦-೦=೦" ಎಂಬ ಕಥೆ ವಸ್ತು ಮತ್ತು ನಿರ್ವಹಣೆಗಳ ದೃಷ್ಟಿಯಿಂದ ಪ್ರಗತಿಶೀಲತೆಗಿಂತ ನವ್ಯಕ್ಕೆ ಹೆಚ್ಚು ಸಮೀಪವಾಗಿದೆ. ತೀವ್ರತೆ ಇದ್ದಾಗ್ಯೂ ಕಥೆಯ ವಸ್ತು, ಪಾತ್ರಗಳ ವ್ಯಕ್ತಿತ್ವಗಳನ್ನು ಉಳಿಸಿಕೊಂಡಿರುವ ಕಾರಣ, ತ.ರಾ.ಸು. ಅವರ ಕಥೆಗಳು ಭಿನ್ನವಾಗಿರುವುದನ್ನು ಗಮನಿಸಬಹುದು. ಅವರ ಕಥೆಗಳಲ್ಲಿ ಹೆಚ್ಚು ಬಿಂಬಿತವಾಗಿರುವುದು. ವೇಶ್ಯಾಸಮಸ್ಯೆ; ಸ್ತ್ರೀವಿಮೋಚನೆಯಂತಹ ಅಂಶಗಳಿರುವುದನ್ನು ಗಮನಿಸಬಹುದು.

ಪ್ರಗತಿಶೀಲ ಕಥೆಗಾರರಲ್ಲಿ ಪ್ರಮುಖರಾದ ಮತ್ತೊಬ್ಬ ಲೇಖಕರೆಂದರೆ ನಿರಂಜನರು. ತಮ್ಮ ಹರಿತವಾದ ಶೈಲಿಯಲ್ಲಿ ಬಡತನ, ಶೋಷಣೆ, ಸಾಮಾಜಿಕ ಅನ್ಯಾಯಗಳ ವಿರುದ್ಧ ಅಸಹನೆಯನ್ನು ವ್ಯಕ್ತಪಡಿಸಿದರು. "ಕೊನೆಯ ಗಿರಾಕಿ" ಇವರ ಅತ್ಯುತ್ತಮ ಪ್ರಾತಿನಿಧಿಕ ಕಥೆ. ಹೆಣ್ಣನ್ನು ಭೋಗದ ಸಾಮಗ್ರಿಯಾಗಿ ಬಳಸುವ ಸಮಾಜದ ಕ್ರೌರ್ಯವನ್ನು ಅತ್ಯಂತ ಯಶಸ್ವಿಯಾಗಿ ಇಲ್ಲಿ ಚಿತ್ರಿಸಲಾಗಿದೆ. "ರಕ್ತಸರೋವರ" ಮತ್ತು "ಸಂಧಿಕಾಲ" ಅವರ ಕಥಾಸಂಕಲನಗಳು.

ಅ.ನ.ಕೃ., ತ.ರಾ.ಸು., ಚದುರಂಗ ಮತ್ತು ನಿರಂಜನರನ್ನು ಬಿಟ್ಟರೆ ಪ್ರಗತಿಶೀಲ ಸಾಹಿತ್ಯದಲ್ಲಿ ಕೇಳಿಬರುವ ಮತ್ತೊಂದು ಬಹುಮುಖ್ಯ ಹೆಸರು ಬಸವರಾಜ ಕಟ್ಟೀಮನಿ. ಕನ್ನಡದ ಜೀವಂತ ಜ್ವಾಲಾಮುಖಿಯೆನಿಸಿದ ಇವರು ಅನ್ಯಾಯದ ವಿರುದ್ಧ ಎದ್ದು ನಿಂತು 'ಗಿರಿಜಾ ಕಂಡ ಸಿನಿಮಾ' 'ಬೂಟ್‌ಪಾಲಿಷ್'. 'ರಕ್ತಧ್ವಜ', 'ನಾಗರ ಪಂಚಮಿಗೆ ಬಂದದ್ದು', 'ಜೀವನಕಲೆ' ಮುಂತಾದ ಕಥೆಗಳನ್ನು ಕಥಾಲೋಕಕ್ಕೆ ನೀಡಿದ್ದಾರೆ. ಕಟ್ಟೀಮನಿಯವರು ಸಹಜ ಕಥೆಗಾರರೆನಿಸಿ, ಭಾಷೆಯನ್ನು ಜೀವಂತವಾಗಿ ಬಳಸಿಕೊಂಡರು. ಓದುಗರಿಗೆ ಶಿಕ್ಷಣ ನೀಡುವ ಉದ್ದೇಶಕ್ಕಾಗಿ ತಮ್ಮ ಲೇಖನಿಯನ್ನು ಬಳಸಿಕೊಂಡ ಕಟ್ಟೀಮನಿಯವರು, ತಮ್ಮ ಕಾಲದ ಇತರ ಪ್ರಗತಿಶೀಲ ಲೇಖಕರಂತೆ ಕಪ್ಪು-ಬಿಳುಪನ್ನೇ ಸೃಷ್ಟಿಸಿದರು.

ಈ ರೀತಿ ಹಲವಾರು ಪ್ರಗತಿಶೀಲ ಲೇಖಕರು ಖಚಿತವಾದ ಮೌಲ್ಯಗಳನ್ನು ನಂಬಿ ಆ ಮೂಲಕ ವಾಸ್ತವತಾವಾದವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಬಳಸಿಕೊಂಡರು. ಆ ಕಾಲಘಟ್ಟದ ಕತೆಗಳನ್ನು ಪರಿಶೀಲಿಸಿದಾಗ ಈ ಅಂಶ ತಿಳಿದು-ಬರುತ್ತದೆ.

ಪ್ರಗತಿಶೀಲ ಕಥೆಗಾರರಿಗೆ ಪ್ರಮುಖವಾಗಿ ಮಾರ್ಕ್ಸ್ ಮತ್ತು ಲೆನಿನ್‌ರಂತಹ ವಿಚಾರಗಳಿಂದ ರಷ್ಯಾದ ಸಾಹಿತ್ಯ ಕ್ಷೇತ್ರದಲ್ಲಿ ಉಂಟಾದ ಕ್ರಾಂತಿ ಮುಲ್ಕ್‌ರಾಜ್

ಆನಂದ್, ಕೆ.ಅಬ್ಬಾಸ್‌ರಂಥ ಬರಹಗಾರರ ಮೂಲಕ ಭಾರತವನ್ನು ಪ್ರವೇಶಿಸಿತು. ಆದರೆ ಇದು ಇಲ್ಲಿನ ಸಾಮಾಜಿಕ ಪರಿಸರಕ್ಕೆ ಹೊಂದಿಕೆಯಾಗದಿದ್ದ ಕಾರಣ ಈ ಪ್ರಗತಿವಾದ ಬರೀವಾದವಾಗಿ ಉಳಿದುಹೋಯಿತು. ಈ ವಾದದಿಂದ ಜನಿಸಿದ ಸಾಹಿತ್ಯವು ಕಥೆ, ಕಾದಂಬರಿಗಳಂಥ ಗದ್ಯ ಕೇಂದ್ರಿತ ಪ್ರಕಾರಗಳ ಮೂಲಕ ತಮ್ಮ ಕಳಕಳಿ ವ್ಯಕ್ತಪಡಿಸುವ ಮೂಲಕ ಪ್ರಗತಿಶೀಲರು ಕಾವ್ಯ ಸಂವೇದನೆಯನ್ನೇ ಕಳೆದುಕೊಂಡರು. ಹೀಗೆ ಈ ಕಾಲಘಟ್ಟದಲ್ಲಿ ಬಂದ ಕೆಲವು ಪ್ರಗತಿಶೀಲ ಕಥೆಗಳು ಕನ್ನಡ ಸಾಹಿತ್ಯ ಲೋಕದಲ್ಲಿ ಶ್ರೇಷ್ಠ ಕತೆಗಳಾಗಿ ನಿಲ್ಲುವಂತಹವುಗಳಾಗಿವೆ.

ಅಧ್ಯಾಯ – ೪

ಚದುರಂಗರ ಬದುಕು ಮತ್ತು ವ್ಯಕ್ತಿತ್ವ

ಕನ್ನಡ ಸಾರಸ್ವತ ಲೋಕದಲ್ಲಿ 'ಚದುರಂಗ' ಎಂದೇ ಅಪಾರ ಖ್ಯಾತಿಯನ್ನು ಪಡೆದುಕೊಂಡವರು ಎಂ.ಸುಬ್ರಹ್ಮಣ್ಯ ರಾಜೇ ಅರಸು ಅವರು. ಅವರ ನಿಜನಾಮವನ್ನೇ ಮರೆಸಿದ ಖ್ಯಾತಿ 'ಚದುರಂಗ' ಕಾವ್ಯನಾಮದ್ದು. ಹೊಸಗನ್ನಡ ಸಾಹಿತ್ಯದ ನವೋದಯ, ಪ್ರಗತಿಶೀಲ, ನವ್ಯ ದಲಿತ, ಬಂಡಾಯ ಹೀಗೆ ಎಲ್ಲ ಕಾಲಘಟ್ಟಗಳ ಕಸುವನ್ನು ಪಡೆದು ಅರಗಿಸಿಕೊಂಡವರು. ಸಾಹಿತ್ಯದಲ್ಲಿ ತಮ್ಮತನವನ್ನು ಉಳಿಸಿಕೊಂಡು ಬಂದಿರುವ ಚದುರಂಗರು ಜನಿಸಿದ್ದು. ೧೯೧೬ರ ಜನವರಿ ಒಂದರಂದು ಮಲೆನಾಡಿನ ಸೆರಗಿನಂಚಿನಲ್ಲಿರುವ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ (ಈಗ ಅರಸು ಕಲ್ಲಹಳ್ಳಿ ಎಂಬುದಾಗಿ ಹೆಸರಾಗಿದೆ). ಹೀಗಾಗಿ ತಮ್ಮ ಬರವಣಿಗೆಯ ಬಹುಭಾಗವನ್ನು ಇಲ್ಲಿಯ ಗ್ರಾಮೀಣ ಸೊಗಡಿನಲ್ಲಿ ತೆರೆದಿಟ್ಟಿದ್ದಾರೆ. ಚದುರಂಗರ ತಂದೆ ಮುದ್ದುರಾಜೇ ಅರಸರು, ತಾಯಿ ಮರುದೇವಮ್ಮಣಿ ಅರಸು ಮನೆತನದ ದೇವರಾಜೇ ಅರಸರ ಮಗಳು.

ಚದುರಂಗರ ಓದು ಬರಹ ಕಲ್ಲಹಳ್ಳಿಯ ಕೂಲಿಮಠದಲ್ಲಿ ಆರಂಭಗೊಂಡಿತು. ಅವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮೈಸೂರಿನಲ್ಲಿ ನಡೆಯಿತು. ಇಂಟರ್ ಮೀಡಿಯೇಟ್ ತೇರ್ಗಡೆ ಹೊಂದಿದ ಅನಂತರ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ ಅವರು ಬಿ.ಎ. ಪದವಿ ಗಳಿಸಿದರು. ಬಿ.ಎ. ಪದವಿಯ ಅನಂತರ ಪುಣೆಯಲ್ಲಿ ಕಾನೂನು ಮತ್ತು ಎಂ.ಎ. ಪರೀಕ್ಷೆಗಳನ್ನು ಪಾಸುಮಾಡಿದರು.

ಕನ್ನಡ ಸಾಹಿತ್ಯ ಲೋಕದ ಚದುರಂಗರು ಸಾಹಿತ್ಯಾಸಕ್ತರಲ್ಲಿ ಮನೆಮಾಡಿರುವ ವಿಶಿಷ್ಟ ಹೆಸರಿನ ಓರ್ವ ಸಮರ್ಥ ಬರಹಗಾರರು ತಮ್ಮ ಬದುಕಿನ ಚದುರಂಗದಾಟದಲ್ಲಿ ಕಂಡ ವೈವಿಧ್ಯಮಯ ಅನುಭವಗಳ ಸಿಹಿ–ಕಹಿಗಳ ಕಲಾತ್ಮಕ ಅಭಿವ್ಯಕ್ತಿಯನ್ನು ಕನ್ನಡ ಸಾಹಿತ್ಯ ಪರಂಪರೆಗೆ ಕೊಡುಗೆಯಾಗಿ ಕೊಟ್ಟ ಅನನ್ಯ ಕಲಾಕಾರರು ಜೊತೆಗೆ ಸಾಹಸಪ್ರಿಯರು, ಪ್ರಯೋಗಶೀಲರು. ಗದ್ದಲ ಮಾಡದ ಕ್ರಾಂತಿಕಾರರು, ಪ್ರಗತಿಶೀಲ ಚಳುವಳಿಯ ಮುಂಚೂಣಿಯ ನೇತಾರರು ಆಗಿದ್ದಾರೆ. ಸಂಖ್ಯಾದೃಷ್ಟಿಯಿಂದ ವಿಪುಲ–ವೆನಿಸುವಷ್ಟು ಕೃತಿಗಳನ್ನು ರಚಿಸಿದರು. ಸಣ್ಣ ಕತೆಗಾರರಾಗಿ, ಕಾದಂಬರಿಕಾರರಾಗಿ,

ನಾಟಕಕಾರರಾಗಿ ಕನ್ನಡ ಸಾಹಿತ್ಯದಲ್ಲಿ ಚದುರಂಗರ ಹೆಸರು ಉನ್ನತ ಸ್ಥಾನದಲ್ಲಿ ನಿಲ್ಲುವಂತದ್ದು.

೧೯೮೨ರಲ್ಲಿ ತಮ್ಮ ವೈಶಾಖ ಕಾದಂಬರಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಗಳಿಸಿದ ಶ್ರೀ ಎಂ.ಸುಬ್ರಹ್ಮಣ್ಯರಾಜೇ ಅರಸು ಅವರು 'ಮೈಸೂರಿನ ಅರಸು ಮನೆತನದೊಡನೆ, ಅದರಲ್ಲಿಯೂ ಮನೆತನದ ಕೊನೆಯ ಅರಸರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರೊಡನೆ ಓರಗೆಯ ನಿಕಟ ಸಂಬಂಧವನ್ನು ಹೊಂದಿದ್ದ ಚದುರಂಗರು ವೈದ್ಯರಾಗ ಹೊರಟು, ಮಾನವಿಕ ವಿಷಯಗಳತ್ತ ತಿರುಗಿ, ಸಾಹಿತ್ಯದ ಕ್ಷೇತ್ರದಲ್ಲಿ ನೆಲೆ–ಬೆಲೆಗಳನ್ನು ಕಂಡುಕೊಂಡಂಥವರು. ತಮ್ಮ ತಾರುಣ್ಯದ ಅವಧಿಯಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮ, ಗಾಂಧೀ ವಿಚಾರಧಾರೆ, ಸೌಮ್ಯವಾದೀ ಚಿಂತನೆ ಮತ್ತು ಎಂ.ಎನ್.ರಾಯ್ ಅವರ ಸಮಾಜವಾದಿ ಚಳುವಳಿಗಳಿಂದ ಪ್ರಭಾವಿತರಾಗಿದ್ದ ಅವರು ಬಂಡಾಯದ ಮನೋಧರ್ಮದೊಂದಿಗೇ ಬಾಳಬೇಕಾಯಿತು. ವೈಯಕ್ತಿಕ ಬದುಕಿನಲ್ಲಿಯೂ, ಹಿರಿಯರ ಇಚ್ಛೆಗೆ ವಿರುದ್ಧವಾಗಿ, ತಾವು ಒಲಿದಿದ್ದ ಹೆಣ್ಣನ್ನೆ ಮದುವೆಯಾಗಿ, ಸಾಮಾಜಿಕವಾಗಿಯೂ ಕ್ರಾಂತಿಯ ದನಿಯನ್ನೇ ಮೊಳಗಿಸಿದ ಅವರು, ಇದರ ಪರಿಣಾಮವಾಗಿ, ತಮ್ಮ ಹುಟ್ಟೂರಾದ ಕಲ್ಲಹಳ್ಳಿಗೆ ತೆರಳಿ, ಬೇಸಾಯವನ್ನು ಕೈಗೊಳ್ಳಬೇಕಾಯಿತು. ವಿವಾಹವೇ ತರಬಹುದಾಗಿದ್ದ ಶ್ರೀಮಂತಿಕೆಗೆ ಬದಲಾಗಿ ಅವರಿಗೆ ಅನುಭವದ ಶ್ರೀಮಂತಿಕೆಯನ್ನು ತಂದುಕೊಟ್ಟ ಈ ಬದುಕು ಅವರ ಸಾಹಿತ್ಯ ಸೃಷ್ಟಿಗೆ ಗಟ್ಟಿಯಾದ ನೆಲೆಯನ್ನೇ ಒದಗಿಸಿತು. ಮಾಸ್ತಿ ಮತ್ತು ಗೊರೂರರ ಬರಹಗಳು ಅ.ನ.ಕೃ, ತ.ರಾ.ಸು. ಅವರ ಒಡನಾಟ, ರಷ್ಯನ್ ಲೇಖಕರಾದ ತೋಲ್‌ಸ್ತೋಯ್, ಗೋರ್ಕಿ, ದಾಸ್ತೋವ್‌ಸ್ಕಿ ಮತ್ತು ಫ್ರೆಂಚ್ ಲೇಖಕರಾದ ಬಾಲ್ಜಾಕ್ ಮತ್ತು ಕಾಮೂ ಅವರನ್ನು ಕುರಿತ ಅಧ್ಯಯನ – ಇವು ಸಾಹಿತಿ ಚದುರಂಗರನ್ನು ಮೂಡಿಸಿದ ಮೂರು ಶಕ್ತಿಗಳು.

ಕಥೆಗಾರರಾಗಿ ಉತ್ತಮ ಕಾದಂಬರಿಕಾರರಾಗಿ ಮಾತ್ರವಲ್ಲದೆ, ಚಲನಚಿತ್ರ–ರಂಗದಲ್ಲಿಯೂ ಚದುರಂಗರು ತಮ್ಮ ಛಾಪನ್ನು ಒತ್ತಿದ್ದಾರೆ. ಇದರತ್ತ ಆಕರ್ಷಿತರಾಗಿದ್ದ ಅವರು ಪುಣೆಯಲ್ಲಿ ಚಿತ್ರರಂಗದ ವಿವಿಧ ಮುಖಗಳ ಬಗ್ಗೆ ಸ್ವಯಂ ಅಧ್ಯಯನ ನಡೆಸಿದ್ದರು. "ಭಕ್ತರಾಮದಾಸ" ಚಿತ್ರ ಸಾಹಿತ್ಯವನ್ನು ರಚಿಸಿದ್ದ ಇವರು ಮೆಟ್ರೋಗೋಲ್ಡ್ವಿನ್ ಮೇಯರ್ ಸಂಸ್ಥೆಯವರು ತಯಾರಿಸಿದ 'ಮಾಯಾ' ಚಿತ್ರದ

ಸಹನಿರ್ದೇಶಕರಾಗಿಯೂ ಕೆಲಸ ಮಾಡಿದ್ದರು. ಈ ಅನುಭವಗಳ ಹಿನ್ನೆಲೆಯಲ್ಲಿ ಮುಂದೆ ಚದುರಂಗರು ತಮ್ಮದೇ ಆದ ಕಾದಂಬರಿಗಳನ್ನು ಆಧರಿಸಿದ್ದ 'ಸರ್ವಮಂಗಳಾ' ಚಿತ್ರದ ನಿರ್ಮಾಣಕ್ಕೂ ಕೈಹಾಕಿದ್ದರು. 'ಉಯ್ಯಾಲೆ'ಯ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಈ ಮೂಲಕ ಚಲನಚಿತ್ರ ನಿರ್ದೇಶಕರಾದ ಪ್ರಥಮ ಕನ್ನಡ ಸಾಹಿತಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಅಲ್ಲದೆ ಕರ್ನಾಟಕ ರಾಜ್ಯ ವಾರ್ತಾ ಇಲಾಖೆಗಾಗಿ ಮೂರು ಸಾಕ್ಷ್ಯಚಿತ್ರಗಳನ್ನು ತಯಾರಿಸಿಕೊಟ್ಟಿದ್ದಾರೆ. ಕುವೆಂಪುರವರನ್ನು ಕುರಿತಾದ ಅವರ ಸಾಕ್ಷ್ಯಚಿತ್ರ 'ಎ ಪೊಯಮ್ ಇನ್ ಸೆಲ್ಯುಲಾಯ್ಡ್' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

'ಚದುರಂಗ'ರ ಸಾಹಿತ್ಯಿಕ ಜೀವನದ ಆರಂಭ ಕಾಲೇಜು ಪತ್ರಿಕೆಗಳಲ್ಲಿ ಪ್ರಕಟಗೊಂಡ ಅವರ ಕವಿತೆಗಳಿಂದಲೇ ಆಯಿತಾದರೂ ಮುಂದೆ ಅಲೆಗಳು ಎಂಬ ಹೆಸರಿನಲ್ಲಿ ತಮ್ಮ ಕವನಗಳ ಸಂಕಲನವೊಂದನ್ನು ಹೊರತಂದರಾದರೂ, ಚದುರಂಗರು ಮೂಲತಃ ಕಥೆಗಾರರು, ಕಾದಂಬರಿಕಾರರು ಮತ್ತು ನಾಟಕಕಾರರು, 'ಸ್ವಪ್ನಸುಂದರಿ'ಯಿಂದ ಹಿಡಿದು 'ಮೃಗಯಾ'ವರೆಗಿನ ಏಳು ಕಥಾಸಂಕಲನಗಳನ್ನು ಅವರು ಹೊರತಂದಿದ್ದಾರೆ. 'ಶವದ ಮನೆ' ಎಂಬ ಕಥೆಯನ್ನು ಆಕಾಶವಾಣಿಯಲ್ಲಿ ಭಿತ್ತರಿಸಿದಾಗ ಅದು ಬೀರಿದ ಅದ್ಭುತ ಪ್ರಭಾವ ಚರಿತ್ರಾರ್ಹ ಸಂಗತಿಯೇ ಆಗಿತ್ತೆಂದು ಹೇಳಲಾಗಿದೆ. ದಟ್ಟ ಅನುಭವದ ಹಿನ್ನೆಲೆಯನ್ನೊಳಗೊಂಡಿರುವ ಪರಿಣಾಮಕಾರಿ ರಚನೆಗಳಾಗಿವೆ. ಮನಶಾಸ್ತ್ರದ ಬಗೆಗಿನ ಅವರ ಅಧ್ಯಯನ "ಅಂಕ" "ಕ್ವಾಟೆ" ಮೊದಲಾದ ಮನೋವೈಜ್ಞಾನಿಕ ಕಥೆಗಳಲ್ಲಿ ಬಿಂಬಿತವಾಗಿದೆ. ಇವರ ಎಲ್ಲ ಕಥೆಗಳು 'ಚದುರಂಗರ ಸಮಗ್ರ ಕಥೆಗಳು' ಎಂಬುದಾಗಿ ಪ್ರಕಟವಾಗಿವೆ.

೧೯೫೦ರ ಹೊತ್ತಿಗೆ ಪ್ರಕಟವಾದ ಅವರ 'ಸರ್ವಮಂಗಳಾ' ಕಾದಂಬರಿ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ರಚಿತವಾಗಿರುವ, ನಟರಾಜ ಮತ್ತು ಸರ್ವಮಂಗಳೆಯರ ದುರಂತ ಬದುಕಿನ ಮಾರ್ಮಿಕ ಚಿತ್ರಣವನ್ನೊಳಗೊಂಡಿದೆ. ಪರಸ್ಪರ ಪ್ರೇಮಿಗಳಾಗಿದ್ದರೂ ಸನ್ನಿವೇಶದ ಒತ್ತಡಗಳಿಗೆ ಸಿಲುಕಿ ಬೇರೆಯವರನ್ನೇ ಮದುವೆಯಾಗಬೇಕಾಗಿ ಬಂದುದರಿಂದ ಉಂಟಾದ ದುರಂತ ಪರಿಣಾಮಗಳನ್ನು ಚದುರಂಗರು ತುಂಬ ಪರಿಣಾಮಕಾರಿಯಾಗಿಯೇ ನಿರೂಪಿಸುವ ಮೂಲಕ

"ಒಲಿದವರು ಒಂದುಗೂಡಿ ಬಾಳುವುದೇ ಒಳಿತು" ಎನ್ನುವ ತಮ್ಮ ಜೀವನದ ಧ್ಯೇಯವನ್ನೇ ಪರೋಕ್ಷವಾಗಿ ಸಾರಿದ್ದಾರೆ ಎಂದೆನಿಸುತ್ತದೆ.

ಉಯ್ಯಾಲೆ ಕಾದಂಬರಿಯ ಬಗ್ಗೆ ಹೇಳುವುದಾದರೆ ಅಲ್ಲೂ ಕೂಡ ಮೇಲಿನ ಅಭಿಪ್ರಾಯವನ್ನು ಬೇರೊಂದು ನೆಲೆಯಲ್ಲಿ ಎರಡನೆಯ ಹೆಂಡತಿಯಾಗಿ ಬಂದ ಹೆಣ್ಣು ಗಂಡನ ಶೀತಲ ವರ್ತನೆಯಿಂದಾಗಿ, ಇನ್ನೊಬ್ಬನತ್ತ ಆಕರ್ಷಿತಳಾಗಿ ನೀತಿಯ ದ್ವಂದ್ವದ ಉಯ್ಯಾಲೆಯಲ್ಲಿ ತೂಗಾಡುವ ಸನ್ನಿವೇಶ ಸಮರ್ಥ ರೀತಿಯಲ್ಲಿ ಚಿತ್ರಿತವಾಗಿದೆ. ವಿಧವೆಯಾಗಿದ್ದ ಸೊಸೆ ಮಾವನ ಅದುಮಿಟ್ಟ ಲೈಂಗಿಕ ತೃಷೆಗೆ ಒಳಗಾಗಿ ಚೋದಿತವಾದ ಕಾಮದಿಂದ ಕೆಳವರ್ಗದ ಲಕ್ಕನ ಮೇಲೆರಗಿ ತನ್ನ ಬಯಕೆಯನ್ನು ಪೂರೈಸಿಕೊಂಡ ಪರಿಣಾಮವಾಗಿ ಗರ್ಭವತಿಯಾದಾಗ ಎದುರಿಸಬೇಕಾಗಿ ಬಂದ ವಿಕಟ ಸನ್ನಿವೇಶದಲ್ಲಿ ದರುಮನಹಳ್ಳಿಯ ಧರ್ಮ ಬೆತ್ತಲಾಗುವ ಅದರ ಸಂಕೇತವೆಂಬಂತೆ ಇಡೀ ಹಳ್ಳಿಯೇ ಪ್ಲೇಗಿನ ಪೀಡೆಗೆ ಒಳಗಾಗುವ ಚಿತ್ರವನ್ನು ವೈಶಾಖ ಮುಂದಿರಿಸುತ್ತದೆ. ಹಸುವಿನ ಮೇಲೇರಿ ಹೋಗುವ ಹೋರಿ ಚಿತ್ರಮೂಲನ ಕೋಟೆಯಂಥ ಸಮರ್ಥ ಸಂಕೇತಗಳ ಮೂಲಕ ಸಾಗುವ ಈ ಕಥೆಯಲ್ಲಿ ಶಿಷ್ಟ ಮತ್ತು ಗ್ರಾಮ್ಯ ಭಾಷೆಗಳನ್ನು ಪಾತ್ರ –ಸನ್ನಿವೇಶಗಳಿಗನುಗುಣವಾಗಿ ಬಳಸುವ ಒಂದು ವಿಶಿಷ್ಟ ಪ್ರಯೋಗವನ್ನೂ ಚದುರಂಗರು ಇಲ್ಲಿ ಮಾಡಿದ್ದಾರೆ. ಕಾಣೆಯಾಗುವ ರುಕ್ಮಿಣಿಯ ಮೂಲಕ ಭಗ್ನಗೊಂಡ ವ್ಯವಸ್ಥೆಯನ್ನು ಸಂಕೇತಿಸುವಂತೆಯೇ ಊರುಬಿಟ್ಟು ಹೊರಡುವ ಲಕ್ಕನ ಮೂಲಕ ಭಗ್ನಗೊಂಡ ವ್ಯವಸ್ಥೆಯನ್ನು ಸಂಕೇತಿಸುವಂತೆಯೇ ಊರುಬಿಟ್ಟು ಹೊರಡುವ ಲಕ್ಕನ ಮೂಲಕ ಬದುಕಿನ ಮತ್ತೊಂದು ಸಾಧ್ಯತೆಯನ್ನು ಸಂಕೇತಿಸುವ ವೈಶಾಖ ಚುದುರಂಗರ ವಿಶಿಷ್ಟ ಕೃತಿಯೂ ಆಗಿದೆ.

ಹೆಜ್ಜಾಲ ಅವರ ಇನ್ನೊಂದು ಮಹತ್ವಾಕಾಂಕ್ಷೆಯ ಕಾದಂಬರಿ ಅದರಲ್ಲಿ ಸೃಷ್ಟಿಸಿರುವ ಕಾಲೂರನ ಪಾತ್ರ ಮತ್ತು ಬಳಸಿರುವ ಭಾಷೆ ಗಮನಾರ್ಹವಾಗಿದೆ.

ಇಲಿಬೋನಿನಂಥ ವ್ಯವಸ್ಥೆಯಲ್ಲಿ ಸಿಕ್ಕಿಕೊಂಡಿರುವ ಬದುಕಿನ ತೊಳಲಾಟವನ್ನು ನಿರೂಪಿಸುವ ಇಲಿಬೋನು ಅಸಂಗತ ನಾಟಕವಾಗಿದ್ದರೆ ಕೆಲವೊಂದು ಬದಲಾವಣೆಗಳೊಂದಿಗೆ ನಿರೂಪಿತವಾಗಿರುವ ಕುಮಾರರಾಮನ ಪರನಾರಿ ಸೋದರತ್ವ ಐತಿಹಾಸಿಕ ನಾಟಕವಾಗಿದೆ. ಹಾಗೂ ಐತಿಹಾಸಿಕ ದೃಷ್ಟಿಯ ಲವ–ಕುಶರ ಕಾಳಗದಂಥ ರಾಮಾಯಣ ಪ್ರೇರಿತ ಕಥೆಯ ಹೊಸ ರೂಪವಾಗಿ 'ಬಿಂಬ' ಕಂಡುಬರುತ್ತದೆ.

ಭಾಷೆಯನ್ನು ಪರಿಣಾಮಕಾರಿಯಾಗಿ ಹಾಗೂ ಕಲಾತ್ಮಕವಾಗಿ ಬಳಸಿಕೊಳ್ಳುವ ಚದುರಂಗರ ವೈಶಿಷ್ಟ್ಯವನ್ನು ಇವುಗಳಲ್ಲಿಯೂ ಕಾಣಬಹುದಾಗಿದೆ.

ಆರಂಭದ ದಿನಗಳಲ್ಲಿ ಮಾಸ್ತಿ ಪ್ರಭಾವಕ್ಕೆ ಒಳಗಾಗಿದ್ದ ಚದುರಂಗರು ಕೊನೆಯವರೆಗೂ ತಮ್ಮ ನಿರೂಪಣಾ ವಿಧಾನವನ್ನು ಅದೇ ಮಾದರಿಯಲ್ಲಿ ಬಳಸಿದರು. "ಚದುರಂಗರೇ ನಾನು ಮಾರ್ಕ್ಸ್ ಹಾಗೂ ಪ್ರಗತಿಶೀಲ ಚಳವಳಿಯಿಂದ ಆಕರ್ಷಿತನಾದೆ. ಕ್ರಮ ಕ್ರಮೇಣ ಮಾಸ್ತಿಯವರ ಹೊಕ್ಕಳುಬಳ್ಳಿ ಸಂಬಂಧವನ್ನು ಆದಷ್ಟು ಕಡಿದುಕೊಳ್ಳಲು ಪ್ರಯತ್ನಪಟ್ಟಿದ್ದುಂಟು"[೧] ಎಂದು ಹೇಳಿಕೊಳ್ಳುತ್ತಾರೆ. ಒಟ್ಟಿನಲ್ಲಿ ಪ್ರಮಾಣದ ದೃಷ್ಟಿಯಿಂದ ಕಡಿಮೆಯೆನಿಸಬಹುದಾದರೂ ಗುಣಾತ್ಮಕವಾದ ಹಾಗೂ ವೈಶಿಷ್ಟ್ಯಪೂರ್ಣವಾದ ಸಾಹಿತ್ಯ ಸೃಷ್ಟಿಯಿಂದ ಸಣ್ಣ-ಕತೆಗಾರರಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ಕನ್ನಡ ಸಾಹಿತ್ಯದಲ್ಲಿ ಚದುರಂಗರ ಹೆಸರು ಗಣ್ಯ ಸ್ಥಾನದಲ್ಲಿ ನಿಲ್ಲುವಂತದ್ದು.

ಚದುರಂಗರು ಇಡೀ ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಅನನ್ಯರಾದ ಬರಹಗಾರರು ವಿಮರ್ಶಕರನ್ನು, ಓದುವ ವರ್ಗವನ್ನು ನಿರಂತರವಾಗಿ ಬೆರಗುಗೊಳಿಸುತ್ತಲೇ ಬೆಳೆದಿರುವವರು ಚದುರಂಗರ ಬತ್ತದ ಅನನ್ಯತೆ ಅವರ ಸಾಹಿತ್ಯದ ಮೂಲಗುಣ. ಈ ಸಾಹಿತ್ಯದ ಹಿಂದೆ ಕೆಲಸ ಮಾಡುತ್ತಿರುವ ಸೃಜನಶೀಲ ಪ್ರಜ್ಞೆ ರೂಢಿಗೆ ಬದ್ಧವಾಗದೇ ಹೊಸದಕ್ಕೆ ಹೆದರದೆ ಯಾರ ನಿಲುವಿಗೂ ಮನೋಭಾವಕ್ಕೂ ತನ್ನನ್ನು ಸಂಪೂರ್ಣವಾಗಿ ತೆತ್ತುಕೊಳ್ಳದೇ ಸದಾ ತೆರೆದುಕೊಂಡಿದ್ದು ಜಾಗೃತವಾಗಿದ್ದು, ತನಗೆ ಬೇಕಾದಷ್ಟನ್ನು ಆರಿಸಿಕೊಂಡು ಬೆಳೆಯುತ್ತಾ ಬಂದಿದೆ. ಈ ಆಯ್ಕೆ ಚದುರಂಗರ ಜೀವನ ಹಾಗೂ ಸಾಹಿತ್ಯಿಕ ಮನೋಧರ್ಮಗಳ ವಿಶಿಷ್ಟತೆಯನ್ನು ಪ್ರಚುರಪಡಿಸುತ್ತದೆ.

ಚದುರಂಗರ ವ್ಯಕ್ತಿತ್ವವನ್ನು ಕುರಿತ ಹಾಗೆ ಎಚ್.ತಿಪ್ಪೇರುದ್ರಸ್ವಾಮಿಯವರು "ಸತ್ಯನಿಷ್ಠ ಸ್ನೇಹಜೀವಿ ಎಂದು ಅತ್ಯಂತ ಮೃದು ಸ್ವಭಾವದ ಸ್ನೇಹ ಜೀವಿಗಳು ಅವರು ಅವರೊಡನೆ ನಾಲ್ಕು ಮಾತನಾಡುವಷ್ಟರಲ್ಲಿ ಅಪರಿಚಿತರೂ ಆತ್ಮೀಯರಾಗಿ ಬಿಡುತ್ತಾರೆ. ಎಲ್ಲರೊಡನೆ ಅತೀ ಸರಳವಾಗಿ ಬೆರೆತು ಒಂದಾಗುವ ಅಪರೂಪದ ಗುಣ ಅವರದು.

೧. ಚದುರಂಗರ ಸಾಹಿತ್ಯದಲ್ಲಿ ಗ್ರಾಮ ಸಮಾಜ' -ಸಂ. ಎಚ್.ಎಂ.ಸ್ವಾಮಿಗೌಡ (ಮೈ.ವಿ.ವಿ. ಪಿ.ಎಚ್.ಡಿ. ಮಹಾಪ್ರಬಂಧ) ೨೦೦೨, ಪು. ೧೫.

ಆದರೂ ಹತ್ತರೊಡನೆ ಹನ್ನೊಂದಾಗಿದೆ. ಬೇರೆಯಾಗಿಯೇ ಉಳಿದಿರುವ ವಿಶಿಷ್ಟತೆ ಅವರ ವ್ಯಕ್ತಿತ್ವದಲ್ಲಿದೆ"[೧] ಎಂದು ಹೇಳಿದ್ದಾರೆ.

ಎಚ್ಚೆಸ್ಕೆ– "ಚದುರಂಗರು ಸಾಹಸಪ್ರಿಯರು, ಪ್ರಯೋಗಶೀಲರು, ಪ್ರಿಯರಾದವರೊಂದಿಗೆ ಅವರು ಗಂಟೆಗಟ್ಟಲೆ ಅದೂ ಇದು ಮಾತನಾಡುತ್ತಾರೆ. ಆದರೆ ಅವರ ಸ್ನೇಹ ಪ್ರಿಯತೆ, ಮಾನವತೆಯಲ್ಲಿ ಕಳಕಳಿ, ಸಾಹಿತ್ಯದ ಕಾಳಜಿ ಸ್ಥಾಯಿಯಾಗಿ ಇದ್ದೇ ಇರುತ್ತದೆ. ತಮ್ಮ ಹಳ್ಳಿಯ ಮುಗ್ಧ ಜನರ ಭಾಷೆ, ಶೋಷಣೆಗಳ ವಿಚಾರ ಬಂದಾಗಲಂತೂ ಅವರು ಭಾವಪರವಶರಾಗುತ್ತಾರೆ. ಅವರ ಒಂದೊಂದು ಅನುಭವವೂ ಒಂದು ಸಣ್ಣಕತೆ ಆಗಬಲ್ಲದು. [೨] ಎಂದು ಹೇಳಿದ್ದಾರೆ.

೧. ಚದುರಂಗ ವ್ಯಕ್ತಿ –ಅಭಿವ್ಯಕ್ತಿ ಡಾ.ಡಿ.ಎ.ಶಂಕರ್:ಐಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೯೯, ಪು.೨೫

೨. ಅದೇ, ಪು. ೪೭

ಅಧ್ಯಾಯ – ೫

ಚದುರಂಗರ ಆಯ್ದ ಹತ್ತು ಕಥೆಗಳಲ್ಲಿ ಪ್ರಗತಿಶೀಲತೆಯ ಅಭಿವ್ಯಕ್ತಿ

ಚದುರಂಗರು ಒಟ್ಟು ಅರವತ್ತು ಕತೆಗಳನ್ನು ಬರೆದಿದ್ದಾರೆ. ಅವರ ಕತೆಗಳು ಅವರ ಏಳು ಕಥಾಸಂಕಲನಗಳಲ್ಲಿ ಹರಡಿಕೊಂಡಿವೆ. ಚದುರಂಗರು ನಮ್ಮ ನೆನಪಿನಲ್ಲುಳಿಯುವುದು ವೈಶಾಖದಂಥ ಕಾದಂಬರಿಗಳ ಮೂಲಕವಾಗಿಯೇ ಎನ್ನುವುದು ನಿಜವಾದರೂ, ಸಣ್ಣಕಥೆ ಕೂಡ ಅವರಿಗೆ ಪ್ರಿಯವಾದ ಸಾಹಿತ್ಯ ಪ್ರಕಾರವಾಗಿತ್ತು. ಚದುರಂಗರು ಕನ್ನಡ ಸಾರಸ್ವತ ಲೋಕಕ್ಕೆ ಕಾಲಿಟ್ಟಿದ್ದೆ "ಸ್ವಪ್ನಸುಂದರಿ" ಕಥಾಸಂಕಲನದ ಮೂಲಕ ೧೯೪೪ರಲ್ಲಿ. ಪ್ರಗತಿಶೀಲ ಸಾಹಿತ್ಯ ಪ್ರಾಮುಖ್ಯತೆ ಹೊಂದಿದ್ದ ಕಾಲಘಟ್ಟ. ಹೀಗಾಗಿ ಅವರ ಆರಂಭದ ಕಥೆಗಳನ್ನು ಪ್ರಗತಿಶೀಲ ಸಾಹಿತ್ಯದ ಇತ್ಯಾತ್ಮಕ ಅಂಶಗಳು ಮತ್ತು ಪರಿಮಿತಿಗಳನ್ನು ಒಳಗೊಂಡೇ ಮೌಲ್ಯಮಾಪನ ಮಾಡಬೇಕಾಗುತ್ತದೆ.

ಚದುರಂಗರ ಸಣ್ಣಕಥೆಗಳು ತಾವು ರಚನೆಗೊಂಡ ಸಾಹಿತ್ಯ ಘಟ್ಟದ ಪ್ರಗತಿಶೀಲ ಕಥೆಗಳ ಲಕ್ಷಣಗಳನ್ನು ಬಿಂಬಿಸುತ್ತವೆ. ಬಡತನ, ಹಸಿವು, ವರ್ಗ, ವರ್ಣ, ಲಿಂಗ ಆಧಾರಿತ ಅಸಮಾನತೆ, ಶೋಷಣೆ, ಕಾರ್ಮಿಕ ಸಮಸ್ಯೆ ಹೀಗೆ ಜೀವನದ ಹೋರಾಟದ ಹಲವು ಮುಖಗಳನ್ನು ಅಚ್ಚುಕಟ್ಟಾದ ಕಥನ ಶೈಲಿಯಲ್ಲಿ ಸರಳವಾಗಿ ನಿರೂಪಿಸುತ್ತವೆ. ಚದುರಂಗರ ಆರಂಭದ ಕಥೆಗಳ ಮಟ್ಟದಲ್ಲಿಯೇ ಮುಂದಿನ ಕಾಲಘಟ್ಟದ ಕಥೆಗಳು ಸೀಮಿತ ಯಶಸ್ಸಿನಲ್ಲಿ ಅಂತ್ಯಗೊಳ್ಳುವುದಿಲ್ಲ. "ಕ್ವಾಟೆ", "ಮೃಗಯಾ"ದಂತಹ ಕಥಾ ಸಂಕಲನಗಳು ಚದುರಂಗರು ನವ್ಯ ಮತ್ತು ನವ್ಯೋತ್ತರ ಸಾಹಿತ್ಯ ಘಟ್ಟಗಳಿಗೆ ತೆರೆದುಕೊಂಡ ಅನುಭವ ಮತ್ತು ಅಭಿವ್ಯಕ್ತಿ ಕ್ರಮವನ್ನು ಬಿಂಬಿಸುತ್ತವೆ. ಇದು ಅವರ ಪರಿಪಕ್ವಗೊಂಡ ಕಲಾಭಿವ್ಯಕ್ತಿಗೆ ಸಾಕ್ಷಿಯಾಗಿದೆ. "ಹೀಗೆ ಚದುರಂಗರು ತಮ್ಮ ಸುದೀರ್ಘವಾದ ಸಾಹಿತ್ಯ ಜೀವನದಲ್ಲಿ ತಮ್ಮ ಕಾಲದ ಎಲ್ಲಾ ಸಾಹಿತ್ಯಿಕ ಚಳುವಳಿಗಳೊಡನೆ ಜೋಡಿಸಿಕೊಂಡರಾದರು ಎಸ್.ಅನಂತನಾರಾಯಣ ಅವರು ಗುರುತಿಸಿದಂತೆ ಅವರದು ಮೂಲತಃ ಪ್ರಗತಿಶೀಲ ವ್ಯಕ್ತಿತ್ವ. ಅವರ ಅಭಿವ್ಯಕ್ತಿಯ ರೂಪಗಳು ಬದಲಾಗುತ್ತ ಹೋದರೂ ಅಭಿವ್ಯಕ್ತವಾದದು ಈ ಪ್ರಗತಿಶೀಲ ವ್ಯಕ್ತಿತ್ವವೇ."[೧]

---

೧. ಕನ್ನಡಕಥನ ಸಾಹಿತ್ಯ ಸಣ್ಣಕಥೆ, ಜಿ.ಎಸ್.ಅಮೂರ, ಪು. ೧೦೮.

[illegible]

[illegible]

[illegible]

[illegible]

ಈ ಹಿನ್ನೆಲೆಯಲ್ಲಿ ಅವರ ಪ್ರಗತಿಶೀಲ ನೆಲೆಯಲ್ಲಿ ಕಂಡುಬರುವ ಆಯ್ದ ೧೦ ಕಥೆಗಳನ್ನು ಆಯ್ದುಕೊಂಡಿದ್ದೇನೆ. ಆ ಕಥೆಗಳೆಂದರೆ ೧) ತುಲಸಿ, ೨) ಶವದಮನೆ, ೩) ಬಣ್ಣದ ಬೊಂಬೆ, ೪) ಗುಲಾಬಿ, ೫) ತು ಚೀಪ್ ತು ದಾಂಡ್ ತು ಬದ್ ರೆಡಿ, ೬)ಇಣಿಕುನೋಟ, ೭) ಕ್ವಾಟೆ, ೮) ಬರಲು ತಿರುಗುತ್ತಿತ್ತು, ೯)ಸಯ್ಯಾಜಿರಾವ್ ರಸ್ತೆ, ೧೦) ಇಪ್ಪತ್ತು ರೂಪಾಯಿ.

ಇದರಲ್ಲಿ ಪ್ರಗತಿಶೀಲ ಸಾಹಿತ್ಯವು ಬಹುಮುಖ್ಯವಾಗಿ ಬಿಂಬಿಸಿದ ಬಡತನವನ್ನು ಬಿಂಬಿಸುವ ನಾಲ್ಕು ಕಥೆಗಳಿವೆ. ವೇಶ್ಯಾವಾಟಿಕೆ ಸಮಸ್ಯೆಯ ಬಗ್ಗೆ ಬೆಳಕು ಚೆಲ್ಲುವ ಮೂರು ಕಥೆಗಳಿವೆ. ಶೋಷಣೆ ಅಂಶವನ್ನು ಪ್ರಧಾನವಾಗಿ ಉಳ್ಳ ಮೂರು ಕಥೆಗಳಿವೆ.

ತುಲಸಿ:

ಕಥೆಯ ಆರಂಭ ಕನ್ನಡಿಯ ಮುಂದೆ ನಿಂತು ಅಲಂಕಾರ ಮಾಡಿ-ಕೊಳ್ಳುತ್ತಿರುವ ಹೆಂಗಸು ತನ್ನ ಈಗಿನ ಸ್ಥಿತಿಯ ನಿಜರೂಪದ ಅರಿವಿನೊಂದಿಗೆ ತನ್ನ ಹಿಂದಿನ ಯೌವನದ ದಿನಗಳನ್ನು ನೆನಪು ಮಾಡಿಕೊಂಡು ಕಣ್ಣೀರಿಡುವ ಮೂಲಕ ಆಕೆ ತನ್ನ ಕಳೆದು ಹೋದ ದಿನಗಳಲ್ಲಿ ಮುಳುಗಿರುವಾಗ ಆಕೆ ಮತ್ತೆ ತನ್ನ ವಾಸ್ತವ ಸ್ಥಿತಿಗೆ ಬರುವುದು ಬಾಗಿಲು ತಟ್ಟಿದ ಶಬ್ಧ ಕಿವಿಗೆ ಬಿದ್ದ ಮೇಲೆಯೇ. ಆ ಕನ್ನಡಿಯ ಮುಂದೆ ನಿಂತು ಗತ ಕಾಲದ ದಿನಗಳನ್ನು ನೆನಪು ಮಾಡಿಕೊಳ್ಳುವ ಹೆಣ್ಣೇ 'ತುಲಸಿ'. ಈ ಕಥೆಯ ನಾಯಕಿ 'ತುಲಸಿ' ಎಂದು ಹೆಸರಿದ್ದ ಮಾತ್ರಕ್ಕೆ ಆಕೆಯೇ ಕೇಂದ್ರ ಪಾತ್ರವಲ್ಲ. ಅವಳಿಗೆ ಆಶ್ರಯಕೊಟ್ಟ ಬುಡನ್‌ಸಾಬಿಯ ನೈತಿಕ ಹೊಯ್ದಾಟ ಈ ಕತೆಯ ಆಕೃತಿಯನ್ನು ರೂಪಿಸುತ್ತದೆ.

ಕಥೆಯ ವಸ್ತು ಹೀಗಿದೆ. ತನ್ನ ವಯಸ್ಸಿನ ಹದಿನೈದನೆಯ ವರ್ಷದಲ್ಲಿ ಮದುವೆಯಾದ ತುಲಸಿ ಒಂದು ವರ್ಷದ ಅವಧಿಯಲ್ಲಿಯೇ ತನ್ನ ಗಂಡನನ್ನು ಕಳೆದುಕೊಂಡು ಅಸಹಾಯಕಳಾಗುತ್ತಾಳೆ. ಅವಳ ಅಸಹಾಯಕತೆಯ ಲಾಭ ಪಡೆದ ಹಲವಾರು ಗಂಡಸರು ಅವಳೊಡನೆ ಲೈಂಗಿಕ ಸಂಬಂಧಗಳನ್ನು ಬೆಳೆಸುತ್ತಾರೆ.

ಚದುರಂಗರ ಕಥೆಗಳಲ್ಲಿನ ಬಹುಮುಖ್ಯ ಕಥೆಯಾಗಿ ತುಲಸಿ ಕಥೆ ಕಂಡುಬರುತ್ತದೆ. ಈ ಕಥೆ ತುಲಸಿ ಎಂಬ ಹೆಣ್ಣೊಬ್ಬಳು ತನ್ನ ಹಿಂದಿನ ಸುಂದರ ಜೀವನ ನೆನಪಿಸಿಕೊಳ್ಳುವ ಮೂಲಕ ಪ್ರಸ್ತುತದಲ್ಲಿ ಆಕೆಯ ಸ್ಥಿತಿಯನ್ನು ಸಮಾಜ ಹೀನಾಯವಾಗಿ ಕಾಣುವ ಸ್ಥಿತಿಯನ್ನು ಶಪಿಸಿಕೊಳ್ಳುತ್ತ ಆಕೆ ತನ್ನ ಈ ಸ್ಥಿತಿಗೆ ಕಾರಣವನ್ನು ಹುಡುಕಲು ಪ್ರಯತ್ನಿಸಿರುತ್ತಾಳೆ. ಆದರೆ ನಿಜವಾದ ತಪ್ಪು ತನ್ನದೋ

ಅಥವಾ ತನ್ನ ಅಸಹಾಯಕತೆಯನ್ನು ಉಪಯೋಗಿಸಿಕೊಂಡು ತನ್ನೊಂದಿಗೆ ಮೊದಲು ಲೈಂಗಿಕ ಸಂಬಂಧ ಬೆಳೆಸಿದ ನೆರೆಮನೆಯ ವಿಠಲರಾಯರದೋ ಎಂಬ ದ್ವಂದ್ವಕ್ಕೆ ಸಿಕ್ಕಿ ಬೀಳುವ ತುಳಸಿ ಕೊನೆಗೆ ತಾನು ಒಪ್ಪದಿದ್ದರೆ ಇದೆಲ್ಲ ಹೇಗೆ ಸಾಧ್ಯವಾಗುತ್ತಿತ್ತು. ಹಾಗಾಗಿ ತನ್ನದೇ ತಪ್ಪು ಎಂಬ ನಿರ್ಧಾರಕ್ಕೆ ಬಂದು ನಿಲ್ಲುತ್ತಾಳೆ. ಇದು ಎಂಟು ವರ್ಷದ ಹಿಂದಿನ ಮಾತು ಆದರೆ ಈಗಾಗಲೇ ಹಲವಾರು ವಿಠಲರಾಯರಂತಹ ವ್ಯಕ್ತಿಗಳು ಈಕೆಯ ಸ್ವಚ್ಛಂದ ಲೈಂಗಿಕ ಜೀವನದಲ್ಲಿ ಪಾಲುಪಡೆದಿದ್ದಾರೆ. ಹೀಗೆ ಹಲವಾರು ಜನರ ಚಿತ್ರಗಳು ಆಕೆಗೆ ಮತ್ತೆ ಮತ್ತೆ ಗೋಚರವಾಗುತ್ತಿದ್ದವು.

ಹೀಗೆ ತುಲಸಿಯ ಜೀವನದಲ್ಲಿ ಕಡೆಯದಾಗಿ ಪ್ರವೇಶಿಸಿದ ಬುಡನ್ ಸಾಬಿ ಆಕೆಯನ್ನು ಕೊನೆಯವರೆಗೂ ಜೊತೆಯಲ್ಲಿಟ್ಟುಕೊಂಡು ಪೊರೆಯುವ ನಿರ್ಧಾರಕ್ಕೆ ಬರುತ್ತಾನೆ. ಆದರೆ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ಪೇಟೆಗೆ ಬಂದ ಸಿಪಾಯಿಗಳನ್ನು ಕರೆತಂದು 'ತುಲಸಿ'ಯ ಹತ್ತಿರ ಬಿಡುವ ಆಶಯವನ್ನು ವ್ಯಕ್ತಪಡಿಸಿದಾಗ ತುಲಸಿಯಲ್ಲಿ ಮೂಡಿದ ಪ್ರಶ್ನೆ ಬುಡನ್ ಸಾಬಿಯ ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಜೊತೆಗೆ ಕಥೆಗೆ ಹೊಸ ಆಯಾಮವನ್ನು ನೀಡಿದೆ.

'ತುಲಸಿ' ಕಥೆಯ ವಸ್ತು ಪ್ರಗತಿಶೀಲ ಸಾಹಿತ್ಯದಲ್ಲಿ ಹೆಚ್ಚು ಬಿಂಬಿತವಾಗಿರುವ ವೇಶ್ಯಾಸಮಸ್ಯೆ. ಇಲ್ಲಿ ತುಲಸಿಯ ಅಸಹಾಯಕತೆಯ ಲಾಭ ಪಡೆದ ಮೊದಲಿಗ ನೆರೆಮನೆಯ ವಿಠ್ಠಲರಾಯ ಹೀಗೆ ಈ ಸರಣಿ ಹಲವಾರು ಜನರ ಪಟ್ಟಿಯೊಂದಿಗೆ ಮುಂದುವರೆದು ಟಾಂಗಾ ಹೊಡೆಯುವ ಬುಡನ್ ಸಾಬಿ ಕೊನೆಯವನು. ತನ್ನ ಹೆಂಡತಿಯನ್ನು ಕಳೆದುಕೊಂಡು ಒಬ್ಬಂಟಿಯಾದ ಬುಡನ್‌ಸಾಬಿಗೆ ತುಲಸಿಯೆಂದರೆ ಪ್ರಾಣ. ಅವನ ಸಂಬಂಧ ಪ್ರಾರಂಭವಾದ ನಂತರ ತುಳಸಿಯು ಅವನಿಗೆ ನಿಷ್ಠಳಾಗಿರುತ್ತಾಳೆ. ಹೀಗೆ ಹೆಂಡತಿ ಇಲ್ಲದ ನಲವತ್ತು ವಯಸ್ಸಿನ ಬುಡನ್‌ಸಾಬಿ ಹಾಗೂ ಎಂಟು ವರ್ಷಗಳ ಸುದೀರ್ಘ ವೇಶ್ಯಾ ಜೀವನ ಬಿಟ್ಟು ಬುಡನ್ ಸಾಬಿಗೆ ನಿಷ್ಠಳಾಗಿರುವ ತುಲಸಿಯ ಸಂಬಂಧ ಒಂದು ರೀತಿಯಲ್ಲಿ ಅನ್ಯೋನ್ಯವಾಗಿತ್ತೆಂದರೆ ತಪ್ಪಾಗಲಾರದು. ಆದರೆ ತುಲಸಿ ತೀವ್ರ ಅನಾರೋಗ್ಯದಿಂದ ಬಳಲತೊಡಗಿದಾಗ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಬುಡನ್‌ಸಾಬಿಗೆ ಟಾಂಗಾ ಗಾಡಿಯೇನೂ ಸ್ವಂತದ್ದಾಗಿರಲಿಲ್ಲ ಅದು ಮಂಡಿಯ ಸಯ್ಯದ್ ಸಾಹೇಬರದು ಹಾಗಾಗಿ ಕಷ್ಟಪಟ್ಟು ದುಡಿಯುತ್ತಾನಾದರೂ ಅವನ ಆದಾಯದಲ್ಲಿ ಅವಳ ಇಲಾಜಿನ ಖರ್ಚಿನ ಬಾರ ಹೊರವಷ್ಟು ಶಕ್ತಿ ಇಲ್ಲ.

ಈ ರೀತಿ ಬುಡನ್‌ಸಾಬಿಯ ದುಡಿಮೆ ಅನ್ನ ಕಾಣುವಷ್ಟೇ ಸರಿ ಹಾಗಾಗಿ ಚಿಂತಿತನಾದ ಬುಡನ್‌ಸಾಬಿ ತನ್ನ 'ತುಲಸಿಯ ಇಲಾಜಿನ ಖರ್ಚಿನ ಸಲುವಾಗಿ ಕೊನೆಯ ಉಪಾಯವೆಂದು ಆತ ಸೂಳೆಯರ ಸಹವಾಸ ಬಯಸಿ ಬಂದ ಸೈನಿಕರನ್ನು ತನ್ನ ಮನೆಗೆ ಕರೆತರುತ್ತಾನೆ. ಆದರೆ ತುಲಸಿ ಈ ಸಂಬಂಧ ಒಪ್ಪುವಂತಿರಲಿ, ಸ್ವತಃ ಬುಡನ್‌ಸಾಬಿಯೇ ಅದರಿಂದ ಹಿಂಜರಿಯುತ್ತಾನೆ. "ಒಂದು ಪಕ್ಷ ಅವಳಿಗೆ (ಬುಡನ್‌ಸಾಬಿಯ ತಾಯಿಗೆ) ನನ್ನ ಕಾಯಿಲೆ ಬಂದಿದ್ರೆ ಇಂಥಾವರ್ನ ಅವಳ ಹತ್ತಿರ ಕರಕೊಂಡು ಹೋಗ್ತಿದ್ಯಾ?"[೧] ಎನ್ನುವ ತುಲಸಿಯ ಪ್ರಶ್ನೆ ಬುಡನ್‌ಸಾಬಿಯ ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ.

ಈ ರೀತಿ ಜಾಗೃತಗೊಂಡ ನೈತಿಕತೆಯ ಬಲದಿಂದ ಬುಡನ್‌ಸಾಬಿ ತನ್ನ ಗಾಡಿ ನಡೆಸಲು ಮುಂದಾದಾಗ "ಬದ್ಮಾಷ್!ಸುಮ್ನೆ ಸುಮ್ನೆ ಸುತ್ತಿಸ್ತ ಹರಾಮ್ ಖೋರ್" ಎಂದು ಬುಡನ್‌ಸಾಬಿಯನ್ನು ಬೈದು, ಅವನಿಂದ ಬೈಸಿಕೊಂಡು ಸೈನಿಕರು ಹೊರಟುಹೋಗುತ್ತಾರೆ. ಇದ್ದಕ್ಕಿದ್ದಂತೆ ಬುಡನ್‌ಸಾಬಿಯ ಕೈಗೆ ಕಮಾಯಿಯ ಹಣ ಬಂದಾಗ ಇಲಾಜು ಪಡೆಯಲು ತುಲಸಿ ಜೀವಂತವಿರುವುದಿಲ್ಲ. ಹೀಗೆ ತುಲಸಿ ತನ್ನ ಜೀವನ ಕ್ರಮದಿಂದ ಬಂದ ರೋಗಕ್ಕೆ ತುತ್ತಾಗಿ ಬುಡನ್‌ಸಾಬಿಯ ಪ್ರಯತ್ನ ಕೈಗೂಡುವಷ್ಟರಲ್ಲಿ ಆಕೆ ಸಾವನಪ್ಪುತ್ತಾಳೆ.

ಶವದಮನೆ:

ಚದುರಂಗರ ಕಥೆಗಳಲ್ಲೆಲ್ಲ ಶಿಖರ ಪ್ರಾಯವಾದ ಕಥೆ ಎನ್ನಬಹುದು. ಪ್ರಗತಿಶೀಲ ಧೋರಣೆ, ನಿಲುವುಗಳನ್ನು ಅತ್ಯಂತ ಶಕ್ತಿಯುತವಾಗಿ ಪ್ರತಿಬಿಂಬಿಸುವ ಕಥೆ. ಉಳ್ಳವರಿಗೆ ಮಾತ್ರ ಬದುಕುವ ಹಕ್ಕಿರುವ ಈ ಸಮಾಜದಲ್ಲಿ 'ಇಲ್ಲದವರ' ಸ್ಥಿತಿ ಹೇಗೆ ಶೋಷಣೆಗೀಡಾಗುತ್ತದೆ ಎಂಬುದನ್ನು ಸಶಕ್ತವಾಗಿ ಬಿಂಬಿಸುವ ಕಥೆ ಎನ್ನಬಹುದು. ವಾಸ್ತವ ಹಾಗೂ ಕಲ್ಪನೆಗಳ ಬೆಸುಗೆಯಿಂದಾಗಿ ಆಕರ್ಷಣೆ ಪಡೆದುಕೊಂಡಿದೆ. ಡಾಕ್ಟರೊಬ್ಬನ ನಿಷ್ಕಾಳಜಿಯಿಂದಾಗಿ ಗುಮಾಸ್ತ ನಾರಾಣಪ್ಪ ಜೀವಂತವಾಗಿರುವಾಗಲೇ ಶವದಮನೆ ಸೇರುತ್ತಾನೆ. ಈ ರೀತಿ ನಾರಾಣಪ್ಪನಿಗೆ ಸಮಾಜ ಬದುಕುವ ಹಕ್ಕನ್ನು ನಿರಾಕರಿಸಿ ಬದುಕಿರುವಾಗಲೇ ಶವದ ಮನೆ ಸೇರಿಸುವ ದುರಂತ ಇಲ್ಲಿನದು. ನರ್ಸ್‌ಗಳೊಡನೆ ಚಕ್ಕಂದವಾಡುತ್ತಿರುವ ಡಾಕ್ಟರ್‌ನಿಗೆ ನಾರಾಣಪ್ಪ ಬದುಕಿದ್ದಾನೋ, ಸತ್ತಿದ್ದಾನೋ ಎನ್ನುವುದನ್ನು ಖಾತ್ರಿಮಾಡಿಕೊಳ್ಳುವ ವ್ಯವದಾನವಿರುವುದಿಲ್ಲ. ಶವದ

---

೧. ಚದುರಂಗರ ಸಮಗ್ರ ಕಥೆಗಳು. ಅಭಿರುಚಿ ಪ್ರಕಾಶನ, ೧೯೯೯, ಪು. ೨೩.

ಮನೆಯಲ್ಲಿ ನಾರಾಣಪ್ಪನಿಗೆ ಎಚ್ಚರವಾದಾಗ ಅವನಿಗೆ ವಿಚಿತ್ರ ಅನುಭವಗಳು ಎದುರಾಗುತ್ತವೆ. ಮೊದಮೊದಲು ಶವದ ಮನೆಯಲ್ಲಿದ್ದೇನೆ ಎನ್ನುವ ಅರಿವು ಕೂಡ ಅವನಿಗಿರುವುದಿಲ್ಲ. ಆದರೆ ಒಂದೊಂದೇ ವ್ಯಕ್ತಿ (ಶವ) ತನ್ನ ಕತೆ ಹೇಳತೊಡಗಿದಾಗ ಅವನಿಗೆ ನಿಜಸ್ಥಿತಿ ತಿಳಿದುಬರುತ್ತದೆ.

'ಶವದ ಮನೆ' ಕಥೆಯಲ್ಲಿ ಕಂಡುಬರುವ ಘಟನಾವಳಿಗಳು ಸರ್ವಸಾಮಾನ್ಯ ಎನ್ನುವಂತಿದ್ದರೂ ತಾಂತ್ರಿಕವಾಗಿ – ಕಲಾತ್ಮಕ ದೃಷ್ಟಿಯಿಂದ ವಿಶಿಷ್ಟವಾದುದಾಗಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾದ ರೋಗಿ ನಾರಾಣಪ್ಪ ವೈದ್ಯರ ಅಲಕ್ಷ್ಯದಿಂದ ಬದುಕಿದ್ದೂ ಸತ್ತವನಂತೆ ಶವಾಗಾರಕ್ಕೆ ಬಂದು ಬಿದ್ದಿರುತ್ತಾನೆ. ಒಂದು ಹೊತ್ತಿನಲ್ಲಿ ಎಚ್ಚರಗೊಂಡು ತನ್ನ ಕಣ್ಣೆದುರಿಗೆ ಕಾಣುವ ಒಂದೊಂದು ದೃಶ್ಯವೂ ರುದ್ರಭೀಕರ–ವಾಗಿರುತ್ತದೆ. ಅವನ ಸುತ್ತಲೂ ಸತ್ತುಬಿದ್ದಿದ್ದ ಶವಗಳು ಒಂದೊಂದಾಗಿ ಮೇಲೆದ್ದು ಚಿತ್ರವಿಚಿತ್ರವಾದ ವ್ಯಾಪಾರಗಳಲ್ಲಿ ತೊಡಗುತ್ತವೆ. ಅವು ಬದುಕಿದ್ದಾಗ ಅವನ್ನು ಸಾವಿನೆಡೆಗೆ ನೂಕಿದ ಬಾಳಿನ ದುರಂತಗಳು, ಆ ದುರಂತಗಳ ಹಿನ್ನೆಲೆಯಲ್ಲಿನ ಸಾಮಾಜಿಕ ಕ್ರೌರ್ಯ ಹಾಗೂ ಅನ್ಯಾಯಗಳು ಹೃದಯವನ್ನು ಕಲಕುವಂತವು. ಹೀಗೆ ಶವದ ಮನೆಯಲ್ಲಿನ ಆಯಾ ಶವಗಳ ಬಾಳಕಥೆ, ಅದರದರ ಬಾಯಿಂದ ಹೊರಬೀಳುತ್ತದೆ. ಅದನ್ನು ಕೇಳಿದ ನಾರಾಣಪ್ಪ ಆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಅಲಕ್ಷ್ಯದಿಂದ ಬದುಕಿದ್ದರೂ ಸತ್ತನೆಂದು ಭಾವಿಸಲ್ಪಟ್ಟವನಾಗಿ, ಅತ್ಯಂತ ವ್ಯಥೆಗೊಳ್ಳುತ್ತಾನೆ. ಅಲ್ಲಿನ ಶವಗಳ ದೃಶ್ಯಗಳನ್ನೆಲ್ಲ ಕಂಡ ಮೇಲೆ ತಾನು ವಾಸಿಸುತ್ತಿರುವ ಜಗತ್ತು ಎಷ್ಟು ಕ್ರೂರ, ಎಷ್ಟು ನಿಷ್ಕರುಣಿ ಎಂಬ ಅರಿವು ತೀವ್ರವಾಗಿ ಮತ್ತೆ ಆಸ್ಪತ್ರೆಗೆ ಹಿಂದಿರುಗುವ ಕಲ್ಪನೆಗೆ ಹೆದರಿ ಸಾಯುತ್ತಾನೆ.

ಈ ರೀತಿ ಸತ್ತ ನಾರಾಣಪ್ಪನ ಸಾವನ್ನು ಅಲ್ಲಿನ ವೈದ್ಯ ಅರ್ಥೈಸುವ ರೀತಿಯೇ ಬೇರೆ. "ಶವಗಳನ್ನು ನೋಡಿ ಹೆದರಿ ಹೃದಯಸ್ತಂಭನವಾಗಿ ಸತ್ತುಹೋಗಿದ್ದಾನೆ". ಕಥೆಯಲ್ಲಿ ಕೊನೆಗೆ ಕಂಡುಬರುವ ಈ ವಿಡಂಬನೆ ಎಷ್ಟು ಅರ್ಥಪೂರ್ಣ ಎನಿಸುವ ಜೊತೆಗೆ ಈ ಕಥೆಯಲ್ಲಿ ಬರುವ ಶವ ಸಂಭಾಷಣೆ ಕಥೆಯ ಹೊಸ ತಂತ್ರವಾಗಿ ಕಂಡುಬರುತ್ತದೆ.

ಆ ಶವದ ಮನೆಯಲ್ಲಿ ತಾನು ಕೆಲಸ ಮಾಡುತ್ತಿದ್ದ ಮಿಲ್ಲಿನ ಮ್ಯಾನೇಜರ್‌ನಿಂದ ಬಲಾತ್ಕಾರಕ್ಕೊಳಗಾಗಿ ಆತ್ಮಹತ್ಯೆಯಿಂದ ಸತ್ತಿರುವ ಮಹಾದೇವಿ ಹಾಡುತ್ತಿರುತ್ತಾಳೆ. ಹಜಾಮತಿ ಮಾಡುವಾಗ ಕಲುಷಿತ ರಕ್ತ ಮೈ ಸೇರಿ ಸತ್ತ ವೆಂಕಟರಮಣ ತನ್ನ ನಗೆ

ತಡೆದುಕೊಳ್ಳಲಾರದವನಾಗಿದ್ದಾನೆ. ಹೋಟೆಲ್ ಮಾಲೀಕನಿಂದ ಹೊಡೆತ ತಿಂದು ಆಸ್ಪತ್ರೆಯಲ್ಲಿ ಸತ್ತ ಮಾಣಿಯ ನಿಟ್ಟುಸಿರು ಮಾತ್ರ ಕೇಳಿಬರುತ್ತದೆ. ಯಾರು ನೋಡುವವರಿಲ್ಲದೆ ಆಸ್ಪತ್ರೆಯ ಹೊರಗೆಯೆ ಸತ್ತುಬಿದ್ದು ಶವಾಗಾರಕ್ಕೆ ಸೇರಿದ ಮುದುಕ ಜಾಡಾಮಾಲಿಗೆ ಮಾತುಗಳಿಲ್ಲ. ಹೀಗೆ ಈ ಮುಂತಾದವರು ಶವದ ಮನೆ ಸೇರಿಬಿಟ್ಟಿದ್ದಾರೆ. ಬದುಕಿರುವಾಗಲೇ ಸತ್ತಿರುವನೆಂದು ಎಳೆದು ತಂದು ಶವದ ಮನೆಗೆ ಹಾಕಿಸಿಕೊಂಡಿರುವ ನಾರಾಣಪ್ಪನ ಪ್ರತೀಕ ಈ ಸಮಾಜದ ಅತ್ಯಂತ ಪರಮಾವದಿ ಅಮಾನುಷತನದ್ದು ಎಂದರೆ ತಪ್ಪಾಗದು.

ಶವದ ಮನೆ ಸೇರಿದ ನಾರಾಣಪ್ಪ ಎಚ್ಚರಗೊಂಡು ಶವದ ಮನೆಯಲ್ಲಿಯೂ ಜೀವಂತ ಇರುವ ಆ ಜನರ ಕಥೆಗಳನ್ನು ಕೇಳತೊಡಗುತ್ತಾನೆ. ಒಬ್ಬೊಬ್ಬರ ಕಥೆಯಲ್ಲೂ ಉಳ್ಳವರು ಇಲ್ಲದವರ ಮೇಲೆ ಮಾಡಿರುವ ವಿಕೃತಿಯ, ಅಮಾನವೀಯತೆಯ ಸವಾರಿಯೇ ಕೇಂದ್ರವಾಗಿದೆ. ಅಷ್ಟೇ ಅಲ್ಲದೆ ಆರೋಗ್ಯ ಕೇಂದ್ರವಾದ ಆಸ್ಪತ್ರೆಯೂ ಮತ್ತೊಂದು ರೀತಿಯಲ್ಲಿ ಸವಾರಿಮಾಡುತ್ತದೆ. ಹೆಣ್ಣು, ಕ್ಷೌರಿಕ, ಕೆಳವರ್ಗದ ಆಯಾ ವ್ಯಕ್ತಿಗಳ ಹಿನ್ನೆಲೆಯಲ್ಲಿ ಅವರ ಶೋಷಣೆ ಭಯಂಕರವಾಗಿಯೇ ನಡೆದಿದೆ. ಶಕ್ತಿ ಇರುವ ತನಕ ದುಡಿಸಿಕೊಳ್ಳುವ ಸಮಾಜ ಆ ವರ್ಗದಲ್ಲಿ ಕೊಂಚ ಏರುಪೇರಾದರು ಸಾರಾಸಗಟಾಗಿ ಅವರಿಗೆ ಬದುಕುವ ಹಕ್ಕನ್ನೇ ನಿರಾಕರಸಿಬಿಡುವ ಸಮಾಜ ತನ್ನ ಅಸ್ವಸ್ಥತೆಯನ್ನು ತನ್ನ ನಿರ್ಜೀವ ಸ್ಥಿತಿಯನ್ನು ಏಕಕಾಲಕ್ಕೆ ತೋರ್ಪಡಿಸಿಕೊಳ್ಳುತ್ತದೆ. ಹಾಗಾಗಿಯೇ ಆ ನಿರ್ಜೀವ ಸಮಾಜದಲ್ಲಿ ಬದುಕುವುದಕ್ಕಿಂತ ಶವದ ಮನೆಯೊಳಗೆ ಜೀವಂತ ಬದುಕುವ ಆಶಯವನ್ನು ನಾರಾಣಪ್ಪ ಬದುಕಿರುವಾಗಲೇ ವ್ಯಕ್ತಪಡಿಸುತ್ತಾನೆ.

ಈ ರೀತಿ ಶವದ ಮನೆ ಕಥೆಯು ಅಂತಹ ಕೆಟ್ಟ ಸಮಾಜದ ವಿರುದ್ಧದ ಅತ್ಯಂತ ಧ್ವನಿಪೂರ್ಣ ಹಾಗೂ ಸಾರ್ವಕಾಲಿಕ ಪ್ರತಿಭಟನೆಯನ್ನು ದಾಖಲು ಮಾಡುತ್ತದೆ. ಈ ಕಥೆಯ ಕಾಲ್ಪನಿಕ ಆವರಣ ಲವಲವಿಕೆಯನ್ನು ಹುಟ್ಟಿಸಿದರೂ ಅದನ್ನು ಮೀರಿದ ವ್ಯಂಗ್ಯ ಕತೆಯ ಮುಖ್ಯ ಪರಿಣಾಮವಾಗಿದೆ.

ಬಣ್ಣದ ಬೊಂಬೆ:

ಕಥೆಯ ವಸ್ತು ಹೀಗಿದೆ. ಈ ಕತೆಯ ಕೇಂದ್ರದಲ್ಲಿ ಇಬ್ಬರು ಚಿಕ್ಕ ಬಾಲಕಿಯರಿದ್ದಾರೆ. ಒಬ್ಬಳ ಹೆಸರು ವನಜ. ಬ್ಯಾಂಕ್ ಮ್ಯಾನೇಜರೊಬ್ಬನ ಮಗಳಾದ ಇವಳು ಇರುವುದು ಮಹಡಿಯ ಮನೆ. ಆದರೆ ಶ್ರೀಮಂತಿಕೆಯಲ್ಲಿ ಬೆಳೆದಿದ್ದರೂ ಅವಳಿಗೆ ಆರೋಗ್ಯ ಸುಖವಿಲ್ಲ. ಇನ್ನೊಬ್ಬಳ ಹೆಸರು ಪುಟ್ಟರಂಗಿ. ಇವಳಿರುವುದು

ವನಜಳ ಮನೆಯೆದುರಿನ ಜೋಪಡಿಯಲ್ಲಿ ಬಡವರ ಮನೆಯವಳಾದರೂ ಪುಟ್ಟರಂಗಿ ಆರೋಗ್ಯದಿಂದಿದ್ದಾಳೆ. ಚಿಕ್ಕ ಮಕ್ಕಳಾದ ಇವರಲ್ಲಿ ತಮ್ಮ ವರ್ಗ ಭಿನ್ನತೆಯ ಅರಿವಿಲ್ಲ. ವನಜಳ ಬಣ್ಣದ ಬೊಂಬೆಗಳೊಡನೆ ಇಬ್ಬರೂ ಆಡುತ್ತಿರುತ್ತಾರೆ. ಒಬ್ಬಳೇ ಮಗಳಾದ ವನಜಳಿಗೆ ಬೊಂಬೆಯ ಕಷ್ಟಗಳಾಗಲಿ ಅವುಗಳ ಪರಿಹಾರಗಳಾಗಲಿ ತಿಳಿಯುವುದು ಆದರೆ ತಮ್ಮನೊಂದಿಗಿದ್ದ ಪುಟ್ಟರಂಗಿಗೆ ಮಗುವನ್ನು ಹೇಗೆ ಸಮಾದಾನಗೊಳಿಸಬೇಕು ಎನ್ನುವುದು ಗೊತ್ತಿದೆ. ಇಡೀ ಕಥೆಯಲ್ಲಿ ಪುಟ್ಟರಂಗಿಯೇ ಹೆಚ್ಚು ಅನುಭವಸ್ಥಳಾಗಿ ಕಾಣಿಸಿಕೊಳ್ಳುತ್ತಾಳೆ. ಆದರೆ ಇವರೀರ್ವರ ಮಧುರ ಬಾಂಧವ್ಯವನ್ನು ಕೊನೆಗೊಳಿಸುವ ಘಟನೆಯೊಂದು ನಡೆದುಹೋಗುತ್ತದೆ. ಪುಟ್ಟರಂಗಿಯ ಮೇಲಿನ ಪ್ರೀತಿಯಿಂದ ವನಜ ಅವಳಿಗೆ ತನ್ನ ಬಣ್ಣದ ಬೊಂಬೆ ಕೊಟ್ಟು ಬಿಡುತ್ತಾಳೆ. ಆದರೆ ಈ ಘಟನೆಯ ಪರಿಣಾಮ ಒಳಿತಾಗುವುದಿಲ್ಲ. ಆ ಬೊಂಬೆಯನ್ನು ನೋಡಿ ತನ್ನ ತಾಯಿ ಸಂತೋಷಪಡುತ್ತಾಳೆ ಎಂದು ಭಾವಿಸಿದ ಪುಟ್ಟರಂಗಿಯ ನಿರೀಕ್ಷೆ ಸುಳ್ಳಾಗುತ್ತದೆ. ಅದನ್ನು ಪುನಃ ಹಿಂದಿರುಗಿಸುವಂತೆ ಪುಟ್ಟರಂಗಿಯನ್ನು ಕಳುಹಿಸುತ್ತಾಳೆ. ಪುಟ್ಟರಂಗಿಯ ತಾಯಿಗೆ ತನ್ನ ಮಗಳ ಮೇಲೆ ಕಳ್ಳತನದ ಆಪಾದನೆ ಎಲ್ಲಿ ಬರುವುದೋ ಎಂಬ ಹೆದರಿಕೆ. ಅವಳ ಅಂತಸ್ತನ್ನು ಮೀರಿದ ಈ ಬೊಂಬೆ ಪುಟ್ಟರಂಗಿಯಲ್ಲಿ ಯಾವುದೇ ಪರಿಣಾಮ ಬೀರದಿದ್ದರೂ ಪುಟ್ಟರಂಗಿಯ ತಾಯಿಯಲ್ಲಿ ಭಯ, ಆತಂಕಗಳನ್ನು ಹುಟ್ಟಿಸುತ್ತದೆ. ಆಗ ಪುಟ್ಟರಂಗಿಗೆ ತಾಯಿ ಈ ರೀತಿಯ ಮಾತುಗಳನ್ನು ಹೇಳುತ್ತಾಳೆ. "ಕದ್ದುಕೊಂಡು ಹೋಯ್ತು ಅಂತ ಯೇಳಾಕು ಹೇಸಾಕಿಲ್ಲ ಈ ಜನ. ಅಮ್ಯಾಗೆ ಪೊಲೀಸು ಗಿಲೀಸು) ಎಲ್ಲ ಯಾಕವ್ವ ತಾಪತ್ತರ್ಯ?"[೧] ಪುಟ್ಟರಂಗಿ ವನಜಳಿಗೆ ಅವಳ ಗೊಂಬೆಯನ್ನು ಮರಳಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ ವನಜ ಕಣ್ಣೀರಿಡುತ್ತಾ "ನಾಳೆ ಶುಕ್ರವಾರನೂ ಬರ್ತೀಯಾ" ಎಂದು ಕೇಳಿದರು ಆಕೆಯ ಕಡೆಗೆ ತಿರುಗಿ ನೋಡದ ಸ್ಥಿತಿ ಪುಟ್ಟರಂಗಿಯದಾಗಿತ್ತು.

ಬೊಂಬೆಯ ಕಾರಣದಿಂದಾಗಿ "ಇನ್ನು ಮುಂದೆ ತನ್ನ ತಾಯಿ ಎಂದೆಂದಿಗೂ ವನಜಳ ಮನೆಗೆ ತನ್ನನ್ನು ಆಡಲು ಹೋಗಗೊಡುವುದಿಲ್ಲ ಎಂದು ಪುಟ್ಟರಂಗಿಯ ಅಂತರಂಗ ಮೊರೆಯುತ್ತಿತ್ತು." ಈ ರೀತಿ ವರ್ಗಭೇದದ ದುರಂತತೆಯನ್ನು ಈ ಕತೆ ಚಿತ್ರಿಸುತ್ತದೆ. ಇಲ್ಲಿ ವನಜಳಿಗೆ ಬೇಕಾಗಿರುವುದು ಜೀವವಿರದ ಬಣ್ಣದ ಬೊಂಬೆಯಲ್ಲ ಬದಲಿಗೆ ಜೀವವಿರುವ ಪುಟ್ಟರಂಗಿ. ಈ ರೀತಿ ಬಣ್ಣದ ಬೊಂಬೆಯ ಸಾಂಕೇತಿಕತೆ ಬೇರೆಯಾಗಿದ್ದರೂ ವರ್ಗಬೇದದ ದುರಂತತೆಯನ್ನು ಸಶಕ್ತವಾಗಿ ಚಿತ್ರಿಸುತ್ತದೆ.

---

೧. ಚದುರಂಗರ ಸಮಗ್ರ ಕಥೆಗಳು,ಅಭಿರುಚಿ ಪ್ರಕಾಶನ,ಪು. ೧೫೮.

ಈ ಕಥೆಯಲ್ಲಿ ಕಂಡುಬರುವ ವಸ್ತು ತೀರಾ ಸಾಮಾನ್ಯವೆಂಬಂತೆ ಕಂಡುಬಂದರು. ಆ ವಸ್ತು ಕಥೆಯಲ್ಲಿ ಬಿಂಬಿತವಾಗಿರುವ ರೀತಿ ವಿಶಿಷ್ಟವಾಗಿದೆ. ಕಥೆಯಲ್ಲಿ ಕಂಡುಬರುವ ವನಜಳ ಪಾತ್ರದಲ್ಲಿ ಭೌತಿಕವಾಗಿ ಶ್ರೀಮಂತಿಕೆಯ ಆವರಣವಿದ್ದರೂ ಸಹ ಆಕೆಯಲ್ಲಿ ಬಡತನದಲ್ಲಿದ್ದರೂ ಕೂಡ ಪುಟ್ಟರಂಗಿಯಲ್ಲಿನ ಗಟ್ಟಿತನವಿಲ್ಲವೆನ್ನಬಹುದಾಗಿದೆ. ಬೊಂಬೆಯನ್ನು ಕಂಡಾಗ ಪುಟ್ಟರಂಗಿ ವರ್ತಿಸುವ ರೀತಿ ವನಜಳಿಗೆ ಆಶ್ಚರ್ಯವನ್ನುಂಟುಮಾಡುತ್ತದೆ. ನಿಸರ್ಗವೇ ಶಾಲೆ ಎಂಬಂತೆ ಪುಟ್ಟರಂಗಿ ತನ್ನ ತಮ್ಮನ ಆಟಪಾಟಗಳನ್ನು ಗಮನಿಸಿ ಅಭ್ಯಾಸವಾಗಿ ತಾನು ಗೊಂಬೆಯನ್ನು ಕಂಡಾಗ, ಅದು ಕೆಳಕ್ಕೆ ಬಿದ್ದಾಗ ಆ ಗೊಂಬೆಗೂ ಜೀವವಿದೆ ಎನ್ನುವ ರೀತಿಯಲ್ಲಿ ಅದನ್ನು ಮುದ್ದಿಸುವ, ಹಾಲೂಡಿಸುವ ಅಂಶಗಳು ಪುಟ್ಟರಂಗಿಯ ಪಾತ್ರದ ನೈಜ ಬದುಕಿಗೆ ಹಿಡಿದ ಕನ್ನಡಿಯಾಗಿದೆ.

ವನಜ ಈ ಕಥೆಯಲ್ಲಿ ಬರುವ ಮುಖ್ಯ ಪಾತ್ರವಾಗಿ ಕಂಡುಬಂದರೂ ಸಹ ಈ ಕಥೆಯ ಸಶಕ್ತಪಾತ್ರವಾಗಿ ಪುಟ್ಟರಂಗಿಯ ಪಾತ್ರ ಕಂಡುಬರುತ್ತದೆ. ವರ್ಗಬೇದದ ತಾರತಮ್ಯವನ್ನು ಚಿತ್ರಿಸುವ ಜೊತೆಗೆ ಈ ಕಥೆ ಶ್ರೀಮಂತವರ್ಗದ ಮಕ್ಕಳ ಕೃತಕವಾದ ಬಾಲ್ಯ ಮತ್ತು ಬಡತನದಲ್ಲಿದ್ದರೂ ಕೂಡ ಪುಟ್ಟರಂಗಿಯಂತಹ ಮಕ್ಕಳ ನಿಸರ್ಗ ಸಿದ್ದವಾದ ಬದುಕನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ.

ಗುಲಾಬಿ:

ಮೊದಲ ಕಥಾಸಂಕಲನ "ಸ್ವಪ್ನ ಸುಂದರಿ"ಯ ಎರಡನೇ ಕಥೆ ಗುಲಾಬಿ. ಇದು ಪ್ರಗತಿಶೀಲ ಕಾಲಘಟ್ಟದ ನೇರ ಪರಿಣಾಮದೊಂದಿಗೆ ಮೂಡಿಬಂದಿರುವ ಕಥೆಯಾಗಿದೆ. ಒಂದು ಗುಲಾಬಿ ಹೂವಿನ ರೂಪಕದಲ್ಲಿ ಜನಪರ ನಿಲುವುಗಳನ್ನು ಪ್ರಗತಿಶೀಲ ಧೋರಣೆಯ ಚೌಕಟ್ಟಿನಲ್ಲಿ 'ಗುಲಾಬಿ' ಕಥೆ ಚಿತ್ರಿಸುತ್ತದೆ. ಗುಲಾಬಿಯ ಪ್ರಜ್ಞೆಯ ಮೂಲಕ ಕಥೆ ಶ್ರೀಮಂತ ಸಮಾಜವನ್ನು ನಿರೀಕ್ಷಿಸುತ್ತದೆ. ಗುಲಾಬಿಯನ್ನು ಬೆಳೆಸುವ ಮಾಲಿಯ ಹೆಂಡತಿ ದೇವರಿಗೆ ಹಾಕುವ ಸಲುವಾಗಿ ಒಂದು ಗುಲಾಬಿಯನ್ನು ಪಡೆದುಕೊಳ್ಳಬೇಕೆಂದರೆ ವ್ಯವಸ್ಥೆ ಅದನ್ನು ನಿರಾಕರಿಸುತ್ತದೆ. ಆದರೆ ಗುಲಾಬಿ ತನ್ನ ಸ್ಥಿತಿಯನ್ನು ನೆನೆದು ಆಕ್ರೋಶದಿಂದ ಶಪಿಸಿಕೊಳ್ಳುತ್ತದೆ.

ಕಥೆಯ ವಸ್ತು ಹೀಗಿದೆ. ಕಥೆಯ ಆರಂಭ ಗುಲಾಬ ಹೂವನ್ನು ಪ್ರೇಯಸಿಯ ನಗುಮೊಗಕ್ಕೆ ಮದುವಣಗಿತ್ತಿಗೆ ಅಲ್ಲದೆ ಹೆಣ್ಣಿನ ಬಳುಕಿನ ನಡೆಗೆ ಹೋಲಿಸುವ ಮೂಲಕ ಕಥೆ ತೆರೆದುಕೊಳ್ಳುತ್ತದೆ. ಆದರೆ ಆ ಗುಲಾಬಿ ತೋಟದೊಳಗೆ ಬರುವ ತನ್ನ ಶ್ರೀಮಂತೆ

ಒಡತಿಯನ್ನು ಕಂಡು ಮರೆಯಲ್ಲಿ ಅವಿತುಕೊಳ್ಳಲು ಯತ್ನಿಸುತ್ತದೆ. ಆದರೆ ವಿಧಿಯಿಲ್ಲದೆ ಆ ಶ್ರೀಮಂತೆಯ ಮುಡಿಯನ್ನು ಸೇರುವ ಗುಲಾಬಿ ಇಡೀ ಶ್ರೀಮಂತ ವರ್ಗದ ಭೋಗದ ಜೀವನದ ಹಿಂದಿರುವ ಡಾಂಬಿಕತೆಯನ್ನು ಖಂಡಿಸುತ್ತದೆ. ಅಲ್ಲದೆ ಆ ವರ್ಗದ ಕೃತಕ ಜೀವನ ವ್ಯಾಪಾರವನ್ನು ಹೀಗಳೆಯುತ್ತದೆ. ಹೀಗೆ ಗುಲಾಬಿಯ ಮೂಲಕ ಇಡೀ ಶ್ರೀಮಂತ ವರ್ಗದ ಜೀವನ ಕ್ರಮವನ್ನು ಬಿಚ್ಚಿ ತೋರಿಸಿದ್ದಾರೆ.

ಆ ತೋಟದ ಒಡತಿ ಬಂದಾಗ ಅವಿತುಕೊಳ್ಳುವ ಗುಲಾಬಿ ಸಾಕಿ ಸಲುಹುವ ಮಾಲಿಯ ಹೆಂಡತಿ ಬಂದಾಗ ಇಡೀ ಬಡತನದ ವರ್ಣನೆ ಕೊಡುವ ಜೊತೆಗೆ ಅವಳ ನೋಡುವಿಕೆಗಾಗಿ ಹಂಬಲಿಸುತ್ತದೆ. ಮಾಲಿಯ ಹೆಂಡತಿ ಆ ಗುಲಾಬಿಯ ಅಂಥವನ್ನು ನೋಡಿ ಅದನ್ನು ಕಿತ್ತಾಗ ಅದರ ಒಡತಿಯ ವರ್ತನೆ "ಬಡಜನರಿಗೆ ಅವರ ಗೋಳಿನ ಬಾಳಿನಲ್ಲಿ ಸೌಂದರ್ಯಕ್ಕಾಗಲಿ, ಕಲೆಗಾಗಲಿ ಮನದೆರೆಯಲು ಸಾಧ್ಯವಿಲ್ಲ, ಸೌಕರ್ಯವಿಲ್ಲ" ಎಂದು ಯೋಚಿಸುವ ಗುಲಾಬಿ ಕೊನೆಗೆ ಶ್ರೀಮಂತರಿಗೆ ಮೀಸಲಾದ ತನ್ನ ರೂಪವನ್ನೂ, ಪರಿಮಳವನ್ನು ಆಕ್ರೋಶದಿಂದ ಶಪಿಸಿಕೊಳ್ಳುತ್ತದೆ. ಹೀಗೆ ಆಕೆ ಆ ಗುಲಾಬಿಯ ಸಲುವಾಗಿ ತನ್ನ ಕೆಲಸ ಕಳೆದುಕೊಂಡು ಒಂದು ರೀತಿಯ ವರ್ಗ ಶೋಷಣೆಗೆ ಗುರಿಯಾಗಬೇಕಾಗುತ್ತದೆ.

ಈ ಕಥೆಯಲ್ಲಿ ಲೇಖಕರು ಒಂದು ಗುಲಾಬಿ ಹೂವಿನ ಸಂಕೇತದ ಮೂಲಕ ಬಡವ, ಶ್ರೀಮಂತವರ್ಗದ ಬೇದವನ್ನು ಸಹಜವಾಗಿ ತೋರಿಸಿದ್ದಾರೆ. ಬಡತನದ ಕಾರಣಕ್ಕಾಗಿಯೇ ಇಲ್ಲಿ ಕಂಡುಬರುವ ಮಾಲಿಯ ಹೆಂಡತಿ ಶೋಷಣೆಗೊಳಗಾಗ–ಬೇಕಾಗುತ್ತದೆ. ಕಾರಣ ತಾನೇ ನೀರು ಹೊಯ್ದುಬೆಳೆಸಿದ ಹೂ ಒಂದನ್ನು ಕಿತ್ತ ಕಾರಣಕ್ಕಾಗಿ, ಆಕೆ ಕೆಲಸ ಕಳೆದುಕೊಳ್ಳುವ ಮೂಲಕ ಆಕೆ ತನ್ನ ಬದುಕನ್ನು ದುರ್ಬರಸ್ಥಿತಿಗೆ ಎಳೆದುಕೊಳ್ಳುವ ವಸ್ತುವನ್ನು ಈ ಕಥೆ ಬಿಂಬಿಸುತ್ತದೆ.

ಗುಲಾಬಿ ಹೂ ನಿರೂಪಕನಾಗಿ ಕಂಡುಬರುವ ಜೊತೆಗೆ ಶ್ರೀಮಂತರ ತೋಟದಲ್ಲಿ ಹುಟ್ಟಿ ಅದು ಅನುಭವಿಸುವ ನೋವು–ನಲಿವುಗಳ ಜೊತೆಗೆ ಶ್ರೀಮಂತ ವರ್ಗದ ಕೃತಕವಾದ ಜೀವನ ಪದ್ಧತಿಯನ್ನು ಹೇಳುತ್ತದೆ. ಅಲ್ಲದೆ ಮಾಲಿಯ ಹೆಂಡತಿ ಬಂದಾಗ ನೋಡಲು ಹಾತೊರೆಯುವ ಹೂವು ತೋಟದ ಒಡತಿ ಶ್ರೀಮಂತೆ ಬಂದಾಗ ಅವಿತುಕೊಳ್ಳಲು ಮುಂದಾಗುತ್ತದೆ. ಈ ರೀತಿ ಸಮಾಜದಲ್ಲಿನ ಉಳ್ಳವರು ಇಲ್ಲದವರ ಮೇಲೆ ಮಾಡುವ ದೌರ್ಜನ್ಯವನ್ನು ಚಿತ್ರಿಸುವಲ್ಲಿ ಈ ಕಥೆ ಯಶಸ್ವಿಯಾಗಿದೆ.

ತು ಚೀಪ್ ತು ದಾಂಡ್ ತು ಬದ್ ರೆಡಿ:

ಈ ಕಥೆಯನ್ನು 'ಶವದ ಮನೆ' ಕಥಾಸಂಕಲನದಿಂದ ಆರಿಸಲಾಗಿದೆ. ಕಥೆಯ ಹೆಸರೇ ಒಂದು ರೀತಿಯ ವಿಚಿತ್ರ ಅನುಭವವನ್ನು ನೀಡುತ್ತದೆ. ಜೊತೆಗೆ ಆಟವೊಂದರಲ್ಲಿ ಬಳಸುವ ಸಾಮಾನ್ಯ ಅಂಶಗಳನ್ನು ಕಥೆಗೆ ಹೆಸರಾಗಿ ಆ ಮೂಲಕ ಬಡತನದ ಕಾರಣಕ್ಕಾಗಿಯೇ ಹುಡುಗನೊಬ್ಬನದ ಜೀವನದ ಶೋಷಣೆಯನ್ನು ಚದುರಂಗರು ತೋರಿಸಿದ್ದಾರೆ. ಇಲ್ಲಿ ಶೋಷಣೆ ಮಾಡುವುದು ಬಡತನ. ತನ್ನ ಬಡತನದ ಕಾರಣಕ್ಕಾಗಿಯೇ ತನ್ನ ಬಾಲ್ಯದ ಸವಿದಿನಗಳನ್ನು ದುಡಿಮೆಯಲ್ಲಿ ದೂಡಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲೂ ಸಹ ಆತ ಗೆಳೆಯರ ಗುಂಪಿನಲ್ಲಿ ಕೂಡಿ ಆಟ ಆಡಿ ಗೆದ್ದಿದ್ದ ಆದರೆ ಆತ ರಸ್ತೆಯಲ್ಲಿ ನಡೆಯುವಾಗ ಸಿಕ್ಕಿದ ಜನಾರ್ಧನ ಎಂಬ ವ್ಯಕ್ತಿಯು ಶಾಲೆಯ ಬಗ್ಗೆ ಕೇಳಿದಾಗ ಕರೀಂನದೆ ನೋವಾಗುತ್ತದೆ. ಏಕೆಂದರೆ ಆ ಶಾಲೆಯ ಜೀವನ ಬಾಲ್ಯದ ಆಟಪಾಠಗಳನ್ನು ಬದಿಗೊತ್ತಿ ದುಡಿಯಬೇಕಾದ ಅನಿವಾರ್ಯತೆ ಕರೀಂನದು.

ಪ್ರಗತಿಶೀಲ ಸಾಹಿತ್ಯದ ಬಹು ಮುಖ್ಯ ಅಂಶ ಬಡತನ ಈ ಕಾರಣಕ್ಕಾಗಿಯೇ ಕರೀಮ ಬೀಡಿ ಕಾರ್ಖಾನೆಯಲ್ಲಿ ಕಾರ್ಮಿಕನಾಗಿ ದುಡಿಯಬೇಕಾಗುತ್ತದೆ. ಕಾರ್ಖಾನೆಗೆ ಹೋಗುವ ಹಾದಿಯಲ್ಲಿ ಓರಗೆಯ ಹುಡುಗರ ಚಿಣ್ಣಿದಾಂಡಿನ ಆಟಕ್ಕೆ ಮರುಳಾಗಿ ಆತ ಆಟವನ್ನು ಆಡಲು ಮುಂದಾಗಿ ತನ್ನ ತಂದೆಯಿಂದ ಬೈಸಿಕೊಳ್ಳಬೇಕಾದ ಅನಿವಾರ್ಯತೆ ಕರೀಮನದು.

ಹೀಗೆ ಬಾಲ್ಯದ ಆಟಪಾಠಗಳಲ್ಲಿ ತಲ್ಲೀನನಾಗಬೇಕಿದ್ದ ಕರೀಮ ಬೀಡಿ ಕಾರ್ಖಾನೆಯ ಕಾರ್ಮಿಕನಾಗಿ ಬಡತನದ ಕಾರಣಕ್ಕಾಗಿ ಜೀವನದ ಬಂಡಿಯನ್ನು ಎಳೆಯಲು ತನ್ನ ಹೆಗಲು ಕೊಟ್ಟ ಅನಿವಾರ್ಯತೆಯ ಜೊತೆಗೆ ಕಾರ್ಖಾನೆಯ ಹೊರಗೆ ಹುಡುಗರು ಆಡುತ್ತಿರುವ 'ಚಿಣ್ಣಿ–ದಾಂಡು' ಆಟದ ತು ಚೀಪ್ ತು ದಾಂಡ್ ತು ಬದ್ ರೆಡಿ ಎಂಬ ಶಬ್ಧ ಆತನಲ್ಲಿ ದುಃಖದ ಜ್ವಾಲೆಯನ್ನು ಹೆಚ್ಚಿಸುತ್ತಿತ್ತು. ಈ ರೀತಿ ಆ ಹುಡುಗನು ತನ್ನ ಒರಗೆಯ ಹುಡುಗರ ಜೊತೆ ಆಡುವಾಗ "ಬಂದನಾ ಹುಲಿರಾಯನು" ಎಂಬಂತೆ ತನ್ನ ಆಟ ನಿಲ್ಲಿಸಿ ತಂದೆಯ ಶಿಕ್ಷೆಗೊಳಗಾಗಿ ಬೀಡಿ ಕಾರ್ಖಾನೆಯಲ್ಲಿ ದುಡಿಯಲು ಹೋಗುತ್ತಾನೆ. ಒಂದು ದೃಷ್ಟಿಯಿಂದ ನೋಡಿದರೆ 'ಬಣ್ಣದ ಬೊಂಬೆ' ಮತ್ತು 'ತು ಚೀಪ್ ತು ದಾಂಡ್ " ಈ ಎರಡು ಕಥೆಗಳು ಒಂದೇ ಜಾತಿಗೆ ಸೇರುತ್ತವೆ ಎಂದು ಹೇಳಬಹುದು. ಈ ರೀತಿ ಕಥೆಯಲ್ಲಿ ಬಡವರ ಬದುಕಿನ

ಕರಾಳ ಮುಖವನ್ನು ಓದುಗರ ಮುಂದೆ ಇಟ್ಟಿದ್ದಾರೆ. ಈ ಕರಾಳ ಮುಖವು ಅದರ ಹಿಂದಿರುವ ಸಮಾಜಿಕ ಮತ್ತು ಆರ್ಥಿಕ ಸಂದರ್ಭಗಳತ್ತ ನಮ್ಮ ಮನಸ್ಸನ್ನು ಸೆಳೆದು ಆಳವಾದ ಚಿಂತನೆಗೆ ಎಡೆ ಮಾಡಿಕೊಡುತ್ತದೆ. ಹೀಗೆ ಕರೀಮ ತನ್ನ ಬದುಕಿನ ಪ್ರಥಮ ಘಟ್ಟದಲ್ಲಿಯೇ ನಿರಾಸೆಯನ್ನೆದುರಿಸಬೇಕಾಗುತ್ತದೆ.

'ತುಚೀಪ್ ತುದಾಂಡ್' ಎಂಬ ಹೆಸರೇ ಒಂದು ರೀತಿ ವಿಚಿತ್ರವೆನಿಸುತ್ತದೆ. ಅಂದರೆ ಆಟದಲ್ಲಿ ಬಳಸುವ ಸಾಲನ್ನು ಕಥೆಯ ಶೀರ್ಷಿಕೆಯಾಗಿ ಬಳಸಿಕೊಂಡಿದ್ದಾರೆ. ಇದು ಗಿಲ್ಲಿ, ದಾಂಡು ಎಂಬ ಆಟವೊಂದರಲ್ಲಿ ಬಳಸುವ ಸಾಲಾಗಿದೆ. ಈಗ ಜನರ ಪಾಲಿಗೆ ಈ ಸಾಲು ಹೊಸದಾಗಿ ಕಂಡರೆ ಆಶ್ಚರ್ಯವೇನಿಲ್ಲವೆನ್ನಬಹುದು. ಆಧುನಿಕ ಆಟಗಳಾದ ಕ್ರಿಕೆಟ್ ಮುಂತಾದವುಗಳ ಭರಾಟೆಯಲ್ಲಿ ಈ ಆಟ ಕಣ್ಮರೆಯಾಗಿದೆ. 'ತುಚೀಪ್ ತುದಾಂಡ್' ಮತ್ತು 'ಬಣ್ಣದಬೊಂಬೆ' ಎಂಬ ಎರಡು ಕಥೆಗಳು ಒಂದು ದೃಷ್ಟಿಯಿಂದ ಒಂದೇ ಜಾತಿಗೆ ಸೇರಿದ ಕಥೆಗಳು. ಈ ಎರಡರಲ್ಲಿಯೂ ಎರಡು ಪುಟ್ಟಜೀವಿಗಳ ಎಳೆಯ ಮನಸ್ಸುಗಳಲ್ಲಿ ಬಡತನವು ಬೆಳೆಸುವ ಹೃದಯವೇದನೆ ಮತ್ತು ಮನಸ್ಸಿನ ತುಮುಲ ಮನೋಜ್ಞವಾಗಿ ಚಿತ್ರಿತವಾಗಿದೆ. ಬಣ್ಣದ ಬೊಂಬೆಯಲ್ಲಿ ಬರುವ ಪುಟ್ಟರಂಗಿ, ಆಡುವುದಕ್ಕಾಗಿ ತನ್ನದೇ ಆದ ಒಂದು ಬೊಂಬೆಯನ್ನು ಹೊಂದಬೇಕೆಂಬ ಆಸೆಯಿದ್ದವಳು. ಅದರಿಂದ ವಂಚಿತಳಾಗಿದ್ದಾಳೆ.

ಈ ಕಥೆಯಲ್ಲಿ ಬರುವ ಕರೀಮನಿಗೆ ತನ್ನ ಓರಗೆಯ ಹುಡುಗರೊಂದಿಗೆ ಆಡುವ ಮನಸ್ಸು. ಆದರೆ ತಂದೆಯ ಶಿಕ್ಷೆಗೆ ಹೆದರಿ ಬೀಡಿ ಕಾರ್ಖಾನೆಯಲ್ಲಿ ದುಡಿಯಬೇಕಾದ ಅನಿವಾರ್ಯತೆ. ಆತನದು ಹೀಗೆ ಬಾಲ್ಯದ ಆಟಪಾಠಗಳಿಂದ ಕರೀಮ್ ವಂಚಿತನಾಗಿದ್ದಾನೆ. ಅಲ್ಲದೆ ಆತ ಕಾರ್ಖಾನೆಯಲ್ಲಿದ್ದರೂ ಸಹ ಆತನ ಮನಸ್ಸು ಆಟದ ಸುತ್ತಮುತ್ತಲೇ ಕೇಂದ್ರೀಕೃತವಾಗಿರುವ ಆತನ ಮನಸ್ಸಿನ ಹೊಯ್ದಾಟವನ್ನು ಈ ಕಥೆ ಚಿತ್ರಿಸುತ್ತದೆ. ಈ ಕಥೆಯಲ್ಲಿ ಬಡವರ ಬಾಳಿನ ಒಂದು ಕರಾಳ ಮುಖವನ್ನು ಓದುಗರ ಮುಂದೆ ಇಟ್ಟಿದ್ದಾರೆ.

ಇಣಿಕುನೋಟ:

ಈ ಕಥೆಯ ವಸ್ತು ಹೀಗಿದೆ. ಹಳ್ಳಿಯ ಮುಗ್ಧನಾದ ಧೀರನು ಕೋರ್ಟನ್ನು ನೋಡಲು ಹೋಗುವುದರಿಂದ ಕಥೆ ಆರಂಭವಾಗುವುದು. ಧೀರನು ಕೋರ್ಟನ್ನು ನೋಡಲು ಹೋಗಿ ಪೊಲೀಸರ ಕೈಗೆ ಸಿಲುಕಿ ಅಪರಾಧಿಯಾಗುವನು. ಅನಂತರ ಯಾರೋ ಕದ್ದ ಸರವು ಪೊಲೀಸರಿಗೆ ಸಿಕ್ಕಿ ಧೀರನು ಶಿಕ್ಷೆ ಅನುಭವಿಸುವನು. ತನ್ನ

ಊರಿನ ಮೋಟನು ಧೀರನ ಮೇಲಿನ ಸಿಟ್ಟಿನಿಂದಾಗಿ ಜಮೀನಿಗೆ ಸಂಬಂಧಪಟ್ಟ ವಿಚಾರದಿಂದಾಗಿ ಅವನೇ ಹುಲ್ಲಿನ ಮೆದೆಗೆ ಬೆಂಕಿಯಿಟ್ಟು ಅದನ್ನು ಧೀರನ ಮೇಲೆ ಹಾಕಿ ಆತ ಮತ್ತೆ ಜೈಲಿನಲ್ಲಿ ಶಿಕ್ಷೆ ಅನುಭವಿಸುವಂತೆ ಮಾಡುತ್ತಾನೆ. ತನ್ನ ಹೆಂಡತಿ ಮತ್ತು ಮೋಟನ ಸರಸ ಸಲ್ಲಾಪವನ್ನು ಕಂಡು ಅವನನ್ನು ಕೊಲ್ಲಲು ಹೋಗಿ ತನ್ನ ಹೆಂಡತಿಯ ಸುಳ್ಳು ಮಾತುಗಳಿಗೆ ಬಲಿಯಾಗಿ ಶಿಕ್ಷೆ ಅನುಭವಿಸಿ ತಾನು ಯಾವ ರೀತಿ ಬದುಕಬೇಕೆಂಬ ದಾರಿಯನ್ನು ಧೀರ ಕಂಡುಕೊಳ್ಳುವುದರೊಳಗೆ ಕಥೆ ಅಂತ್ಯವಾಗುತ್ತದೆ.

ಈ ಕಥೆಯಲ್ಲಿ ಧೀರನನ್ನು ಶೋಷಿಸುವುದು 'ಕಾನೂನು' ಮತ್ತು 'ಸಮಾಜ', ಅಲ್ಲದೆ ವ್ಯಕ್ತಿಯನ್ನು ಹಾಳುಮಾಡುವಲ್ಲಿ ಸಮಾಜವು ವಹಿಸುವ ಪಾತ್ರ ಎಂಥದ್ದು ಎಂಬುದನ್ನು ಮತ್ತು ಕಾನೂನಿನ ಹೆಸರಿನಲ್ಲಿ ಧೀರನನ್ನು ಶೋಷಿಸುವ ಬಗೆಯನ್ನು ಹೇಳಲಾಗಿದೆ. ಹಳ್ಳಿಯ ಧೀರನೆಂಬ ಮುಗ್ಧ ಕೋರ್ಟನ್ನು ನೋಡುವ ಆಸೆಗಾಗಿ ಅದರ ಕಡೆ ಹರಿಸುವ ಒಂದು ಸಣ್ಣ ಇಣುಕುನೋಟ ಅವನ ಇಡೀ ಬದುಕಿನ ಹಾದಿಯನ್ನೇ ತಪ್ಪಿಸುವಂಥ ದುರಂತ 'ಇಣುಕುನೋಟ'ದ ವಸ್ತು.

ಮುಗ್ಧತೆಯು ಸಮಾಜದಲ್ಲಿ ಮನುಷ್ಯ ಮನುಷ್ಯನನ್ನು ಶೋಷಿಸುವ ಒಂದು ಮುಖ್ಯ ಸಾಧನವಾಗಬಹುದು ಎಂಬುದನ್ನು ಕಥೆ ಚಿತ್ರಿಸುತ್ತದೆ. ಸಮಾಜ ಅಪರಾಧಿಯನ್ನು ಸೃಷ್ಟಿಸುತ್ತದೆ ಎಂಬ ಮಾತಿಗೆ ಇಲ್ಲಿನ ಧೀರ ಇದಕ್ಕೆ ಒಂದು ಉದಾಹರಣೆಯಾಗುತ್ತಾನೆ.

ಸಭ್ಯ ಸಂಭಾವಿತನಾದ ಧೀರ ಎಂಬ ರೈತನು ನ್ಯಾಯಾಲಯವನ್ನು ನೋಡುವ ಕೌತುಕವೇ ಕಾರಣವಾಗಿ ಆಸೆಯಿಂದ ಕೆಲವು ಘಟನೆಗಳಿಂದ ಶಾಶ್ವತ ಅಪರಾಧಿಯಾಗುತ್ತಾನೆ. ಧೀರನ ತಾಯಿಯಾದವಳು ಹೇಳುವ 'ಕೋರ್ಟನ್ನು ನೋಡಬೇಡ ಕೇಡಾಗುವುದು' ಎಂಬ ಹಿತನುಡಿ ಅವನ ಬಾಳಿನಲ್ಲಿ ಸತ್ಯವಾಗುತ್ತದೆ. ಗೆಳೆಯ ಕುಳ್ಳ ಸಿದ್ದನ ಪ್ರೋತ್ಸಾಹದ ಮೇರೆಗೆ ಧೀರನು ಕೋರ್ಟು ನೋಡಲು ಬಂದವನು ತನ್ನ ಸಹಜ ವೇಷಭೂಷಣಗಳಿಂದಲೇ ಪೊಲೀಸನ ಕಾಕ ದೃಷ್ಟಿಗೆ ಬೀಳುವನು. ಕಳ್ಳನೆಂಬ ಅನುಮಾನದಿಂದ ಧೀರನನ್ನು ಲಾಕಪ್‌ಗೆ ತಳ್ಳುವರು. ಪರಿಸ್ಥಿತಿ ಧೀರನ ವಿರುದ್ಧ ಇದ್ದು ಎಷ್ಟೊಂದು ವಿಪರ್ಯಾಸ, ದಾರುಣತೆಯಿಂದ ಕೂಡಿರುತ್ತದೆಂದರೆ ಸರಗಳ್ಳನೊಬ್ಬ ಧೀರನ ಮುಂದೆ ಸರವನ್ನು ಎಸೆದು ಹೋದದ್ದೇ ಕಾರಣವಾಗಿ ನಿರುಪಾಯನಾದ ಧೀರ ಸರಗಳ್ಳತನವನ್ನು ಹೊತ್ತು ಮತ್ತೆ ಜೈಲು

ಸೇರುವನು. ಅವನ ಹಳ್ಳಿ, ಹೆಂಡತಿ ನಿಜವಾದ ಅಪರಾಧಿಯಂತೆ ತನ್ನನ್ನು ನೋಡುವುದರ ಕುರಿತು ಆತ ಹತಾಶನಾಗುತ್ತಾನೆ.

ಧೀರನ ಬಾಳಿನಲ್ಲಿ ವಿಧಿಯ ಆಟ ಅಷ್ಟಕ್ಕೆ ನಿಲ್ಲುವುದಿಲ್ಲ. ಅವನ ಪಕ್ಕದ ಹೊಲದ ಮೋಟನು ಧೀರನ ಜಾಗವನ್ನು ಒತ್ತುವರಿ ಮಾಡಿಕೊಳ್ಳುವುದು ಇದೇ ಕಾರಣವಾಗಿ ಮೋಟನೇ ತನ್ನ ಮೆದೆಗೆ ತಾನೇ ಬೆಂಕಿಯಿಟ್ಟು ಆ ಅಪರಾಧ ಧೀರನ ಮೇಲೆ ಬರುವಂತೆ ಮಾಡಿ ಧೀರ ಮತ್ತೆ ಜೈಲು ಸೇರುವುದು ನಡೆಯುತ್ತದೆ. ಅವನು ಮತ್ತೆ ಜೈಲಿನಿಂದ ಬಂದ ನಂತರ ನಡೆಯುವ ಮೋಟ ಮತ್ತು ಧೀರನ ಹೆಂಡತಿಯ ಸರಸವನ್ನು ಕಣ್ಣಾರೆ ಕಂಡು ಅವರನ್ನು ಕೊಲೆ ಮಾಡಲು ಹೊರಡುವುದು ಇದರಿಂದ ಮತ್ತೆ ಜೈಲು ಸೇರುವುದು. ಹೀಗೆ ಹಂತವಾಗಿ ಧೀರನು ಕಾನೂನು ಮತ್ತು ಸಮಾಜದ ತಪ್ಪು ವ್ಯಾಖ್ಯಾನದಿಂದ ಒಳ್ಳೆಯತನದಿಂದ ಬಲವಂತವಾಗಿ ಕೆಟ್ಟತನಕ್ಕೆ ಸಾಗುವ ಅವರೋಹಣ ಕ್ರಮ ಇದೆ.

ಈ ಕಥೆಯಲ್ಲಿ ಧೀರನು ನಿಷ್ಕಾರಣವಾಗಿ ಸನ್ನಿವೇಶ, ಸಂದರ್ಭಗಳ ಒತ್ತಡಕ್ಕೆ ಸಿಲುಕಿ ಶಿಕ್ಷೆ ಅನುಭವಿಸುವಂತಾಗುತ್ತದೆ. ಅಲ್ಲದೆ ಮಡದಿಯ ತಿರಸ್ಕಾರಕ್ಕೆ ತುತ್ತಾಗುತ್ತಾನೆ. ನ್ಯಾಯದೇವತೆಯ ಕಣ್ಣಿಗೆ ಬಟ್ಟೆ ಕಟ್ಟಿರುವ ರೀತಿ ಅನ್ಯಾಯವಾಗಿ ಧೀರನನ್ನು ನ್ಯಾಯವ್ಯವಸ್ಥೆ ಹಾಗೂ ಸಮಾಜ ಶೋಷಣೆಗೆ ಒಳಗು ಮಾಡುತ್ತಾರೆ.

ಮುಗ್ಧತೆಯು ಸಮಾಜದಲ್ಲಿ ಮನುಷ್ಯ ಮನುಷ್ಯನನ್ನು ಶೋಷಿಸುವ ಒಂದು ಮುಖ್ಯ ಸಾಧನವಾಗಬಹುದು ಎಂಬುದನ್ನು ಕಥೆ ಚಿತ್ರಿಸುತ್ತದೆ. ಸಮಾಜ ಅಪರಾಧಿಯನ್ನು ಸೃಷ್ಟಿಸುತ್ತದೆ ಎಂಬ ಮಾತಿಗೆ ಧೀರ ಇದಕ್ಕೆ ಒಂದು ಉದಾಹರಣೆಯಾಗುತ್ತಾನೆ. ಹೀಗೆ ಜೈಲುವಾಸ ಅನುಭವಿಸಿ ಬಂದಂತಹ ಧೀರನನ್ನು ಅವನ ಹಳ್ಳಿ, ಹೆಂಡತಿ ಯಾರೂ ಅವನ ಹತ್ತಿರ ಮೊದಲಿನಂತೆ ಸಲುಗೆಯಿಂದ ವರ್ತಿಸುವುದಿಲ್ಲ. ನಿಜವಾದ ಅಪರಾಧಿಯಂತೆಯೇ ತನ್ನನ್ನು ಹಳ್ಳಿ ನೋಡುವುದ ಕುರಿತು ಧೀರ ಹತಾಶನಾಗುತ್ತಾನೆ. ಇವತ್ತಿಗೂ ಸಹ ಹಳ್ಳಿ ಹಆಗೂ ನಗರ ಪ್ರದೇಶಗಳಲ್ಲಿ ಪೊಲೀಸು ಠಾಣೆಗೆ ಹೋಗುವುದೇ ಅಪರಾಧ ಎಂಬುದು ಇವತ್ತಿಗೂ ಸಹ ಬದಲಾಗದ ಚಿತ್ರವೆಂದರೆ ತಪ್ಪಾಗದು.

ಈ ಕಥೆಯಲ್ಲಿ ಪಟ್ಟಣದಲ್ಲಿ ಕಾಣುವ ಕೋರ್ಟನ್ನು ನೋಡುವ ಕುತೂಹಲದಿಂದ ಬಂದ ಹಳ್ಳಿಗನೊಬ್ಬ ಸನ್ನಿವೇಶ ಸಂದರ್ಭಗಳ ಒತ್ತಡಕ್ಕೆ ಸಿಕ್ಕು, ನಿಷ್ಕಾರಣವಾಗಿ ಪೋಲಿಸರ ಶಿಕ್ಷೆಗೂ, ಜೈಲುವಾಸಕ್ಕೂ ಒಳಗಾಗುತ್ತಾನೆ. ಶಿಕ್ಷೆಯ ಅವಧಿ

ಮುಗಿದು ತನ್ನ ಊರಿಗೆ ಹಿಂದಿರುಗಿದಾಗ ಅವನು ಮಡದಿಯ ತಿರಸ್ಕಾರಕ್ಕೆ ಒಳಗಾಗುತ್ತಾನೆ. ಊರಿನವರೆಲ್ಲರ ನಿಂದೆಗೆ ಗುರಿಯಾಗುತ್ತಾನೆ. ಮೈಮುರಿದು ದುಡಿಯುತ್ತಿದ್ದರೂ ಸ್ವರ್ಗದಂತೆ ಸುಖಕರವಾಗಿದ್ದ ಅವನ ಬಾಳು ದುರ್ಗತಿಗಿಳಿಯುತ್ತದೆ. ಅಪರಾಧ ನಿವಾರಣೆಯ ಹೊಣೆಹೊತ್ತ ನ್ಯಾಯಾಧಿಪತಿಯೇ ತನ್ನ ಭ್ರಷ್ಟತನದಿಂದ ಆ ಮುಗ್ಧನನ್ನು ಕೈಯ್ಯಾರೆಯಾಗಿ ಅಪರಾಧಿಯಾಗಿ ಮಾರ್ಪಡಿಸುತ್ತಾನೆ. ಧೀರನೂ ಜೈಲುವಾಸಕ್ಕೆ ಒಳಗಾದಾಗ ಸಮಾಜದ ಒಬ್ಬೊಬ್ಬರು ಅವನ ವೈರಿಗಳಾಗುತ್ತಾರೆ. ಅವನ ಪ್ರೇಮದ ಮಡದಿ ಅವನ ಶತ್ರುವಿನ ಮಿತ್ರಳಾಗಿ, ಪ್ರೇಮಿಯಾಗಿ, ಅವನನ್ನು ಕೈಯಾರೆ ಸಮಾಜದ ಶೋಷಣೆಗೆ ಒಳಗೂ ಮಾಡುತ್ತಾಳೆ. ಮೊದಲಿಗೆ ಇಲ್ಲಿ ಧೀರನನ್ನು ಶೋಷಿಸುವುದು ಕಾನೂನು.

ಕ್ವಾಟೆ:

ಈ ಕಥೆಯನ್ನು ಇದೇ ಹೆಸರಿನ ೧೩ ಕಥೆಗಳುಳ್ಳ ಕಥಾ ಸಂಕಲನದಿಂದ ಆರಿಸಲಾಗಿದೆ. ಅರಿಕೆಯಲ್ಲಿ ಚದುರಂಗರೇ ಹೇಳುವಂತೆ "ಹಿಂದಿನ ಕಥೆಗಳಿಗಿಂತ ಇಲ್ಲಿಯ ಕಥೆಗಳು ಭಿನ್ನವಾಗಿರುವುದನ್ನು" ಗಮನಿಸಬಹುದು.

ಕ್ವಾಟೆ ಕಥೆ ತುಂಬಾ ಗಂಭೀರವಾಗಿದೆ. ಈ ಕಥೆಯ ವಸ್ತು ಹೀಗಿದೆ. ಇಲ್ಲಿ ಬರುವ ಹೆಣ್ಣಿಗೆ ಕ್ವಾಟೆ ಕಟ್ಟಿರುವವರು ಬೇರೆ ಯಾರು ಅಲ್ಲ ಸ್ವತಃ ತಂದೆಯೇ! ಅದಕ್ಕೆ ಕಾರಣ ಅವನ ಸ್ವಾರ್ಥವೇ. ಈ ಕಥೆಯು ಹೆಣ್ಣಿನ ಶೋಷಣೆಯ ಒಂದು ಮುಖದ ಸಂಕೀರ್ಣ ಅಭಿವ್ಯಕ್ತಿಯನ್ನು ಈ ಕಥೆ ತೋರಿಸುತ್ತದೆ. ಎದೆ ಎತ್ತರದ ಮಗಳ ಸ್ವಾಭಾವಿಕ ಬಯಕೆಗಳೇನು ಎಂಬುದರ ಬಗೆಗೆ ಯಾವುದೇ ಆಲೋಚನೆ ಮಾಡದ ತಂದೆ ಊರಿಗೆಲ್ಲಾ ದೊಡ್ಡ ಮರ್ಯಾದಸ್ಥನ ಸ್ಥಾನದಲ್ಲಿರುವಾತ. ಸಂಕ್ರಾಂತಿ ಹಬ್ಬದಲ್ಲಿ ದನಕರು ಎತ್ತುಗಳ ಸಿಂಗಾರದಲ್ಲಿರುವ ಆಸಕ್ತಿಯ ಒಂದು ಪಾಲು ಮಗಳ ಮದುವೆಯ ಬಗ್ಗೆ ಆಲೋಚಿಸಿದವನಲ್ಲ. ಹೆಂಡತಿ ಇಲ್ಲದ ತನ್ನನ್ನು ನೋಡಿಕೊಳ್ಳುವ ಕೆಲಸದಲ್ಲಿಯೇ ಅವಳನ್ನು ನಿಲ್ಲಿಸಿಬಿಡುತ್ತಾನೆ. ಹಾಗಾಗಿ ವಯಸ್ಸು ಕಳೆದರೂ ಸಹ ಲೈಂಗಿಕ ಅನುಭವವೇ ಇಲ್ಲದೇ ಮಗಳು ಬೆಳೆಯುತ್ತಾಳೆ. ತಡೆಹಿಡಿಯಲ್ಪಟ್ಟ ಕಾಮ ಅಪ್ಪನಿಗೆ ಪ್ಲೇಗು ತಗುಲಿದಾಗ ಇಲಾಜು ಮಾಡಲು ಬರುವ ನಾಟಿ ವೈದ್ಯನ ಆಕ್ರಮಣವನ್ನು ಕನಸಿನ ರಾಜಕುಮಾರ ಬಂದ ಕನಸು ನನಸಾದ ಅನುಭವಕ್ಕೆ ಒಳಗೂ ಮಾಡುತ್ತದೆ.

ಅವರ ಪರಿಣಾಮವಾಗಿ ಆಗುತ್ತಿರುವ ಮಗುವನ್ನು ಸಾಕಿಕೊಳ್ಳುವ ನಿರ್ಧಾರದೊಂದಿಗೆ ಕಥೆ ಮುಕ್ತಾಯವಾಗುತ್ತದೆ.

"ಭದ್ರತೆಗೆ ಮತ್ತು ರಕ್ಷಣೆಗೆ ಸಂಕೇತವಾದ ಕೋಟೆ ಇಲ್ಲಿ ಸೆರೆಗೆ ಸಂಕೇತವಾಗಿದೆ. ಒಂದು ದೃಷ್ಟಿಯಿಂದ ನೋಡಿದರೆ ಹೆಣ್ಣಿಗೆ ರಕ್ಷಣೆ ನೀಡುವ ಘನ ಉದ್ದೇಶದಿಂದಲೇ ಹೆಣ್ಣಿನ ಸ್ವಾತಂತ್ರ್ಯದ ಅಪಹರಣವನ್ನು ನಮ್ಮ ಸಂಪ್ರದಾಯ ಮಾಡಿದೆ"[೧] ಎಂದು ಕೆ.ನರಸಿಂಹಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಈ ಕಥೆಯಲ್ಲಿ ಪುರುಷ ಇಲ್ಲಿ ತನ್ನ ಕಾಮಕ್ಕೆ ಕೊಡುವ ಪ್ರಾಶಸ್ತ್ಯವನ್ನು ಹೆಣ್ಣಿನ ಕಾಮದ ವಿಚಾರದಲ್ಲಿ ಕೊಡಲು ಬಯಸಿದ್ದಕ್ಕೆ ಪ್ರತಿನಿಧಿಯಾಗಿ ಅಪ್ಪನಿದ್ದಾನೆ. ಹೆಂಡತಿಯಿಂದ ಸುಖ ಸಿಗದ ಬಗೆಗೆ ಹಳಹಳಿಸುವ ಆತ ಅದಕ್ಕಾಗಿ ವಿವಾಹದ ಆಚೆಗೆ ಓಂಕಾರಮ್ಮನಂಥ ಹೆಣ್ಣುಗಳಿಂದ ಅದನ್ನು ಮರೆಯುತ್ತಾನೆ. ತನ್ನ ಸ್ವಾರ್ಥಕ್ಕಾಗಿ ಅವನು ಮಗಳ ವಿಷಯದಲ್ಲಿ ಒಂದು ಕೋಟೆಯನ್ನು ಕಟ್ಟುವ ಕೆಲಸ ಮಾಡಿಬಿಡುತ್ತಾನೆ. ಆ ಕೋಟೆ ಆತನ ಸಾವಿನೊಡನೆ ಛಿದ್ರಗೊಳ್ಳುವುದು ಅತ್ಯಂತ ಧ್ವನಿಪೂರ್ಣವಾಗಿದೆ.

ಕಥೆಯ ನಿರೂಪಕಿಯೊಂದಿಗಿನ ಪಂಡಿತನ ಸಂಬಂಧ ಕುಟುಂಬದ ಹೊರ ಆವರಣದಲ್ಲಿ ನಡೆಯುವಂತದ್ದು. ಶೋಷಣೆಗೆ ಒಳಗಾದವಳಿಗೆ ಶೋಷಣೆಯ ಅರಿವೇ ಇಲ್ಲ. ಪಂಡಿತನೊಂದಿಗೆ ಅವಳು ಸುಖಿಸುವುದು ಕನಸಲ್ಲ. ಆದರೂ ಮುಂದೆ ಅಪರಾಧಿ ಪ್ರಜ್ಞೆ ಅವಳನ್ನು ಬಾಧಿಸುವುದಿಲ್ಲ.

'ಕ್ವಾಟೆ'ಯಲ್ಲಿ ನಾಯಕಿಯ ಭವಿಷ್ಯಕ್ಕೆ ಸಾಮಾಜಿಕ ವ್ಯವಸ್ಥೆಯಲ್ಲಿಯೇ ಅವಕಾಶ ದೊರಕಿ ಕಥೆ ಸುಖಾಂತವಾಗುತ್ತದೆ. ಕುಟುಂಬದ ಪುರುಷ ಪ್ರಧಾನ ದಬ್ಬಾಳಿಕೆಯನ್ನು ಅಯ್ಯ ಪ್ರತಿನಿಧಿಸುತ್ತಾನೆ. ತನ್ನ ಸೌಕರ್ಯಕ್ಕಾಗಿ ಮಗಳ ಲೈಂಗಿಕ ಸೌಖ್ಯಕ್ಕೆ ಎರವಾಗುತ್ತಾನೆ. ಚದುರಂಗರು ಈ ಕಥೆಯಲ್ಲಿ ಗಂಡಿಗೆ ಮಾತ್ರ ಲೈಂಗಿಕ ಸ್ವಚ್ಛಂದತೆಯನ್ನು ಉಳಿಸಿಕೊಂಡು ಹೆಣ್ಣನ್ನು ಲೈಂಗಿಕ ಶೋಷಣೆಗೆ ಗುರಿಮಾಡುವ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ ವಿರುದ್ಧ ಬಂಡಾಯವೇಳುವ ಪ್ರಗತಿಶೀಲ ಮನೋಧರ್ಮದ ಅಭಿವ್ಯಕ್ತಿ ಕಂಡಿದೆ.

ಇಡೀ ಕಥೆ ಹರಳೆಣ್ಣೆ ತೆಗೆಯುವ ಮೂಲಕ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಸಾಂಕೇತಿಕವಾಗಿ ಓರ್ವ ಹೆಣ್ಣುಮಗಳ ನಿರೂಪಣೆಯಲ್ಲಿ ಕಥೆ ತೆರೆದುಕೊಳ್ಳುತ್ತದೆ.

---

೧. ಚದುರಂಗರ ವ್ಯಕ್ತಿ ಅಭಿವ್ಯಕ್ತಿ, ಸಂ. ಡಿ.ಎ.ಶಂಕರ್,ಐ.ಬಿ.ಎಲ್. ಪ್ರಕಾಶನ, ಪು. ೧೪೩.

ಗ್ರಾಮೀಣ ಕುಟುಂಬದ ಒಳಗಿನ ಮತ್ತು ಹೊರಗಿನ ಸಂಬಂಧಗಳ ಅಡಿಯಲ್ಲಿ ಈ ಕಥೆಯಲ್ಲಿ ಬರುವ ಹೆಣ್ಣನ್ನು ನೋಡಿದಾಗ ಬೆಳಕಿಗೆ ಬರುವ ಅಂಶಗಳು ಕುತೂಹಲಕಾರಿಯಾಗಿದೆ. ಹೆಣ್ಣಿನ ಶೋಷಣೆಯ ಒಂದು ಮುಖದ ಸಂಕೀರ್ಣ ಅಭಿವ್ಯಕ್ತಿಯನ್ನು ಈ ಕಥೆ ನಿರೂಪಿಸುತ್ತದೆ.

ಇಲ್ಲಿ ಆಕ್ರಮಣ ಮಾಡುವ ಪಂಡಿತ ಮೇಲ್ವರ್ಗದವನು. ಅದು ಆಕ್ರಮಣವೆನಿಸದೆ ಒಪ್ಪಿಗೆ ಗಳಿಸಿಕೊಂಡು ಬಿಡುವುದು ಮಗಳನ್ನು ನಿಸರ್ಗ ಸಹಜ ರೀತಿಯಲ್ಲಿ ಬೆಳೆಯಗೊಡದೇ ಹೋದ ಅಪ್ಪನಿಂದ ಹಾಗಾಗಿ ಮಗಳು ಅವನ್ನು ಒಂದು ಸುಖದ ಅನುಭವವಾಗಿ ಪಡೆದದ್ದು ನಿಸರ್ಗ ಸಹಜ ನಡೆಯಾಗಿಯೇ ಬಿಡುತ್ತದೆ. ಅದರ ಪರಿಣಾಮವಾಗಿ ಹುಟ್ಟುವ ಮಗುವನ್ನು 'ಗಂಡಾದರೆ ನನ್ನ ಜೀವ ತೇದು ದೊಡ್ಡದು ಮಾಡ್ತೀನಿ' ಎಂದು ಅವಳು ಅಂದುಕೊಂಡರೆ ಅವರಪ್ಪ ಇಟ್ಟುಕೊಂಡಿದ್ದ ಓಂಕಾರಮ್ಮ 'ಹೆಣ್ಣಾದರೇನಂತೆ ನಂಗೆ ಕೊಟ್ಟುಬಿಡು ನಾನು ಸಾಕೋತೀನಿ' ಎಂದು ಬಹಳ ಸಹಜವಾಗಿ ಸಂತೋಷದಿಂದ ಸ್ವಾಗತಿಸಲು ತಯಾರಾಗಿಬಿಡುತ್ತಾಳೆ.

ಕ್ವಾಟೆ ಎನ್ನುವ ಗ್ರಾಮ್ಯ ಉಚ್ಚಾರಣೆಯು ಕಥೆಯ ಪ್ರಜ್ಞಾ ಪ್ರವಾಹ ತಂತ್ರವನ್ನು ಶೀರ್ಷಿಕೆಯ ಹಂತದಲ್ಲಿಯೇ ಘೋಷಿಸುತ್ತದೆ. ಅವಳ ದೃಷ್ಟಿಕೋನದಿಂದಲೇ ವ್ಯವಸ್ಥಿತವಾಗಿ ಅವಳು ಆಡಬಹುದಾಗಿದ್ದ ಮಾತುಗಳಲ್ಲಿಯೇ ಅವಳ ಅಲ್ಲಿಯವರೆಗಿನ ಬಾಳಿನ ಘಟನೆಗಳು, ಭಾವನೆಗಳು, ಚಿಂತನೆಯು ಅಭಿವ್ಯಕ್ತವಾಗುತ್ತದೆ. ಒಬ್ಬಳೇ ಕುಳಿತು ಮನಸ್ಸಿನಲ್ಲಿಯೇ ಮೆಲುಕು ಹಾಕುವ ಈ ರೀತಿಯಲ್ಲಿ ಆವೇಶಕ್ಕಿಂತಲೂ ಅರಿವನ್ನು ವಿಸ್ತರಿಸುವ ಗುರಿ ಸಾಧಿತವಾಗುತ್ತದೆ. ಅವಳ ಇಂತಹ ನಿರೂಪಣಾ ವಿಧಾನದಲ್ಲಿ ಅವಳು ಏನನ್ನೂ ಬಚ್ಚಿಟ್ಟುಕೊಳ್ಳಬೇಕಾಗಿಲ್ಲ. ಅತೀತವಾದುದೇ ಅವಳ ಒಳಗಣ್ಣಿನೆದುರಿಗೆ ವರ್ತಮಾನವಾಗಿ ನಿಲ್ಲುವ ಕ್ರಮ ನಾಟಕೀಯವಾಗಿದೆ. ಅವಳ ಪ್ರಜ್ಞಾಪ್ರವಾಹಕ್ಕೆ ದಡಗಳನ್ನು ಕಟ್ಟುವಂತೆ ಚದುರಂಗರು ಒಂದು ವಾಸ್ತವಿಕ ಚೌಕವನ್ನು ಒದಗಿಸಿದ್ದಾರೆ.

ಅವಳ ಚಿತ್ತದಲ್ಲಿ ಲೈಂಗಿಕ ಪ್ರಜ್ಞೆ ಕ್ರಮಕ್ರಮವಾಗಿ ವಿಕಾಸಹೊಂದುವುದರ ಚಿತ್ರಕಥೆಯ ಸತ್ವ. ಹರಯಕ್ಕೆ ಹೆಜ್ಜೆ ಇಟ್ಟ ಹೆಣ್ಣಿನ ಅಂತರಂಗದ ಶೋಧನೆ ಅವಳ ಒಳನಾಡಿಗಳಲ್ಲಿಯೇ ನಡೆಯುತ್ತದೆ. ಈ ಕಥೆಯ ಲೈಂಗಿಕ ಪ್ರಜ್ಞೆ ವಿಕಾಸಗೊಳ್ಳುವ ಕಾರಣಗಳನ್ನು ನಾವು ಕಾಣಬಹುದು. ಅವಳು ಮೈನೆರೆದ ಸಮಯದಲ್ಲಿಯೇ ಅವಳ ಮೇಲೆ ಹಿಂದಿನಿಂದ ಹೋರಿಗರು ಹಾಯುವುದು ಅವಳ ಹರೆಯದಲ್ಲಿ ಒಂದು ದೀವಳಿಗೆಯ ರಾತ್ರಿಯಲ್ಲಿ ಕನಸು ಕಾಣುತ್ತಿದ್ದಾಗ ಪಂಡಿತನ ಅತ್ಯಾಚಾರದ ಪ್ರಯತ್ನ

ಮತ್ತು ತನ್ನ ದೌರ್ಬಲ್ಯದಿಂದ ಅವಳು ಅದಕ್ಕೆ ನೀಡುವ ಸಹಕಾರ ಮತ್ತು ಅದರಿಂದ ಸಿಗುವ ಸಂತೃಪ್ತಿ. ಉದ್ದಕ್ಕೂ ಅವಳೊಡನೆ ಅವಳ ಭಾವ ನಡೆಸುವ ಸರಸ, ಬಾಗಿಲ ಮರೆಯ ಅಕ್ಕ-ಭಾವಂದಿರ ರತಿಲೀಲೆಯ ಶಬ್ದಗಳು ಅವಳ ಕಿವಿಗೆ ಬೀಳುವಿಕೆ, ಓಂಕಾರವ್ವನ ಮತ್ತು ಅವಳ ಅಯ್ಯನ ಸಂಬಂಧದ ಕತೆ ಇವು ಲೈಂಗಿಕ ಪ್ರಜ್ಞೆಯನ್ನು ಕೆರಳಿಸುವ ಪ್ರಭಾವಗಳು ಪ್ರತಿವರ್ಷವೂ ಸಂಕ್ರಾಂತಿಯ ಸಮಯದಲ್ಲಿ ಗೋವುಗಳ ವಿಷಯದಲ್ಲಿ ಅಯ್ಯ ತೋರುವ ಆಸ್ಥೆ ಮತ್ತು ಉತ್ಸಾಹ ಅವಳ ವಿಷಯದಲ್ಲಿ ಅವನಿಗಿಲ್ಲವಲ್ಲ ಎಂಬ ಅವಳ ಕೊರಗು ಮತ್ತು ಅವನು ಒಂದು ಕೂಡಾವಳಿ ಮಾಡಿಕೊಂಡು ತನ್ನನ್ನೇಕೆ ಮದುವೆ ಮಾಡಿಕೊಳ್ಳಬಾರದೆನ್ನುವ ಅವಳ ಯೋಚನೆ ಅವಳಲ್ಲಿ ಸುಪ್ತವಾಗಿರುವ ಆಸೆಯನ್ನು ಅವಳ ಗುಪ್ತ ಆಶಯವನ್ನು ಪ್ರಕಟಿಸುತ್ತದೆ. ಅಕಸ್ಮಾತಾಗಿ ಪಂಡಿತನಿಂದ ಅವಳು ಪಡೆದ ಲೈಂಗಿಕ ತೃಪ್ತಿಯನ್ನು ಚದುರಂಗರು ಕಾವ್ಯಮಯವಾಗಿ ವರ್ಣಿಸಿದ್ದಾರೆ. "ಅವಳು ಯಾಕೋ ಕಿಸಕ್ಕನೆ ನಕ್ಕಳು.... ಜಗುಲಿ ಹಂತ ಇಳಿದುಹೋಗಿ ಮಳೇಲಿ ನಿಂತುಕೊಂಡಳು. ಸಣ್ಣ ಎರಚಲು ಮೊಕದ ಮ್ಯಾಲೆ ಚೆಲ್ಲಿದಾಗ ಕುಣಿದಾಡೋ ಹಾಗಾಗಿ ನಾಲಗೆ ಚಾಚಿ ಮಳೆ ಹನಿಕುಡಿಯೋ ಆಟ ಆಡಿದ್ಲು". ಇದು ಲೈಂಗಿಕ ತೃಪ್ತಿಗಾಗಿ ಆಂತರ್ಯದಲ್ಲಿ ಹಾತೊರೆಯುತ್ತಿದ್ದ ಅವಳು ಅದು ಲಭಿಸಿದಾಗ ಮಳೆಯ ಸಮಯದ ಮುಗ್ಧ ಭೌತಿಕ ಪಕ್ಷಿ ಆಗಲು ಮುಂದೆಯು ಅಪರಾಧೀ ಪ್ರಜ್ಞೆಯೂ ಅವಳನ್ನು ಕಾಡುವುದಿಲ್ಲ. ಹೊಟ್ಟೆಯಲ್ಲಿರುವ ಮಗು ಗಂಡಾದರೆ ಜೀವ ತೇದು ಅದನ್ನು ದೊಡ್ಡದು ಮಾಡುವ ಅವಳ ನಿರ್ಧಾರ ಈ ಪ್ರಕರಣವನ್ನು ಅವಳು ಸಂತೋಷದಿಂದ ಒಪ್ಪಿಕೊಂಡಿರುವುದನ್ನು ಸೂಚಿಸುತ್ತದೆ.

ಈ ಕಥೆಯಲ್ಲಿ ಹೆಣ್ಣಿನ ಶೋಷಣೆಯು 'ಕ್ವಾಟೆ'ಯ ವಸ್ತು ಇಲ್ಲಿಯ ನಾಯಕಿಯ ಕಾಮಾರ್ಯಹರಣ ಮಾಡುವ ವೈದ್ಯ ಖಳನಾಯಕನಲ್ಲ. ತನ್ನ ಸೌಕರ್ಯಕ್ಕಾಗಿ ಅವಳನ್ನು ಸುದೀರ್ಘಕಾಲ ಕನ್ಯಾಸೆರೆಯಲ್ಲಿಯೇ ಉಳಿಸಿಕೊಂಡಿದ್ದ ತಂದೆ ಖಳನಾಯಕನಾಗಿ ಬಿಡುತ್ತಾನೆ.

ಬರಲು ತಿರುಗುತ್ತಿತ್ತು:

ಈ ಕಥೆಯು ಅತ್ಯಂತ ಹೋರಾಟಮಯ ಬದುಕಿನಲ್ಲಿ ಸಮಾಜದ ಶೋಷಣೆಯಿಂದ ಪಾರಾಗುವ ಏಕೈಕ ಮಾರ್ಗವನ್ನು ಶ್ರಮಿಕವರ್ಗ. ಸಾಮೂಹಿಕ ಸಂಘಟನೆಯಲ್ಲ ಕಂಡುಕೊಳ್ಳಬೇಕಾದ ಮಾರ್ಗವನ್ನು ಚಿತ್ರಿಸುತ್ತದೆ. ಮುನ್ಸಿಪಲ್ ಕಾರ್ಮಿಕರನ್ನು ಒಗ್ಗೂಡಿಸಿ ಅದರಿಂದ ಸಮಾಜದ ಶೋಷಣೆಯನ್ನು ತಪ್ಪಿಸಲು

ಹೋರಾಡುವ ರಾಮನಾಥಪ್ಪ ಎಂಬ ಬುದ್ಧಿಜೀವಿಯ ಮಾತನ್ನು ತಿರಸ್ಕರಿಸಿದ ಚಾಮುಂಡಿ. ಅದರ ಪರಿಣಾಮವಾಗಿ ತಾನು ಮತ್ತು ತನ್ನ ಮಗಳು ರಾಮಿಗೆ. ಪೊಲೀಸರಿಂದ ಆದ ಶೋಷಣೆಯಿಂದ ಪಾಠ ಕಲಿತು ಮುಂದೆ ಆಕೆಯ ಸಂಘಟನೆಯ ಮುಂದಾಳಾಗಿ ಎಲ್ಲರ ಮನ ಪರಿವರ್ತಿಸಿ ಮುಂದೊಮ್ಮೆ ಪೊಲೀಸರ ದಬ್ಬಾಳಿಕೆಯ ವಿರುದ್ಧ ತನ್ನ ಬರಲು ತಿರುಗಿಸುವ ಮೂಲಕ ಪೊಲೀಸರಿಗೆ ಪಾಠ ಕಲಿಸಿದ ವಸ್ತುವನ್ನು ಈ ಕಥೆ ಹೊಂದಿದೆ.

ಪ್ರಗತಿಶೀಲ ಸಾಹಿತ್ಯದ ಅಂಶಗಳಲ್ಲಿ ಒಂದಾದ ಕಾರ್ಮಿಕ ಶೋಷಣೆಯ ಕಥಾವಸ್ತು ಹೊಂದಿರುವ ಈ ಕಥೆ ತನ್ನ ಜೋಪಡಿಯಲ್ಲಿ ರೊಟ್ಟಿ ಸುಡುವ ಚಾಮುಂಡಿ ಮತ್ತು ರಾಮಿಯ ಮಾತು ಕತೆಯೊಂದಿಗೆ ಆರಂಭಗೊಂಡು 'ರಾಮನಾಥಪ್ಪ'ನ ಕೋರಿಕೆಯಾದ 'ಮುನ್ಸಿಪಲ್ ಕೆಲಸಗಾರರೇ ಒಗ್ಗಟ್ಟಾಗಿ' ಎಂಬ ಮಾತಿಗೆ ರಾಮಿಯ ಒಪ್ಪಿಗೆಯಿದ್ದರೆ ಚಾಮುಂಡಿ ಅದನ್ನು ತಿರಸ್ಕರಿಸುತ್ತಾಳೆ. ಕೆಲವೇ ನಿಮಿಷಗಳಲ್ಲಿ ಹೊರಗೆ ಗದ್ದಲ ಏರ್ಪಟ್ಟು ಅದನ್ನು ನೋಡಲು ಹೋದ ರಾಮಿ ಭಯದಿಂದ ಓಡಿಬರುತ್ತಾಳೆ. ಅಲ್ಲದೆ ಪೊಲೀಸರು ಎಲ್ಲರನ್ನು ಹಿಂಸಿಸುತ್ತಿರುವ ಜೊತೆಗೆ ತನ್ನ ಕಡೆ ಓಡಿಬರುತ್ತಿರುವ ಅಂಶವನ್ನು ತನ್ನ ತಾಯಿಗೆ ತಿಳಿಸಿದಾಗ ಚಾಮುಂಡಿಗೆ ತಾನು ಸಂಘಟನೆಗೆ ಸೇರದಿದ್ದುದರ ಪರಿಣಾಮ ಅರ್ಥವಾಗುತ್ತದೆ. ಅಷ್ಟರಲ್ಲಿ ಜೋಪಡಿಯ ಅಭದ್ರವಾದ ಬಾಗಿಲಿಗೆ ಒರಗಿ ನಿಂತು ಪ್ರತಿಭಟನೆ ತೋರುವ ರಾಮಿ ಮತ್ತು ಚಾಮುಂಡಿಯ ಶಕ್ತಿ ಆ ಪೊಲೀಸರ ಶಕ್ತಿಯ ಮುಂದೆ ಸೋಲಬೇಕಾಗುತ್ತದೆ. ಈ ರೀತಿ ಒಳಗೆ ಬಂದ ಪೊಲೀಸರಿಗೆ ಚಾಮುಂಡಿ ತನ್ನ ಬರಲಿನ ಶಕ್ತಿ ತೋರಿದಳಾದಳು ಪೊಲೀಸರ ಲಾಠಿಯ ಮುಂದೆ ಚಾಮುಂಡಿಯ ಆಟ ನಡೆಯಲಿಲ್ಲ. ಚಾಮುಂಡಿ ನೆಲಕಚ್ಚಿ ಮಲಗಿದಳು' ಪೊಲೀಸರು ಕುಡಿದ ಅಮಲಿನಲ್ಲಿ ರಾಮಿಯ ಮೇಲೆ ಅತ್ಯಾಚಾರ ನಡೆಸಿ ಪರಾರಿಯಾದರು.

ಪೊಲೀಸರ ಲಾಠಿ ಏಟಿನಿಂದ ಜ್ಞಾನ ತಪ್ಪಿದ ಚಾಮುಂಡಿಗೆ ಪ್ರಜ್ಞೆ ಬರುವಷ್ಟರಲ್ಲಿ ರಾಮಿಯ ಸ್ಥಿತಿ ಮುಗಿದು ಹೋಗಿತ್ತು. ಈ ರೀತಿ ಪೊಲೀಸರಿಂದ ಆದ ಶೋಷಣೆಯ ವಿರುದ್ಧ ಪ್ರತಿಭಟನೆಗಾಗಿ ಸಂಘಟನೆಯಲ್ಲಿ ಸೇರುವ ಮನಸ್ಸು ಮಾಡಿದ ಚಾಮುಂಡಿ ಮುಂದೆ ಮುನಸಿಪಲ್ ಕೆಲಸಗಾರರ ಸಂಘದ ಕಾರ್ಯದರ್ಶಿಯಾಗಿ ಸಂಘವನ್ನು ಸೇರಲು ಹಿಂಜರಿಯುವವರಿಗೆ ತನ್ನ ಮಗಳು ರಾಮಿಯ ನಿದರ್ಶನ ನೀಡಿ ಸಂಘ ಸೇರಲು ಪ್ರೋತ್ಸಾಹಿಸುವಳು. ಅಲ್ಲದೆ ಮುಂದೆ ಪೊಲೀಸರ ಲಾಠಿ ತಿರುಗಿದಾಗ ಸಂಘದ ಕೂಲಿಕಾರರ ಪರ ನಿಂತು ತಮ್ಮ ಬರಲಿನಿಂದ ಉತ್ತರ ನೀಡಿದಳು. ಹೀಗೆ

ಕಾನೂನು ವ್ಯವಸ್ಥೆಯನ್ನು ಕಾಪಾಡಬೇಕಾದ ಜನರೇ ಶೋಷಣೆ ಮಾಡುವ ಅತ್ಯಂತ ಕ್ರೌರ್ಯ ಈ ಕಥೆಯಲ್ಲಿ ಬಿಂಬಿತವಾಗಿದೆ.

ಪ್ರಸ್ತುತದಲ್ಲೂ ಕೂಡ ಈ ರೀತಿಯ ಪೊಲೀಸರ ದೌರ್ಜನ್ಯಗಳು ಇಲ್ಲದಿಲ್ಲ. ಅಲ್ಲದೆ ಚಾಮುಂಡಿಯಂಥ ದಿಟ್ಟ ಹೆಣ್ಣು ಶೋಷಣೆಯ ವಿರುದ್ಧ ಹೋರಾಡುವ ಮೂಲಕ ಇಡೀ ಕಾರ್ಮಿಕ ವರ್ಗದ ಹಿತಾಸಕ್ತಿ ಕಾಯಲು ಮುಂದಾಗಿ ಆ ಮೂಲಕ ಸಂಘಟನೆಯೊಂದೇ ಶೋಷಣೆಯಿಂದ ಪಾರಾಗುವ ಏಕೈಕ ಮಾರ್ಗ ಎಂಬ ಅಂಶವನ್ನು ತಿಳಿಯಬಹುದು.

ಸಯ್ಯಾಜಿರಾವ್ ರಸ್ತೆ:

ಈ ಕಥೆಯು ಮೈಸೂರಿನ ಮುಖ್ಯ ರಸ್ತೆಯೊಂದರ ಹೆಸರಿನದಾಗಿದೆ. ಅಲ್ಲದೆ ಆ ರಸ್ತೆಯಲ್ಲಿ ತನ್ನ ಜೀವನ ನಡೆಸುವ ಹೆಣ್ಣೊಬ್ಬಳ ಜೀವನ ಕ್ರಮವನ್ನು ಈ ಕಥೆ ಬಿಂಬಿಸುತ್ತದೆ. ಕಥೆಯ ಆರಂಭ ರಸ್ತೆಯ ವರ್ಣನೆಯೊಂದಿಗೆ ಆರಂಭಗೊಂಡು ಅದು ರಸ್ತೆಯ ಮೇಲೆ ನಡೆದು ಹೋಗುವ ಹೆಣ್ಣೊಬ್ಬಳ ಜೀವನ ದುಃಖಮಯವಾಗುವ ಸನ್ನಿವೇಶವನ್ನು ವಿಸ್ತಾರವಾಗಿ ಚಿತ್ರಿಸುತ್ತದೆ.

ಈ ಕಥೆಯಲ್ಲಿ ರಸ್ತೆಯೇ ನಿರೂಪಕನಾಗಿ ಆ ಹೆಣ್ಣಿನ ಗೋಳಿನ ಕಥೆಯನ್ನು ಹಂತ ಹಂತವಾಗಿ ತಿಳಿಸುತ್ತದೆ. ಆ ರಸ್ತೆಯು ಆ ಹೆಣ್ಣನ್ನು ಮೊದಲು ಕಂಡಾಗ ಆಕೆಯಲ್ಲಿ ಯೌವ್ವನವಿತ್ತು. ಜೊತೆಗೆ ಅಕೆಯ ಪಕ್ಕದಲ್ಲಿ ಆಕೆಯ ಪತಿ ಇದ್ದ ಆದರೆ ಕೆಲವೇ ವರ್ಷಗಳಲ್ಲಿ ಆಕೆಯ ಜೀವನ ವೇಶ್ಯಾವೃತ್ತಿಯಂಥ ಜೀವನ ಕ್ರಮದಿಂದಾಗಿ ಕೊನೆಗೆ ಸಯ್ಯಾಜಿರಾವ್ ರಸ್ತೆಯನ್ನೇ ಮನೆಯನ್ನಾಗಿ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಆಕೆಯದಾಗುತ್ತದೆ.

ಬಡತನದ ಬೇಗೆಯನ್ನು ಸಹಿಸಲಾಗದೆ, ಅಭಿಮಾನ ಶೂನ್ಯನಾದ ಪತಿಯ ಪ್ರೇರಣೆಯಿಂದ ಮೇಲಧಿಕಾರಿಯ ಕಾಮಕ್ಕೆ ಆಹುತಿಯಾಗಿ, ಕೊನೆಗೆ ಅವನಿಂದ ತಿರಸ್ಕೃತಳಾಗಿ, ಗಂಡನ ಸಾವಿನ ಅಗಲಿಕೆಯಿಂದಾಗಿ ಆಕೆ ವೇಶ್ಯಾವಾಟಿಕೆಯತ್ತ ಹೆಜ್ಜೆ ಹಾಕಿ ಕೊನೆಗೆ ಮೊದಲು ಗಂಡನೊಂದಿಗೆ ಓಡಾಡಿದ್ದ ಆ ಸಯ್ಯಾಜಿರಾವ್ ರಸ್ತೆಯಲ್ಲೇ ಕೊನೆಯ ಸಮಯವನ್ನು ಕಳೆಯಬೇಕಾದ ಅನಿವಾರ್ಯತೆ ಆ ಹೆಣ್ಣಿನದಾಗಿದೆ.

ಕೆಲವೇ ವರ್ಷಗಳಲ್ಲಿ ಆಕೆ ಭಯಂಕರವಾಗಿ ಬದಲಾಯಿಸಿದ್ದಳು. ಕಾಲು ಮಾತ್ರ ಇಳಿದಿದ್ದ ಕೆಸರಲ್ಲಿ ಇಡೀ ದೇಹವೇ ಮುಳುಗಿತ್ತು ಎಂಬಂತೆ ಆಕೆಯ ಸ್ಥಿತಿಯಿಂದಾಗಿ ಮನೆಯಿಂದ ಉಚ್ಚಾಟನೆ ಆಗಿ ಆ ಸಯ್ಯಾಜಿರಾವ್ ರಸ್ತೆಯೇ ಆಕೆಯ

ಮನೆಯಾಗಿ ಬಂಧುಬಳಗವಾಗಿ ಅನಾಥವಾಗಿ ಬಿದ್ದಿರುವ ಆಕೆಗೆ ರಸ್ತೆಯಲ್ಲಿ ತಿರುಗುವ ಜನ ಚಿಲ್ಲರೆ ಎಸೆದು ಹೋಗುವ ಸ್ಥಿತಿಯಾಗುತ್ತದೆ. ಈ ರೀತಿ ಮೊದಲೊಂದು ದಿನ ಗಂಡನ ಜೊತೆ ಇದೇ ರಸ್ತೆಯಲ್ಲಿ ನಡೆದು ಹೋದಾಕೆ ಇಂದು ಅಲ್ಲಿ ಹೀನ ಸ್ಥಿತಿಯಲ್ಲಿ ಬಿದ್ದಿರುವಂತಾಗುತ್ತದೆ.

ಹೆಣ್ಣೊಬ್ಬಳ ಒಳಿತು-ಕೆಡುಕುಗಳ ಜೀವನಕ್ಕೆ ಸಾಕ್ಷಿಯಾಗಿ ನಿಂತು ಕಥೆ ಹೇಳುವ ಮೂಲಕ "ಸಯ್ಯಾಜಿರಾವ್ ರಸ್ತೆ" ಪ್ರಗತಿಶೀಲ ಧೋರಣೆಯು ವ್ಯಕ್ತವಾಗಿರುವ ಜೊತೆಗೆ ಸಮಾಜದ ಕೊಳಕುಗಳನ್ನು ನೇರವಾಗಿ ಟೀಕಿಸುವ ಮೂಲಕ ಚದುರಂಗರ ಪ್ರಮುಖ ಕಥೆಗಳಲ್ಲೊಂದಾಗಿದೆ.

ಇಪ್ಪತ್ತು ರೂಪಾಯಿ:

ಈ ಕಥೆಯು ಶವದ ಮನೆ ಕಥಾಸಂಕಲನದಿಂದ ಆರಿಸಲಾಗಿದ್ದು, ಕಥಾವಸ್ತು ಹೀಗಿದೆ. ಹೆಣ್ಣೊಬ್ಬಳು ಹಸಿವಿನ ಪ್ರಶ್ನೆಗೆ ಬೇರಲ್ಲೂ ಉತ್ತರ ಸಿಗದಾದಾಗ ತನ್ನನ್ನೇ ಮಾರಿಕೊಂಡು ಉತ್ತರ ಕಂಡುಕೊಳ್ಳ ಹೋಗುವ ಕೊನೆಯ ಕ್ಷಣದಲ್ಲಿ ಎಲ್ಲಿಂದಲೋ ಯಾರಿಂದಲೋ ಬಂದ ಸಹಾಯದಿಂದ ಮಾನ ಕಾಯ್ದುಕೊಂಡ ಹೆಣ್ಣಿಗೆ ಆ ಹಣ ತನ್ನ ಗಂಡನ ಮಾಜಿ ಪ್ರೇಮಿ ಮತ್ತು ವೇಶ್ಯೆಯಾದ ಹೆಣ್ಣಿನಿಂದ ಬಂದದ್ದು ಎಂಬ ಅರಿವಾದಾಗ ತನ್ನ ಮಾನ ಉಳಿಸಿ, ತನ್ನ ಮಕ್ಕಳ ಭವಿಷ್ಯ ರೂಪಿಸಿದ ಈ ಹಣ ಪಾಪದ ದುಡ್ಡೇ? ಎಂದು ಆಶ್ಚರ್ಯ ವ್ಯಕ್ತಪಡಿಸುವ ಹೆಣ್ಣಿನ ವಿಪರ್ಯಾಸದ ಜೀವನವನ್ನು ಚಿತ್ರಿಸುವುದಾಗಿದೆ.

ಇಪ್ಪತ್ತು ರೂಪಾಯಿ ಮನಿಯಾರ್ಡರ್ ಬಂದ ಹಣವನ್ನು ಎಣಿಸುದರೊಂದಿಗೆ ಈ ಕಥೆ ಆರಂಭಗೊಂಡು, ನಾಗಮ್ಮನಿಗೆ ಒಂದೆಡೆ ಸಂತೊಷ ಮತ್ತೊಂದೆಡೆ ಸಂದಿಗ್ಧತೆ ಎರಡು ಉಂಟಾಗುತ್ತದೆ. ತನ್ನ ಗಂಡನನ್ನು ಕಳೆದುಕೊಂಡು, ಸುಂದರ ಸಂಸಾರದ ಜೊತೆಗೆ, ಬದುಕನ್ನು ಆಸರೆಯನ್ನು ಕಳೆದುಕೊಂಡ ಹೆಣ್ಣಿಗೆ ಜೀವನ ಸಾಗಿಸುವ ಸಲುವಾಗಿ ಮನೆಕೆಲಸ ಹಿಡಿಯುವ ಅನಿವಾರ್ಯತೆ ಉಂಟಾಗುತ್ತದೆ. ಆದರೆ ಅಲ್ಲಿಯೂ ಕೆಲಸದ ಜೊತೆ ತನ್ನ ಮಾನ ಉಳಿಸಿಕೊಳ್ಳಲು ಆಕೆ ಹೆಣಗಬೇಕಾಗುತ್ತದೆ. ಕೊನೆಗೆ ತನ್ನ ಮನೆ ತ್ಯಜಿಸಿ ಬಾಡಿಗೆ ಮನೆ ಹಿಡಿದು ಜೀವಿಸಬೇಕಾಗದ ಅನಿವಾರ್ಯತೆ ಉಂಟಾಗುತ್ತದೆ.

ಹೊಸ ಬಾಡಿಗೆ ಮನೆಯಲ್ಲಿಯೂ ರಾಯರ ಕಾಕದೃಷ್ಟಿಯಿಂದ ತಪ್ಪಿಸಿಕೊಳ್ಳಲು ಪ್ರಯಾಸಪಡಬೇಕಾಗುತ್ತದೆ. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಮನ ಪರಿವರ್ತಿಸುವ

ಸಮಯದಲ್ಲಿ ಬಂದ ಹಣ ಆಕೆಯ ಮಾನದ ಜೊತೆಗೆ ಜೀವನ ನಿರ್ವಹಣೆಗೆ ಸಹಾಯ ಮಾಡುವ ಮೂಲಕ ಆಕೆಯ ಮಕ್ಕಳ ವಿದ್ಯಾಭ್ಯಾಸ ಮುಂದುವರೆಸುವ ರೀತಿಯಲ್ಲಿ ಈ ಹಣ ಸಹಾಯಕವಾಗುತ್ತದೆ. ಕೊನೆಗೊಮ್ಮೆ ಬಂದ ಪತ್ರ ತನ್ನ ನಿಜವಾದ ಅಂಶ ಬಯಲು ಮಾಡುತ್ತದೆ. ಆ ಹಣ ತನ್ನ ಗಂಡನ ಹಳೆಯ ಪ್ರೇಯಸಿ ಜೊತೆಗೆ ವೇಶ್ಯೆಯಾದ ಹೆಣ್ಣಿನದು. ಈ ಮೂಲಕ ತನ್ನ ಪ್ರೀತಿ ವ್ಯಕ್ತಪಡಿಸುತ್ತಿರುವುದು ತಿಳಿದುಬರುತ್ತದೆ. ಈ ರೀತಿ ಹೆಣ್ಣೊಬ್ಬಳ ಜೀವನ ಕ್ರಮ ಅವಳ ಆದರ್ಶವನ್ನು ಕಾಣಬಹುದಾಗಿದೆ. ಪ್ರಗತಿಶೀಲ ಸಾಹಿತ್ಯದ ಬಹುಮುಖ್ಯ ಅಂಶವಾದ ವೇಶ್ಯಾ ವಾಟಿಕೆಯ ಬಗ್ಗೆ ಗಮನ ನೀಡುವ ಜೊತೆಗೆ ಸಮಾಜದ ಕೆಟ್ಟ ವ್ಯವಸ್ಥೆಯ ಕೈಗನ್ನಡಿಯಾಗಿ ಈ ಕಥೆ ಮೂಡಿಬಂದಿದೆ.

ಅಧ್ಯಾಯ – ೬

ಚದುರಂಗರ ಕತೆಗಳಲ್ಲಿನ ಇತರೆ ಅಂಶಗಳ ಅಭಿವ್ಯಕ್ತಿ

೧) ಗ್ರಾಮೀಣ ಜೀವನ:

ಚದುರಂಗರ ಕಥೆಗಳ ಪೈಕಿ ಗ್ರಾಮ ಸಂಸ್ಕೃತಿಯ ಹಿನ್ನೆಲೆಯಿರತಕ್ಕವು ಹದಿನೆಂಟು ಕತೆಗಳು. ಸುಮಾರು ಮೂವತ್ತಾರು ಕತೆಗಳು ನಗರಸಂಸ್ಕೃತಿ ಹಿನ್ನೆಲೆಯವು, ಇನ್ನುಳಿದ ಆರು ಕತೆಗಳು ಗ್ರಾಮ ಮತ್ತು ನಗರ ಎರಡರ ಸಂಘರ್ಷ ಹಾಗೂ ಸೌಹಾರ್ದಗಳ ಹಿನ್ನೆಲೆಯಿರತಕ್ಕವು.

'ನಾಲ್ಕುಮೊಳ ಭೂಮಿ' ಎಂಬ ಅವರ ಕಥೆಯಲ್ಲಿ ಬರುವ ಒಂದು ಚರ್ಚೆ ಕತೆಗಳ ಬಗ್ಗೆ ಚದುರಂಗರು ಕಥೆಗಳ ಬಗ್ಗೆ ಇಟ್ಟುಕೊಂಡಿದ್ದ ಧೋರಣೆಯ ಮೇಲೆ ಬೆಳಕು ಚೆಲ್ಲಬಹುದು.

'ಕಥೆ ಎಂದರೆ ಕಗ್ಗ, ಅದರಿಂದ ಯಾರಿಗೆ ಪ್ರಯೋಜನ'

'ಪ್ರಯೋಜನವಾಗುವುದಾದರೆ ಒಂದು ಕೆಲಸ ಮಾಡಬೇಕು,

ಇಲ್ಲದಿದ್ದರೆ ಕೂಡದು ಎಂತಲೇ ನಿಮ್ಮ ಅಭಿಪ್ರಾಯ?'

'ಹೌದು ನಿಷ್ಪ್ರಯೋಜಕ ಕಾರ್ಯದಲ್ಲಿ ನನಗೆ ಆಸಕ್ತಿಯಿಲ್ಲ'

'ಬೇಷ್, ಬೇಷ್! ವಕೀಲವೃತ್ತಿಗೆ ಯುಕ್ತವಾದ ರೀತಿಯಲ್ಲಿ ಮಾತಾಡ್ತ ಇದ್ದೀರಿ ಪರವಾಯಿಲ್ಲ'

'... ಕಥೆಗೂ ಜೀವನಕ್ಕೂ ನಿಕಟ ಸಂಬಂಧ ಬೇಡವೆ. ನೀನೇ ಹೇಳು. ವಿಪುಲವಾಗಿ ಈಗ ಪ್ರಕಟವಾಗ್ತಾ ಇರುವ ಕಥೆಗಳು ಕನ್ನಡ ಜನಪದದ ಅಂಚನ್ನಾದರೂ ಮುಟ್ಟಿವೆಯೆ?"

ಈ ರೀತಿ ತಮ್ಮ ಅಭಿಪ್ರಾಯವನ್ನೇ ಕಥೆಗಳಲ್ಲಿನ ಪಾತ್ರಗಳ ಮೂಲಕ ಅಭಿವ್ಯಕ್ತಿಸಿರುವುದನ್ನು ಗಮನಿಸಬಹುದು.

ಚದುರಂಗರ ಕತೆಗಳಲ್ಲಿನ ಗ್ರಾಮೀಣ ಜೀವನ ಕುರಿತಾದ ಐದು ಕತೆಗಳನ್ನು ಆರಿಸಿಕೊಂಡಿದ್ದೇನೆ. ಅವುಗಳನ್ನು ವಿಶ್ಲೇಷಿಸಲು ಗ್ರಾಮೀಣ ಜೀವನ ಯಾವ ರೀತಿ ಅಭಿವ್ಯಕ್ತಗೊಂಡಿದೆ ಎಂಬುದನ್ನು ತಿಳಿಯಲು ಕುಟುಂಬ, ವೃತ್ತಿ, ಸಮಾಜಜೀವನ, ಸ್ತ್ರೀಪಾತ್ರಗಳು, ಸಾಹಿತ್ಯಿಕ ಗುಣ ಈ ಹಿನ್ನೆಲೆಯಲ್ಲಿ ಕಥೆಗಳನ್ನು ವಿಶ್ಲೇಷಿಸಿದ್ದೇನೆ.

ಅವುಗಳ ಹೆಸರು ಹೀಗಿವೆ. ೧) ನಾಲ್ಕುಮೊಳ ಭೂಮಿ ೨) ಒಂದು ಉಂಗುರದ ಕತೆ ೩) ಅಂಕ ೪) ಮೃಗಯಾ ೫) ಕಲ್ಲಿನ ಕೋಳಲು. ಈ ಕಥೆಗಳು ಅವರ ಏಳು ಕಥಾಸಂಕಲನದಲ್ಲಿ ಹರಡಿಕೊಂಡಿವೆ.

ನಾಲ್ಕುಮೊಳ ಭೂಮಿ:

ಈ ಕಥೆಯ ವಸ್ತು ಹೀಗಿದೆ: ಲಾಯರ್‌ನ ಹೆಂಡತಿಗೆ ಮನಿಯಾರ್ಡರ್ ಬರುವ ಮೂಲಕ ಕಥೆ ಆರಂಭವಾಗುತ್ತದೆ. ಅವಳಿಗೆ ಯಾರು ಮನಿಯಾರ್ಡರ್ ಕಳುಹಿಸಬಹುದೆಂಬ ಸಂದೇಹದಲ್ಲಿ ಮುಳುಗಿದಾಗ ವಿವಾಹದ ತರುಣದಲ್ಲಿ ಅವರಿಬ್ಬರ ನಡುವೆ ನಡೆದ ಸಂಗತಿಯನ್ನು ನೆನಪಿಸಿಕೊಳ್ಳುವುದರ ಮೂಲಕ, ತನ್ನ ಹೆಂಡತಿ ಕಥೇ ಬರೆಯುವುದನ್ನು ನೆನಪಿಸಿಕೊಂಡು ಒಂದು ಪುಸ್ತಕದಿಂದ ಹಾಳೆಗಳನ್ನು ತೆಗೆದು ಓದಿದಾಗ ಅದು ತನ್ನ ಹೆಂಡತಿ ಲಲಿತಾಳ ಮಾವ ಸಂಜೀವನು ಬರೆದ 'ನಾಲ್ಕುಮೊಳ ಭೂಮಿ' ಎಂಬ ಕತೆಯೇ ಆಗಿರುವುದು ಅಲ್ಲಿ ಮುಖ್ಯವಾಗುತ್ತದೆ. ನಾಲ್ಕುಮೊಳ ಭೂಮಿಗಾಗಿ ಆಸೆಪಡುವ ಕಾಳಿಂಗಯ್ಯನು ಹಟ್ಟಿ ದೇವಪ್ಪನ ಭೂಮಿಯನ್ನು ಅನ್ಯಾಯವಾಗಿ ಒತ್ತುವರಿ ಮಾಡಿಕೊಳ್ಳುವ ತಾನು ಉಳುತ್ತಿರುವ ಹೊಲದಲ್ಲಿಯೇ ಆ ಪಾಪಪ್ರಜ್ಞೆ ಕಾಡಿ ಹೊಲದಲ್ಲಿ ಕುಸಿದುಬೀಳುತ್ತಾನೆ. ಅವನಿಗೆ ಸಹಾಯ ಮಾಡಲು ಹಟ್ಟಿದೇವಪ್ಪನ ಮಗನೇ ಬರುವುದರೊಂದಿಗೆ ಕಥೆ ಅಂತ್ಯವಾಗುತ್ತದೆ.

ಕಥೆಯು ಗ್ರಾಮೀಣ ಸಮುದಾಯದ ದುರಾಸೆ ಮತ್ತು ಪಾಪಪ್ರಜ್ಞೆಗಳೆರಡನ್ನು ವ್ಯಕ್ತಪಡಿಸುವ ಸಂಕೀರ್ಣ ಸ್ವರೂಪದ್ದು. ಇದು ಚದುರಂಗರ ಮೀನಿನ ಹೆಜ್ಜೆ ಕಥಾಸಂಕಲನದ ಒಂದು ಕಥೆಯಾಗಿದೆ. ಈ ಕಥೆಯ ವಸ್ತು ಭೂಮಿ ಸಮಸ್ಯೆ ಪ್ರಗತಿಶೀಲ ಲೇಖಕರನ್ನು ಎದುರುಗೊಂಡ ಸಮಸ್ಯೆಗಳಲ್ಲಿ ಇದು ಕೂಡ ಒಂದು. ಭೂಮಿ ಇಲ್ಲಿ ಸಾಂಕೇತಿಕವಾಗಿ ಬಂದಿದೆ.

ಕಥೆಯ ಒಂದು ಹಂತದಲ್ಲಿ ಭಾರತೀಯ ಗ್ರಾಮೀಣ ವ್ಯವಸ್ಥೆಯ ಭೂಮಿ ವಿವಾದವನ್ನು ಕಥೆಯಲ್ಲಿ ಸಾಮಾನ್ಯೀಕರಣಗೊಳಿಸುವುದು ಮಾತ್ರವಲ್ಲದೇ "ಭೂಮಿಗೆ ವಿಪರೀತವಾದ ಆಸೆಪಡಬೇಡಿ ಅದರ ದೆಸೆಯಿಂದಲೇ ಕುರುವಂಶ ನಿರ್ನಾಮ-ವಾಯಿತು" ಎಂಬ ಹರಿಕಥೆ ದಾಸನ ಮಾತಿನ ಮೂಲಕ ಕೂಡ ಭೂ ವಿವಾದ ಪರಿಹಾರದ ಬಗೆಗಿನ ಲೇಖಕರ ಸಾಂಪ್ರದಾಯಿಕ ನಂಬಿಕೆಯ ಧೋರಣೆ ಸ್ಪಷ್ಟವಾಗುವುದು. ಕಥೆಯ ವಸ್ತುಭೂಮಿ ಸಮಸ್ಯೆಯಾದರೂ ನಿರೂಪಣೆ ಮತ್ತು

ತಾತ್ವಿಕತೆಗಳು ಮೋಸ–ವಂಚನೆ–ಧಳಕುಗಳ ಅನಾವರಣವೇ ಆಗಿದೆ. ಗ್ರಾಮೀಣ ಸಮಾಜದ ರೈತ ಕುಟುಂಬದ ಒಳವಿವರಗಳನ್ನು ನೈಜವಾಗಿ ಕಟ್ಟಿಕೊಟ್ಟಿದ್ದಾರೆ.

ಕಾಳಿಂಗಯ್ಯನು ತಾನು ಯೌವನಸ್ಥನೂ ಬಲಿಷ್ಠನೂ ಆಗಿದ್ದಾಗ ಈ ರೀತಿ ಮಾಡಿ, ಪಂಚಾಯ್ತಿ ಮತ್ತು ಮೋಜುಂದಾರನನ್ನು ದಾರಿಗೆಡಿಸಿ ಹಟ್ಟಿದೇವಪ್ಪನಿಂದ ಒತ್ತುವರಿ ಮಾಡಿಕೊಂಡಿದ್ದ ನಾಲ್ಕುಮೊಳ ಭೂಮಿಗೆ ಸಂಬಂಧಿಸಿದಂತೆ ಒಂದು ಬಗೆಯ ಪಾಪಪ್ರಜ್ಞೆ ಕಾಳಿಂಗಯ್ಯನನ್ನು ಕಾಡತೊಡಗಿದೆ. ಅದರಲ್ಲೂ ವೈರಿಯಾಗಿದ್ದ ಹಟ್ಟಿದೇವಪ್ಪನ ಮಗನ ಪ್ರಾಯವನ್ನು ನೋಡಿ ಕಾಳಿಂಗಯ್ಯನ ಮುಪ್ಪಿನ ಪಾಪಪ್ರಜ್ಞೆ ಕಾಡತೊಡಗಿದೆ. ಏಕೆಂದರೆ ಕಾಳಿಂಗಯ್ಯ ಈ ನಾಲ್ಕುಮೊಳ ಭೂಮಿ ಒತ್ತುವರಿ ಮಾಡಿಕೊಳ್ಳಬೇಕಾದರೆ ತಾನು ಬಲಿಷ್ಟನಾಗಿರುವುದರ ಜೊತೆಗೆ ಎಷ್ಟೆಲ್ಲಾ ಕುಟಿಲಗಳನ್ನು ಎಸಗಿದ್ದಾನೆ ಎಂಬುದಕ್ಕೆ ಕಥೆಯೊಳಗೆ ವಿವರವಿದೆ.

ಹಟ್ಟಿದೇವಪ್ಪನ ನಾಲ್ಕುಮೊಳ ಭೂಮಿಯನ್ನು ಅನ್ಯಾಯವಾಗಿ ಕಸಿದುಕೊಂಡು ತನ್ನ ಭೂಮಿಗೆ ಸೇರಿಸಿಕೊಂಡ ಹಿಂದಿನ ಘಟನೆಯನ್ನು ನೆನೆದು ಕಾಳಿಂಗ ತಾನು ಉಳುತ್ತಿದ್ದ ಹೊಲದಲ್ಲೇ ತಲೆಸುತ್ತಿ ಕುಸಿದು ಬಿದ್ದುದ್ದನ್ನು ಕಂಡ, ಪಕ್ಕದ ಹೊಲದಲ್ಲೇ ಇದ್ದ ದೇವಪ್ಪನ ಮಗ ಸಹಾಯಕ್ಕೆ ಓಡಿಬರುತ್ತಾನೆ. ಆಗ ಕಾಳಿಂಗಯ್ಯ "ನಾಲ್ಕುಮೊಳಭೂಮಿ, ನಾಲ್ಕೇ ನಾಲ್ಕು ಮೊಳ ಭೂಮಿ, ಕೋಪ ಮಾಡಿಕೋಬೇಡ ಸಂಸಾರ ಸಾಕೋಕೆ ಆ ಕೆಲಸ ಮಾಡಿಬಿಟ್ಟೆಕಣಪ್ಪ"[೧] ಎನ್ನುತ್ತಾನೆ. ಅದಕ್ಕೆ ದೇವಪ್ಪನ ಮಗ ಏನೊಂದು ಅರ್ಥವಾಗದೇ ಮಿಕಿಮಿಕಿ ನೋಡುತ್ತಿದ್ದುದು ಇದು ಕಥೆಯ ಅಂತ್ಯದಲ್ಲಿ ಕಂಡುಬರುತ್ತದೆ.

ಇಲ್ಲಿ ಗಮನಿಸಬೇಕಾದ ತುಂಬಾ ಮುಖ್ಯವಾದ ಸಂಗತಿಯೆಂದರೆ ಪಾಪಪ್ರಜ್ಞೆಯ ಅಸ್ವಸ್ಥತೆಯಿಂದ ಕಾಳಿಂಗಯ್ಯ ಹೊಲದಲ್ಲಿ ಕುಸಿದುಬಿದ್ದ ಸಂದರ್ಭದಿಂದ ಮೂಡಿಬರುವ ಪಾತ್ರ ವೈವಿಧ್ಯ ವಿಚಾರಯೋಗ್ಯವಾಗಿದೆ. ಇಲ್ಲಿ ಕಾಳಿಂಗಯ್ಯ ತನ್ನ ತಂದೆಯಿಂದ ನಾಲ್ಕು ಮೊಳ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ಕಾಳಿಂಗಯ್ಯ ಅಸ್ವಸ್ಥನಾಗಿದ್ದಾನೆ ಎಂಬುದಾಗಲಿ ದೇವಪ್ಪನ ಮಗನಿಗೆ ಗೊತ್ತಿಲ್ಲ. ಅಂತೆಯೇ ಪಕ್ಕದ ಹೊಲದಲ್ಲಿ ಪ್ರಜ್ಞೆ ತಪ್ಪಿಬಿದ್ದ ಕಾಳಿಂಗಯ್ಯನನ್ನು ನೋಡಿ ದೇವಪ್ಪನ ಮಗ ಸಹಾಯಕ್ಕೆ ಬಂದಿದ್ದಾನೆ. ನಾಲ್ಕುಮೊಳ ಭೂಮಿಯ ವಿವಾದದ ಮೂಲ ವ್ಯಕ್ತಿಯಾದ ಹಟ್ಟಿದೇವಪ್ಪ

---

೧. ಚದುರಂಗರ ಸಮಗ್ರ ಕಥೆಗಳು, ಚದುರಂಗ, ಅಭಿರುಚಿ ಪ್ರಕಾಶನ, ಮೈಸೂರು, ೧೯೯೯, ಪು. ೨೫೨.

ಈ ಸಂದರ್ಭದಲ್ಲಿ ಇಲ್ಲದಿರುವುದು ಈ ಮೂರು ಪಾತ್ರಗಳ ನಡುವಿನ ವೈವಿಧ್ಯವನ್ನು ಹೆಚ್ಚಿಸಿರುವಂತಿದೆ. ಹಚ್ಚಿದೇವಪ್ಪನನ್ನು ಬಲಿತೆಗೆದುಕೊಂಡ ಕಾರಣಕ್ಕಾಗಿ ಅವನ ಪಾಪಪ್ರಜ್ಞೆ ಅವನ ಅಂತ್ಯದಲ್ಲಾದರೂ ತೀವ್ರವಾಗುತ್ತದೆ. ಸತ್ತುಹೋಗಿರುವ ಸೋದರ ಮಾವನ ಕಥೆಗಳನ್ನು ತನ್ನ ಹೆಸರಿನಲ್ಲಿ ಪ್ರಕಟಿಸುತ್ತಿರುವ ಹೆಂಡತಿಯ ಪಾಪಪ್ರಜ್ಞೆ ಇಲ್ಲಿ ದಾಖಲಾಗುವುದಿಲ್ಲ. ಅದು ಈ ಕಥೆಯ ಉದ್ದೇಶವೂ ಅಲ್ಲ. ಇಲ್ಲಿ ಮುಖ್ಯವಾಗಿ ನಮಗೆ ಕಾಣುವುದು ಕಾಳಿಂಗಯ್ಯನ ಪಾಪಪ್ರಜ್ಞೆ.

ಕಥೆಯೊಳಗೆ ಕಥೆ ಹೆಣೆದುಕೊಂಡಿರುವ ರೀತಿಯನ್ನು ಇಲ್ಲಿ ನಾವು ಕಾಣಬಹುದು. ಆ ಕಥೆಯೆಂದರೆ ವಕೀಲನ ವೈಯಕ್ತಿಕ ನೆಲೆಯಲ್ಲಿ ಪಡೆದುಕೊಳ್ಳುವ ಆರಂಭ ಮತ್ತು ಮುಂದಿನ ಕಥೆ. ಅಲ್ಲಿಂದ ಸುರುಳಿ ಸುರುಳಿಯಾಗಿ ಹರಡಿಕೊಂಡು, ಕೊನೆಯಪಕ್ಷ ನಾಲ್ಕು ಘಟನೆಗಳನ್ನು ಕಾಣಬಹುದು. ೧) ವಕೀಲನ ಹೆಂಡತಿಗೆ ಬಂದ ೨೦೦ ರೂ. ಮನಿಯಾರ್ಡರ್ ೨) ತನ್ನ ಹೆಂಡತಿ ಸ್ವತಃ ಕತೆಗಾರ್ತಿಯೊ ಅಥವಾ ಅವರ ಮಾವ ಬರೆದ ಕಥೆಗಳನ್ನು ತನ್ನ ಹೆಸರಿನಲ್ಲಿ ಪ್ರಕಟಿಸುತ್ತಿದ್ದಳೋ ಎಂಬ ಬಗ್ಗೆ ವಕೀಲನಲ್ಲಿ ಉಂಟಾಗುವ ಪ್ರಜ್ಞೆ. ೨) ಕಾಳಿಂಗಯ್ಯ ಮತ್ತು ದೇವಪ್ಪರ ನಡುವಿನ ಭೂಮಿಗೆ ಸಂಬಂಧಿಸಿದ ವ್ಯಾಜ್ಯ ೪) ಈ ವ್ಯಾಜ್ಯದಲ್ಲಿ ನ್ಯಾಯಬಾಹಿರವಾಗಿ ಗೆದ್ದ ಕಾಳಿಂಗಯ್ಯನದು ಭೂಮಿಯ ಒತ್ತುವರಿಯಾದರೆ, ವಕೀಲನ ಹೆಂಡತಿಯದು ಮತ್ತೊಂದು ಬಗೆಯ ಒತ್ತುವರಿ.

ಒಂದು ಉಂಗುರದ ಕಥೆ:

ಈ ಕಥೆಯ ವಸ್ತು ಹೀಗಿದೆ: ಸಣ್ಣೀರ–ರುಮಾಲೆ ಸಂಗಪ್ಪ ಅಣ್ಣತಮ್ಮಂದಿರು, ಸಣ್ಣೀರ ತನ್ನ ಹೆಂಡತಿಯಾದ ದೇವೀರಿಯ ಮಾತು ಕೇಳಿ ಬದುಕುವುದಕ್ಕಾಗಿ ಪಾಲು ಕೇಳುತ್ತಾನೆ. ಪಾಲಾದ ನಂತರವು ಅತ್ತಿಗೆ ಗೌರಮ್ಮನ ಒಳ್ಳೆಯ ನಡೆನುಡಿಗಳನ್ನು ಎದುರಿಸಲಾರದೆ ಮನೆಯಲ್ಲಿಯೂ ಪಾಲು ಬಯಸಿ ಎರಡು ಒಲೆಗಳು ಒಂದು ಹಟ್ಟಿಯಲ್ಲಿ ಉರಿಯುವಂತೆ ಮಾಡುತ್ತಾಳೆ. ಸಣ್ಣೀರ ಗರ್ಭಿಣಿಯಾದ ಹೆಂಡತಿಯ ಮಾತಿಗೆ ಇಲ್ಲ ಎನ್ನುವುದಿಲ್ಲ. ಸಣ್ಣೀರ ಮನೆಯೊಳಗೆ ಮೋಹಿನಿಯ ಕಾಟದಿಂದ ಪಾರಾಗಲು ಮಲಯಾಳೀ ಮಂತ್ರವಾದಿ ಮಂತ್ರಿಸಿಕೊಟ್ಟ ಉಂಗುರವನ್ನು ಕಳೆದುಕೊಂಡುಬಿಡುತ್ತಾನೆ. ತಾಯಿಗೆ ಕೊಟ್ಟ ಭಾಷೆ ಬೇರೆ ಆತನನ್ನು ತಳಮಳಕ್ಕೆ ಈಡುಮಾಡುತ್ತದೆ. ಕಟ್ಟಿದ ಗೋಡೆಯನ್ನು ಆ ಉಂಗುರದ ಹುಡುಗಾಟಕ್ಕಾಗಿ ಬೀಳಿಸುತ್ತಾನೆ. ಅದಕ್ಕೆ ಕಾರಣಳಾದ ಹೆಂಡತಿಯ ಮೇಲೆ ಸಿಟ್ಟುಗೊಳ್ಳುತ್ತಾನೆ. ಗಂಡನ

ನಡೆಯಿಂದ ದೇವೀರಿ ತಾನು ಮಾಡಿದ್ದು ಸರಿಯಿಲ್ಲವೆಂದು ಅರಿತುಕೊಳ್ಳುತ್ತಾಳೆ. ಗಂಡನ ಅಸ್ವಸ್ಥತೆಯಲ್ಲಿ ಗೌರಮ್ಮ, ರುಮಾಲೆ ಸಂಗಪ್ಪ ತಮ್ಮ ಮೇಲೆ ಹರಿಸಿದ ಪ್ರೀತಿಯನ್ನು ಮರುಮೌಲ್ಯಮಾಪನ ಮಾಡುತ್ತಾಳೆ. ಮಕ್ಕಳಾಡುವ ಬೊಂಬೆಯೊಳಗೆ ಸೇರಿಹೋದ ಉಂಗುರ ಸಣ್ಣೀರನ ಕೈಗೆ ಸೇರುವುದರೊಳಗೆ ಮುರಿದಿದ್ದ ಸಣ್ಣೀರ ದೇವಿರಿಯರ ಮನಸ್ಸುಗಳು ಒಂದುಗೂಡಿರುತ್ತವೆ.

ಶೀರ್ಷಿಕೆಯೇ ತಿಳಿಸುವಮತೆ ಉಂಗುರವೊಂದು ಒಂದೇ ಕುಟುಂಬಕ್ಕೆ ಸೇರಿದ್ದ ಎರಡು ಸಂಸಾರಗಳು ವೈಯಕ್ತಿಕ ಅಹಂನಿಂದ ಬೇರ್ಪಟ್ಟು ಅದನ್ನು ಮತ್ತೆ ಕೂಡಿಸಲು ನೆರವಾದದು. ಈ ಕತೆಯ ವಸ್ತು ಉಂಗುರವೊಂದರ ಗಳಿಕೆ ಮತ್ತು ಕಳಿಕೆಯ ವಾಸ್ತವಿಕ ಹಾಗೂ ಪ್ರತೀಕಾತ್ಮಕ ಅರ್ಥವನ್ನು ಸಮೀಕರಿಸುತ್ತಲೇ ಒಡೆದುಹೋದ ಅಣ್ಣತಮ್ಮಂದಿರ ಸಂಬಂಧ ಹಾಗೂ ಅವರ ಹೆಂಡಂದಿರ ಮನೆ, ಮನಸ್ಸುಗಳನ್ನು ಕೂಡಿಸುವ ಇತ್ಯಾತ್ಮಕ ನೆಲೆಗೆ ಕತೆಗಾರರು ತಲುಪುವ ಬಗೆ ಕುತೂಹಲಕರದ್ದು. ಹಳೆಯ ಜೀವನ ವಿಧಾನ ಮತ್ತು ನಂಬಿಕೆಯೊಳಗಿರುವ ಜೀವ ಪೋಷಕ ಅಂಶಗಳನ್ನು ಇಲ್ಲಿ ಕಾಣಬಹುದು.

ಒಬ್ಬ ಹುಡುಗ ಮಣ್ಣಿನಲ್ಲಿ ಆಡುತ್ತಿದ್ದು, ಬೊಂಬೆ ಮಾಡಲು ಮಣ್ಣಿನುಂಡೆಯೊಂದನ್ನು ಒಯ್ದಿರುತ್ತಾನೆ. ಒಡೆದು ಹೋಗಿದ್ದ ಮನೆ, ಮನಗಳೆರಡೂ ಉಂಗುರದ ಕಾರಣದಿಂದಲೇ ಪವಾಡ ಸದೃಶ ರೀತಿಯಲ್ಲಿ ಒಂದಾಗುತ್ತದೆ. ಉಂಗುರದ ಅಸ್ತಿತ್ವದ ಹಿಂದೆ ಮೋಹಿನಿ ಮುಂತಾದ ನಂಬಿಕೆಗಳು ಕೆಲಸ ಮಾಡಿದ್ದರೂ ಒಡೆದ ಮನೆಗಳನ್ನು ಒಂದುಗೂಡಿಸುವ ನೆಪವಾಗಿ ಉಂಗುರ ಕಾರ್ಯನಿರ್ವಹಿಸಿದ ರೀತಿ ಅತ್ಯಂತ ಸಹಜ ಮತ್ತು ಲೌಕಿಕ ನೆಲೆಯಾಗಿದೆ. ಯಾವುದೇ ಅಗೋಚರ, ಅಸಂಭವನೀಯ ಸಂಗತಿಗಳನ್ನು ತಂದು ಅಸಂಗತಗೊಳಿಸದೇ ಚದುರಂಗರು ವಸ್ತುವನ್ನು ಚೆನ್ನಾಗಿ ನಿರ್ವಹಿಸಿರುವ ಬಗೆಯಂತು ಅವರ ಮನೋಧರ್ಮ ಮತ್ತು ಕಥನ ರೀತಿಗಳನ್ನು ತಿಳಿಸುತ್ತದೆ.

ಈ ಕಥೆ 'ಕ್ವಾಟೆ' ಸಂಕಲನದಲ್ಲಿ ಕಂಡುಬರುವ ಮಹತ್ವದ ಕಥೆ. ಅಣ್ಣ ತಮ್ಮಂದಿರ ಭಾಗದ ಕಥೆ ಪಡೆದುಕೊಳ್ಳುವ ಅತ್ಯಂತ ಮಾನವೀಯ ತಿರುವನ್ನು ಅದು ದಾಖಲಿಸುತ್ತದೆ. ಉಂಗುರ ಇಲ್ಲಿ ಮೂಡನಂಬಿಕೆಯ ಕುರುಹಾಗಿ ಬರುವುದಿಲ್ಲ ಬದಲಿಗೆ ಮುರಿದ ಮನೆಗಳನ್ನು ಒಂದುಗೂಡಿಸುವ ಮಾನವೀಯ ಅನುಭವಗಳನ್ನು ಅತ್ಯಂತ ವಾಸ್ತವ ನೆಲೆಯಲ್ಲಿ ಮೂರ್ತಗೊಳಿಸುವ ಅನನ್ಯ ಅಸ್ತುವಾಗಿ ಕಂಡುಬರುತ್ತದೆ.

ದೇವಿಯ ಅತ್ತಿಗೆ ಮತ್ತು ಭಾವ ಒಳ್ಳೆಯವರಾದರೂ ತಾನೇಕೆ ಅಷ್ಟೊಂದು ದ್ವೇಷ ಸಾಧಿಸಲು ಹೋದೆ? ಎಂದು ವ್ಯಥೆ ಪಡುವಳು. ಅವಳ ಹೆರಿಗೆಯ ವೇಳೆಯಲ್ಲಿ ಅತ್ತಿಗೆ ಗೌರಮ್ಮ ಸಹಾಯಕ್ಕೆ ಬರುವಳು. ಆ ಸಮಯದಲ್ಲಿ ಉಂಗುರ ದೊರೆಯುವುದ ಕಥೆಗೆ ಹೊಸ ತಿರುವನ್ನು ನೀಡುತ್ತದೆ. ರುಮಾಲೆ ಸಂಗಪ್ಪನ ಪ್ರಜ್ಞೆ ಮೂಲತಃ ವಿಶಾಲತೆಯ ಮತ್ತು ಒಳ್ಳೆಯ ಸ್ವಭಾವದ್ದು. ಶರಣರ ವಚನಗಳನ್ನು ಹೇಳುವ, ಕೇಳುವ ಇವನ ಅಭ್ಯಾಸ ಇವನ ಮನೋಧರ್ಮದ ಸಂಕೇತ, ಇವನು ತನ್ನ ತಮ್ಮನ ಹೆಂಡತಿಯ ಕೃತ್ಯಗಳನ್ನು ಅಸಹಾಯಕತೆಯಿಂದ ನೋಡುವನು. ದೇವೀರಿಯ ಪಾಪಪ್ರಜ್ಞೆ ತನ್ನ ಕೃತ್ಯಕ್ಕೆ ನಾಚುವ ಪರಿ ಮತ್ತು ಸಂಗಪ್ಪನ ಹೆಂಡತಿ ಗೌರಮ್ಮನ ಸ್ವಭಾವ ವೈದೃಶ್ಯವಾಗಿ ಬಂದಿದೆ. ನಮ್ಮ ಹಳ್ಳಿಗಳಲ್ಲಿ ಇಂತಹ ಎಷ್ಟೋ ಘಟನೆಗಳು ಜರುಗುತ್ತವೆ. ಅದರಲ್ಲೂ ಅವಿಭಕ್ತ ಕುಟುಂಬ ವ್ಯವಸ್ಥೆ ನಾಶಹೊಂದುತ್ತಿರುವ ಸಂದರ್ಭದಲ್ಲಿ ಇಂತಹ ವಿವರಗಳನ್ನು ಪ್ರತ್ಯಕ್ಷವಾಗಿ ಕಾಣಬಹುದಾಗಿದೆ.

ಕಥೆಗಾರರ ಈ ಗ್ರಾಮ ಪರಿಕಲ್ಪನೆ ಈ ತೆರನಾದ ಕುಟುಂಬದ ಚೌಕಟ್ಟನ್ನು ಅರಹುತ್ತದೆ. ಈ ವಿವಾದ ಮತ್ತು ಮನಸ್ತಾಪದ ಸಂದರ್ಭದಲ್ಲಿ ಗ್ರಾಮದ ಹಿರಿಯರು ಮತ್ತು ಮುಖಂಡರ್‍ಯಾರೂ ಮಧ್ಯೆ ಪ್ರವೇಶಿಸುವುದಿಲ್ಲ. ಬೆಟ್ಟದಂತೆ ಬಂದ ಪ್ರತ್ಯೇಕತಾವಾದದ ಸಮಸ್ಯೆ ಹಾಗೆಯೇ ಅತ್ಯಂತ ಸಹಜವಾಗಿಯೇ ಮಂಜಿನಂತೆ ಕರಗಿಬಿಡುವುದು. ಗ್ರಾಮೀಣ ಮಂದಿಯ ಮನಸ್ಥಿತಿ ಪಾಪಪ್ರಜ್ಞೆಯಿಂದ ನೊಂದು ಹೃದಯ ವೈಶಾಲ್ಯ ಮೆರೆಯುವ ವಿಚಾರವನ್ನು ಕಥೆಗಾರ ಕೊಡುತ್ತಾ ತನ್ನ ಗ್ರಾಮ ಸಮಾಜದ ಆಕೃತಿಯನ್ನು ಆರೋಗ್ಯಕರವಾಗಿ ಮುಂದಿಡುವನು. ಲೇಖಕರು ಹಿಂದಿನ ಕಾಲದ ಕೂಡಿ ಬದುಕುವ ಸಂತೋಷವನ್ನು ಮನದುಂಬಿ ಈ ಮೂಲಕ ಹೊಗಳುತ್ತಾರೆ.

ಈ ಕಥೆಯಲ್ಲಿ ಗ್ರಾಮೀಣ ಜೀವನ ತುಂಬಾ ಸೊಗಸಾಗಿ ಮೂಡಿಬರುವ ಜೊತೆಗೆ ಇಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಕಂಡುಬರುವುದಿಲ್ಲ. ನೇರವಾದ ನಿರೂಪಣೆ ಅಚ್ಚುಕಟ್ಟಾದ ಶೈಲಿ ನಿರಾಡಂಬರವಾಗಿ ಗಮನಸೆಳೆಯುವಂತೆ ಚಿತ್ರಿತವಾಗಿದೆ.

ಅಂಕೆ:

ಈ ಕಥೆಯು "ಕ್ವಾಟೆ" ಕಥಾಸಂಕಲನದ ಉತ್ತಮ ಕಥೆ. ಕಥೆ ಸಂಕೇತ ಪ್ರತೀಕಗಳಿಂದ ಕೂಡಿದ್ದು, ಕಥೆಯ ಒಳಾರ್ಥ ಮತ್ತು ಧ್ವನ್ಯಾರ್ಥಗಳು ಅದರ ಮೂಲಕವೇ ಹೊರಡಿಸುವ ಯತ್ನ ಮಾಡಿದೆ. ಹಳ್ಳಿಯ ಪಾತ್ರ ಸನ್ನಿವೇಶ ಮತ್ತು ಅವರ ಜೀವನ ಚಿತ್ರಣಗಳು ಕಥೆಯಲ್ಲಿ ಧಾರಾಳವಾಗಿ ಕಾಣಿಸಿಕೊಂಡಿವೆ.

ಈ ಕಥೆಯ ವಸ್ತು ಹೀಗಿದೆ: ಬಸವೇಗೌಡರ ಸತ್ತು ಹೋದ ಹೋರಿಯನ್ನು ಅಂಕ ಪದೇ ಪದೇ ನೆನಪಿಸಿಕೊಳ್ಳುವುದರ ಮೂಲಕ ಕಥೆ ಆರಂಭವಾಗುವುದು. ಇದೇ ಕಥೆಯ ವಸ್ತುವನ್ನು ಸಂಕೇತಿಸುತ್ತದೆ. ಹೊರನೋಟಕ್ಕೆ ಕಥೆ ಸರಳವಾಗಿಯೇ ಇದೆ. ಅಂಕನೆಂಬ ಹಳ್ಳಿಯ ತರುಣನೊಬ್ಬ ಈ ಕಥೆಯ ಮುಖ್ಯ ಪಾತ್ರ. ಅವನ ಬದುಕಿಗೆ ಹೊಂದಿಕೊಂಡಂತೆ ನಡೆಯುವ ಘಟನೆಗಳೇ ಕಥೆಯ ಹರವು. ಸಣ್ಣವನಿದ್ದಾಗ ಅಂಕನಿಗೆ ಸಿಡುಬಿನ ಸೋಂಕು ತಗುಲಿ ಅವನ ಮುಖ ವಿಕಾರವಾಗಿದೆ. ಆ ಜಡ್ಡಿನಿಂದ ಅವನು ಬದುಕಿ ಉಳಿದದ್ದೇ ಹೆಚ್ಚು. ಬೆಳೆಯುತ್ತಾ ಬಂದಂತೆ ತನ್ನ ಈ ದೈವವನ್ನು ಅಥವಾ ದುರ್ದೈವವನ್ನು ಒಪ್ಪಿಕೊಳ್ಳಲಾರದೇ ತನ್ನ ತಾನೇ ಬೈದುಕೊಂಡು ನವೆಯುತ್ತಾನೆ. ಈತ ಮೈಕೈಯಿಂದ ಗಟ್ಟಿಗ ಮುಗ್ಧ, ಕೈಗೊಂಡ ಕೆಲಸವನ್ನು ಜನಮೆಚ್ಚುವಂತೆ ಮಾಡಬಲ್ಲ ನಿಷ್ಠಾವಂತ. ಹೀಗಾಗಿ ಹಳ್ಳಿಯ ಹತ್ತು ಸಮಸ್ತರಿಗೆ ಅಂಕನೆಂದರೆ ಮೆಚ್ಚುಗೆ. ಆದರೆ ಅವನ ಸಿಡುಬಿನ ಮೋರೆಯ ವಿಕಾರದಿಂದಾಗಿ ಎಲ್ಲಾ ಜನರ ಅದರಲ್ಲೂ ಹಳ್ಳಿಯ ಹರೆಯದ ಹೆಂಗಳೆಯರ ನಡುವೆ ನಗೆಪಾಟಲಾಗಿದ್ದಾನೆ. ಕಥೆ ಶುರುವಾದಾಗ ಹಳ್ಳಿಗೆ ಬಂದ ಹೊಸ ಹುಡುಗಿಯೊಬ್ಬಳನ್ನು ಅಂಕ ಇರುಕುಳ ಹೋರಿಯೊಂದರಿಂದ ತಪ್ಪಿಸುತ್ತಾನೆ. ಹುಡುಗಿ ಉಳಿದಳು. ಆದರೆ ಅಂಕನಿಗೆ ಸಿಕ್ಕ ಪ್ರತಿಫಲ ಅವಳು ಅವನ ವಿಕಾರ ಮುಖನೋಡಿ ಮೋರೆ ಕಿವುಚಿಕೊಂಡು ಓಡಿಹೋಗುತ್ತಾಳೆ. ಹೀಗಾಗಿ ಈ ಜನ್ಮದಲ್ಲಿ ತನಗೆ ಹೆಣ್ಣಿನ ಸಂಬಂಧ ಲಭ್ಯವಿಲ್ಲ ಎಂದು ತೀರ್ಮಾನಿಸುತ್ತಾನೆ.

ಜನರ ಈ ತರಹದ ಹೀಯಾಳಿಕೆಯನ್ನು ಎದುರಿಸಲೆಂದು ಅಂಕ ತನ್ನೊಳಗೆ ತಾನೇ ಮಾನಸಿಕ ಪ್ರತಿರೋಧಗಳನ್ನು ಬೆಳೆಸಿಕೊಳ್ಳುತ್ತಾನೆ. ಯಾರೂ ಅವನ ಕಡೆ ತಿರುಗಿಯೂ ನೋಡದ ಸಂದರ್ಭದಲ್ಲಿ ಮದುವೆಯ ಮಾತು ದೂರವೇ ಉಳಿಯುತ್ತದೆ. ಜನರಿಂದ ತಿರಸ್ಕೃತನಾದ ಅಂಕ ಮಾತನ್ನು ತಿರಸ್ಕರಿಸಿ ಮೌನಿಯಾಗುತ್ತಾನೆ. ಅವನ ಮೌನವನ್ನು ಆತನು ಮಾಡುವ ನಿದ್ದೆ ತೀವ್ರಗೊಳಿಸುತ್ತದೆ. ಕೊರಳಲ್ಲಿ ಇರುವ ಲಿಂಗದ ಕಾಯಿ ಕಳುವಾದರೂ, ಸರ್ಪ ಹೊಕ್ಕಳಿನ ಸುತ್ತ ತೆಕ್ಕೆ ಹಾಕಿ ಮಲಗಿದ್ದರೂ ಎಚ್ಚರವಾಗದಂತಹ ದೆವ್ವದ ನಿದ್ದೆ. ಅವನ ನಿದ್ದೆಯ ರೀತಿಯಲ್ಲಿಯೇ ಅವನ ಕಾಮವೂ ಸಹ ಅತ್ಯಂತ ಆಳವಾದ ನಿದ್ದೆಯಲ್ಲಿ ಚೇತನವೇ ಇಲ್ಲದೆ ಬಿದ್ದುಬಿಟ್ಟಿದೆ. ಅದಕ್ಕೆ ಬದಲಾಗ ಆ ಚೇತನ ತನ್ನನ್ನು ಅನನ್ಯ ಅವಿರತ ಅಚ್ಚುಕಟ್ಟು ಕಾಯಕದಲ್ಲಿ ತೊಡಗಿಸಿದೆ. ಅವನ ಕಾಮವನ್ನು ಗಿರಿಜೆಯಂಥ ಹೆಣ್ಣು ಸಹ ಎಚ್ಚರಿಸಲಾರಳು ಅತ್ಯಂತ ವಿಭಿನ್ನವಾದ ವೈಚಿತ್ರ್ಯದ ವ್ಯಕ್ತಿ ಚಿತ್ರವೊಂದನ್ನು "ಅಂಕ" ಕಥೆ ಕಟ್ಟಿಕೊಡುತ್ತದೆ.

'ಅಂಕ' ತನ್ನ ಸಿಡುಬಿನ ಕಲೆಯ ಮುಖ ಹೊತ್ತುಕೊಂಡು ತಿರುಗಬೇಕಾದ ಅಂಕನೆಂಬ ಆಳುಮಗನು ತೀರ ಅಂತರ್ಮುಖಿ. ಗೌಡರ ಆಳಾಗಿ ದುಡಿದಂದಿನಿಂದಲೂ ಅವನ ಕಾಯಕ ನಿಷ್ಠೆ ಒಂದೇ ತೆರನಾದದ್ದು. ಇಡೀ ಕಥೆಯಲ್ಲಿ ಅಂಕ ಲಿಂಗದ ಕಾಯಿ ಕಳಕೊಂಡ ಪ್ರಸಂಗ ಒಂದು ಸಣ್ಣ ಘಟನೆಯಾಗಿ ಮಾತ್ರ ಬರುತ್ತದೆ. ಕಥೆಯಲ್ಲಿ ಇದಕ್ಕಿಂತ ತುಸು ಸ್ಪಷ್ಟವಾಗಿ ಮೂಡಿಬಂದ ಇನ್ನೊಂದು ಪ್ರತೀಕವೆಂದರೆ ಹಾವು ಮೇಲಿಂದ ಮೇಲೆ ಬರುತ್ತದೆ. ಕಥೆಯ ಶುರುವಾತಿಗೆ ಬರುವ ಹೊಸ ಹುಡುಗಿ ಅಂಕನಿಗೆ ಸರ್ಪದಂತೆ ಕಾಣಿಸಿಕೊಳ್ಳುತ್ತಾಳೆ. 'ಸರ್ಪ ತನ್ನ ಉದ್ದನೆಯಮೈಯನ್ನು ಮೋಹಕವಾಗಿ ನುಲಿದು ನುಲಿದು ಹರಿದಾಡುವಂತ ಬೆಡಗಿನ ನಡಿಗೆ' ಆ ಹುಡುಗಿಯದು. ಇಂಥದೇ ಇನ್ನೊಂದು ಸರ್ಪ ಅಂಕ ತನ್ನ ಹೊಲದಲ್ಲಿ ಮಲಗಿರುವಾಗಲು ಕಾಣಿಸಿಕೊಳ್ಳುತ್ತದೆ.

ಹಾವು ಒಡಮೂಡುವುದು ಸುಪ್ತ ಕಾಮದ ಪ್ರತೀಕವಾಗಿರಬೇಕು. ತನ್ನ ಕಾಮದ ಬಗ್ಗೆ ತನಗಿರುವ ಅವ್ಯಕ್ತ ಭೀತಿಯ ಸಂಕೇತವು ಇದಾಗಿದೆ. ಈ ಹಾವು ತನ್ನ ತಂಗಿಯ ಕೂಸನ್ನು ನೆನಪಿಗೆ ತರುತ್ತಾದ್ದರಿಂದ ಇದು ಬದುಕಿನ ಬಗ್ಗೆ ಎಳೆ ಜೀವನದ ಬಗ್ಗೆ ಅಂಕನಿಗಿರುವ ಪ್ರೀತಿಯ ಸಂಕೇತವು ಆಗುತ್ತದೆ. ಆದರೆ ಈ ಪ್ರತೀಕದ ಸಂಕೀರ್ಣತೆ ಪ್ರತೀಕಾತ್ಮಕವಾಗಿ ಮಾತ್ರ ಉಳಿದು ಕಥೆಯ ಬೇರೆ ಸ್ಥರಗಳಲ್ಲಿ ಧ್ವನಿಸುವುದಿಲ್ಲ. ಪ್ರಾರಂಭದಲ್ಲಿಯಂತೆ ಕಥೆಯ ಕೊನೆಯಲ್ಲೂ ಹಾವು ಹೆಣ್ಣಿನ ಸಹಚರಿಯಾಗಿ ಬರುತ್ತದೆ. ಗೌಡರ ಮಗಳು ಗಿರಿಜೆ ಗಂಡ ಬಿಟ್ಟಾಕೆ ಅಂಕನ ಸಂಗ ಬಯಸಿ ಅವನನ್ನು ಕರೆಯುತ್ತಾಳೆ. ಆದರೆ ಅಂಕ ಕಥೆಯ ಈ ಹೊತ್ತಿಗೆ ತನ್ನ ಕಾಮವನ್ನು ಹತ್ತಿಕ್ಕಿ ಅಚೇತನವಾಗಿದ್ದಾನೆ.

ಗಿರಿಜೆ ಏನೂ ಹೇಳಲು ತೋಚದೆ ನೀನೊಂದು ಕಲ್ಲುಬಂಡೆ ಎಂದು ಒಳಗೆ ಗೊಣಗಿದಳು. ಅವಮಾನ, ಸಿಟ್ಟು, ಕ್ಲೇಶ, ದುಮ್ಮಾನಗಳಿಂದ ಅವನನ್ನೊಮ್ಮೆ ದಿಟ್ಟಿಸಿ ಹೊಲದ ಪಕ್ಕದ ಇಳಿಜಾರಿನಲ್ಲಿ ಸರಸರ ನಡೆದು ಹೋದಳು. ತಲೆತಗ್ಗಿಸಿ ನಿಂತಿದ್ದ ಅಂಕ ದೃಷ್ಟಿ ಎತ್ತಿ ಅವಳು ಸಾಗುತ್ತಿರುವುದನ್ನು ನೊಡಿದ, ಅವಳು ದೂರದೂರ ಹೋದಂತೆ ಅತ್ತ ಇತ್ತ ತೊನೆಯುವ ಅವಳ ಉದ್ದನೆ ಜಡೆಯಲ್ಲಿ ಅವನ ನೋಟ ಕೇಂದ್ರೀಕೃತವಾಗಿ ಒಂದು ಕರಿನಾಗರ ಹರಿದು ಹೋಗುತ್ತಿದ್ದಂತೆ. ಭಾಸ ಅವನ ಒಡಲೊಳಗೆ ಏನಾಗುತ್ತಿತ್ತು ಅವನಿಗೆ ಸ್ಪಷ್ಟವಿಲ್ಲ.

ಅಂಕನಂಥ ಕ್ರಿಯಾಶೀಲ ವ್ಯಕ್ತಿಯೊಬ್ಬ ಸಾಮಾಜಿಕ ಪರಿಸರದ ಒತ್ತಡಕ್ಕೆ ಸಿಕ್ಕು ತನ್ನ ಮಾನಸಿಕ ಸ್ಥೈರ್ಯವನ್ನು ಹೇಗೆ ಕಳೆದುಕೊಳ್ಳುತ್ತಾನೆ ಎಂಬುದೇ ಇಲ್ಲಿ ಕಂಡುಬರುತ್ತದೆ. ಅಂಕನ ಆ ಜೀವನ ಪ್ರೇಮ, ಅವನ ಮುಗ್ಧ ಸ್ವಭಾವ, ಕೆಲಸದ ಬಗ್ಗೆ ಅವನಿಗಿರುವ ನಿಷ್ಠೆ ಅವನ ಗಟ್ಟಿತನ ಇವಕ್ಕೆಲ್ಲಾ ಅರ್ಥ ತಿಳಿಯಲು ಆಗದು. ಅಂಕ ತನ್ನ ಸ್ಥೈರ್ಯ ಕಳಕೊಳ್ಳಲು ಕಾರಣವಿತ್ತು. ಸಿಡುಬಿನಿಂದ ಅವನು ಕುರೂಪಿ-ಯಾಗಿದ್ದಾನೆ ಎಂಬುದು ಜನರ ಅದರಲ್ಲೂ ಹುಡುಗಿಯರ ತಾತ್ಸಾರಕ್ಕೆ ಪಕ್ಕಾಗಿ ಬೆಳೆದ ಅವನ ಕೀಳರಿಮೆ ಇವು ಕತೆಯಲ್ಲಿ ನಿರಾಕೃತವಾಗುತ್ತದೆ.

ಅಂಕನ ಪಾತ್ರದ ಇನ್ನೊಂದು ಕೊರತೆ ಎಂದರೆ ಅವನ ಮನೋಭೂಮಿಕೆಗೆ ಕಾರ್ಯಕಾರಣದ ಸಂಬಂಧವಿರಬಹುದು. ಚಿಕ್ಕಂದಿನಿಂದಲೂ ಇಂದಿನವರೆಗೂ ಸಿಡುಬಿನ ಕಲೆಯಿಂದ ವಿಕಾರವಾದ ಮೊರೆ ಹೊತ್ತುಕೊಂಡು ತಿರುಗುತ್ತಿದ್ದರೂ ಅದನ್ನು ಒಪ್ಪಿಕೊಳ್ಳದಿರುವುದು ಅಥವಾ ಅದನ್ನು ಎದುರಿಸದಿರುವುದು ಹೀಗಾಗಿ ಅವನು ಬದುಕು ವ್ಯರ್ಥವಾಗುವುದಕ್ಕೆ ಅವನ ಸುತ್ತಮುತ್ತಲಿನ ಸಮಾಜ ಕಾರಣವೇ ಹೊರತು ಅಂಕನಲ್ಲ ಎಂಬ ಭಾವನಾತ್ಮಕ ಪ್ರತಿಕ್ರಿಯೆ ಕತೆಯಲ್ಲಿ ಧ್ವನಿಸುತ್ತದೆ. ಆದರೆ ಈ ಭಾವನೆ ಕೂಡ ಸಂದಿಗ್ಧ ಪ್ರತೀಕಗಳ ಮುಖಾಂತರ ಧ್ವನಿತವಾಗುತ್ತದೆ.

ಮೃಗಯಾ

ಇದು ಏಳು ಕತೆಗಳ ಹೊಸ ಸಂಕಲನ ೧೯೬೪ರಲ್ಲಿ ಪ್ರಕಟವಾದ 'ಮೃಗಯಾ' ಚದುರಂಗರ ಕೊನೆಯ ಕಥಾಸಂಕಲನ 'ಜಿಂಕೆಮಾನವ' ಕತೆಯ ಹೆಸರನ್ನು 'ಮೃಗಯಾ' ಎಂದು ಬದಲಾಯಿಸಿರುವುದರಿಂದ ಇದು ಹೆಚ್ಚು ಧ್ವನಿಶಕ್ತಿಯನ್ನೂ, ಅರ್ಥವಂತಿಕೆ-ಯನ್ನು ಪಡೆದುಕೊಂಡಿದೆ ಎಂದು ಚದುರಂಗರೇ ಹೇಳಿಕೊಂಡಿದ್ದಾರೆ.

ಈ ಕಥೆಯ ವಸ್ತು ಹೀಗಿದೆ: ಕಥಾನಾಯಕ ಸೋಮನಿಗೆ ಜಿಂಕೆಗಳೆಂದರೆ ಪ್ರಾಣ, ಪುಟ್ಟೀರಿ ಹೆಂಡತಿ, ಅತ್ತೆ ನಾಕೂರಮ್ಮನ ಪ್ರೀತಿಹಾಸ್ಯದಲ್ಲಿ ಸುಖವಾಗಿದ್ದನು. ಅಕಸ್ಮಾತ್ತಾಗಿ ಸಿಕ್ಕ ಜಿಂಕೆಮರಿಯನ್ನು ಸೋಮ ತಂದು ಸಾಕಲಾರಂಭಿಸುವನು. ಊರಗೌಡ ಸೊಮನ ಹೆಂಡತಿಯ ಅತ್ಯಾಚಾರ ಮಾಡಲು ಯತ್ನಿಸಿ ವಿಫಲನಾಗುವನು. ಮೊದಲ ಹೆರಿಗೆಯಲ್ಲಿ "ಪುಟ್ಟೀರಿ ತೀರಿಕೊಳ್ಳುತ್ತಾಳೆ. ಸಾಲದ ಹಣ ವಾಪಸು ಮಾಡದ್ದಕ್ಕಾಗಿ ಸೋಮ ಸಾಕುತ್ತಿದ್ದ ಜಿಂಕೆಯನ್ನು ಹೊತ್ತುಕೊಂಡು ಹೋಗಿ ಕೊಂದು ಮಾಂಸ ತಿಂದಿರುತ್ತಾರೆ. ಸೋಮನಿಗೆ ರೋಷವಿರುತ್ತದೆ. ಸಮಯ ಕಾಯ್ದು

ಗೌಡನನ್ನು ಕತ್ತರಿಸುತ್ತಾನೆ. ಸೋಮನ ವಿರುದ್ಧವೇ ಎಲ್ಲರೂ ಸಾಕ್ಷಿ ಹೇಳಿದ್ದರಿಂದ ಅವನಿಗೆ ಶಿಕ್ಷೆಯಾಗುತ್ತದೆ.

"ಮೃಗಯಾ" ಈ ಸಂಕಲನದ ವಿಶಿಷ್ಟ ಕತೆ. ಕತೆ ಸೋಮ ಎನ್ನುವ ಮುಗ್ಧ ವ್ಯಕ್ತಿ ಜಿಂಕೆಯ ಮೇಲೆ ಇಟ್ಟುಕೊಂಡ ಅತೀವ ಆಕರ್ಷಣೆ ಮತ್ತು ಪ್ರೀತಿಯನ್ನು ಚಿತ್ರಿಸುತ್ತದೆ. ತಾಯಿ, ಹೆಂಡತಿ, ಮಗು ಎಲ್ಲರನ್ನು ಕಳೆದುಕೊಂಡರು ತಂದು ಸಾಕಿಕೊಂಡಿರುವ ಜಿಂಕೆ ಅವನನ್ನು ಬದುಕಿಗೆ ಹಚ್ಚಿದೆ. ಅಂತಹ ಜಿಂಕೆಯನ್ನು ಊರಗೌಡ ತನ್ನ ಗರ್ಭಿಣಿ ಹೆಂಡತಿಯ ಬಯಕೆ ಈಡೇರಿಸಲು ಸಾಯಿಸಿ ಅಡಿಗೆ ಮಾಡಿಸಿಬಿಡುತ್ತಾನೆ. ಸೋಮ ಗೌಡನನ್ನು ಕೊಂದು ಗಲ್ಲುಶಿಕ್ಷೆಗೆ ಗುರಿಯಾಗಿರುವಾಗ ಜಿಂಕೆಯೇ ಆಗಿಬಿಟ್ಟ ಅನುಭವವನ್ನು ಹೊಂದುತ್ತಾನೆ.

ಮೇಲುನೋಟಕ್ಕೆ ವಸ್ತುವೊಂದರ ಕುರಿತಾದ ಅತೀವ ಪ್ರೀತಿಯನ್ನು ಕಥೆ ಹೇಳುತ್ತಿದ್ದರೂ ಅಂತರಾರ್ಥದಲ್ಲಿ ಜಿಂಕೆ ಕುರಿತಾದ ಸೋಮನ ಪ್ರೀತಿ ಮತ್ತಾವುದನ್ನೋ ಸೂಚಿಸುತ್ತಿರುವಂತೆ ಭಾಸವಾಗುತ್ತದೆ. ಜಿಂಕೆ ಇಲ್ಲಿ ಭಯ ಮತ್ತು ಬಿಡುಗಡೆಯ ಭಾವವನ್ನು ಗಲ್ಲು ಏರುವುದರ ಮೂಲಕ ಸೋಮ ಅನುಭವಿಸುತ್ತಾನೆ. ಅವನು ಜೈಲಿನ ಗೋಡೆಯ ಮೇಲೆ ಬಿಡಿಸಿದ ಜಿಂಕೆಯ ಚಿತ್ರಕ್ಕೆ ಜೀವಬಂದು ಮೋಹಕವಾಗಿ ಕುಣಿಯಲಾರಂಭಿಸುವುದು ಮತ್ತು ಗಲ್ಲಿಗೇರುವ ಕ್ಷಣದಲ್ಲಿ ಆತ ಸಂಪೂರ್ಣವಾಗಿ ಜಿಂಕೆಯೇ ಆಗಿ ಬಿಡುವುದು ಅದಕ್ಕೆ ಪುರಕವಾಗಿ ಬರುತ್ತದೆ. ಕೆಳವರ್ಗದ ಜೀವಂತಿಕೆಯ ಅತೀವ ಆಸೆಯನ್ನು ಮೇಲುವರ್ಗದವರು ತಮ್ಮ ಬಯಕೆ ಈಡೇರಿಕೆಗೆ ಅಡುಗೆ ಮಾಡಿ ಉಂಡು ಬಿಡುವ ನೀತಿಯನ್ನು ಮೌನವಾದ ನೆಲೆಯಲ್ಲಿ ಪ್ರತಿಭಟಿಸುತ್ತದೆ. ಜಿಂಕೆ ಕೆಳವರ್ಗದವರ ಮಾನವೀಯತೆಗೆ ಪ್ರತೀಕವಾದರೆ ಅಡುಗೆಯಲ್ಲಿ ಬೆಂದ ಜಿಂಕೆ ಮೇಲ್ವರ್ಗದವರ ಅಮಾನುಷತೆಗೆ ಪ್ರತೀಕವಾಗುತ್ತದೆ.

ಅತ್ಯಂತ ಮುಗ್ಧ ಸರಳ ಪ್ರೀತಿಯುಳ್ಳ, 'ಮೃಗ'ವಾಗಿ ಬಿಡುವ ಪ್ರಕ್ರಿಯೆಯನ್ನು ನಾವಿಲ್ಲಿ ಗುರುತಿಸಬಹುದು. ಸೋಮ ಇಲ್ಲಿ ಇದ್ದಕ್ಕಿದ್ದಂತೆಯೇ ಮೃಗವಾಗಿ ಬಿಡುವುದಿಲ್ಲ. ಬದಲಿಗೆ ಹಂತ ಹಂತವಾಗಿ ತನ್ನ ಮಾನವೀಯತೆಯನ್ನು ಬಿಟ್ಟುಕೊಡುವಂತೆ ಗೌಡನ ವರ್ತನೆ ಪ್ರೇರೇಪಿಸುತ್ತದೆ. ಇದು ನನ್ನ ಹೆಂಡತಿಯ ಕೆಣಕಿದಯಲ್ಲಾ ಅದಕ್ಕೆ ಎಂದು ಮೂದಲಿಸುತ್ತಾ ಗೌಡನ ಕೈಗಳನ್ನು ಕತ್ತರಿಸಿದ, ಇದು ನನ್ನ ಜಿಂಕೆಯ ಬೇಯಿಸಿ ತಿಂದ್ರಲ್ಲಾ ಅದಕ್ಕೆ ಎಂದು ಅವನ ಹೊಟ್ಟೆಯನ್ನು ಬಗೆದ. ಗೌಡ ತನ್ನನ್ನು ಎಕ್ಕಡದಿಂದ ಒದ್ದ ಅಪಮಾನದ ವಿರುದ್ಧ ಸೋಮನೂ

ಅಮಾನುಷವಾಗಿಯೇ ಉತ್ತರಿಸುತ್ತಾನೆ. ಗ್ರಾಮೀಣ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಜಮೀನ್ದಾರರ ಕ್ರೌರ್ಯದ ಅನಾವರಣ ಇಲ್ಲಿ ತುಂಬಾ ಸೂಚ್ಯವಾಗಿ ಬಂದಿದೆ. ನಿಜಕ್ಕೂ ಇದು ಬಲವುಳ್ಳ ಮತ್ತು ಬಲಹೀನರ ನಡುವಿನ ಸಂಘರ್ಷದ ಕತೆಯಾಗಿದೆ.

ಇಲ್ಲಿ ಜಿಂಕೆ ಮತ್ತು ಮಾನವ ಎರಡನ್ನೂ ಏಕತ್ರಗೊಳಿಸುವ ಆಶಯವಿದೆ. ಜಿಂಕೆಯಲ್ಲಿ ಸಹಜ ಜೀವನ ಹೊಂದಾಣಿಕೆಯಿದೆ. ಮಾನವರಲ್ಲಿ ಆ ಕಥಾನಾಯಕನ ಹುಡುಕುವ ಅಸಮತೋಲನ ಬದುಕಿನ ಒಂಟಿ ಮನುಷ್ಯ ಇದ್ದಾನೆ. ಅವನು ಒಂದು ಪ್ರಕೃತಿ ಜೀವದ ಒಂದು ಪ್ರತ್ಯೇಕ ಅಸ್ತಿತ್ವ ಎಂದು ತಿಳಿದವನು ಅಥವಾ ಪ್ರಕೃತಿ ತನಗೆ ಹೊಸ ಜೀವ ಕೊಡಲು ಬರುತ್ತದೆ. ಬರಬೇಕು ಎಂದು ತಿಳಿದುಕೊಂಡವನು. ಈ ಎರಡು ಪರಸ್ಪರ ಸಹಜ ಆದರೆ ಪ್ರತ್ಯೇಕವಾದ ಸಹಜ ಬದುಕುಗಳ ಹೊಂದಾಣಿಕೆಯ ಹೊಸ ದೃಷ್ಟಿಯಲ್ಲಿ ಈ ಕಥೆ ಒಂದು ಯುಗ ಪರಿವರ್ತನೆ ಹರಿಕಾರ ಎನಿಸುತ್ತದೆ. ಈ ವಿಮರ್ಶೆಯು ಜಿಂಕೆ ಮತ್ತು ಮನುಷ್ಯನ ಏಕತ್ರವನ್ನು ಹೇಳುತ್ತದಾದರೂ ಗಲಿಬಿಲಿಯಿಂದ ಕೂಡಿದೆ. ಆದರೆ ಲೇಖಕರು ಅಡ್ಡಿಯಿರುವ ಪಾತ್ರಗಳನ್ನು ಇಲ್ಲವಾಗಿಸುತ್ತಾ ಹೋಗುತ್ತಾರೆ. ಸೋಮನ ತಾಯಿ ಮತ್ತು ಹೆಂಡತಿ ಇಬ್ಬರೂ ಸತ್ತಿರುತ್ತಾರೆ.

ವಾಸ್ತವವಾಗಿ ಈ ಕಥೆ ಚದುರಂಗರ ಅದಮ್ಯ ಮಾನವ ಪ್ರೀತಿಯ ದ್ಯೋತಕವಾಗಿದೆ. ಈ ಕಥೆಯಲ್ಲಿ ಬರುವ ಸೋಮ ತನ್ನ ಬದುಕಿನ ಹಲವು ತಿರುವುಗಳನ್ನು ನೋವಿನಿಂದ ಸುಖದಿಂದ ಅನುಭವಿಸಿದವನು. ತಂದೆಯ ಬೇಜವಾಬ್ದಾರಿತನ, ತಾಯಿಯ ದಿಟ್ಟತನ ಮತ್ತು ಜೀವನ ಪ್ರೀತಿ, ಮುದ್ದು ಮಡದಿಯ ಪ್ರೇಮ ಎಲ್ಲದರ ಜೊತೆಗೆ ಊರಗೌಡನ ಉಪಟಳ ಮತ್ತು ವಂಚನೆಯನ್ನು ನುಂಗಿಕೊಂಡು ಇದ್ದವನು.

ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಜಮೀನ್ದಾರರ ಕ್ರೌರ್ಯದ ಅನಾವರಣ ಇಲ್ಲಿ ತುಂಬಾ ಸೂಚ್ಯವಾಗಿ ಬಂದಿದೆ. ನಿಜಕ್ಕೂ ಇದು ಬಲವುಳ್ಳ ಮತ್ತು ಬಲಹೀನರ ನಡುವಿನ ಸಂಘರ್ಷದ ಕತೆ. ಬಲಹೀನರಿಂದ ಅಮಾಯಕರ ಆಸೆ ನಿರೀಕ್ಷೆಗಳೆಲ್ಲಕ್ಕೂ ದೊಡ್ಡ ತಡೆಯಾದವರೆಂದರೆ ಬಲವುಳ್ಳ ಕ್ರೂರ ಸ್ವಭಾವದ ಅಮಾನವೀಯ ಜಮೀನ್ದಾರರು ಮನುಷ್ಯನ ಮನಮೊಳಗೆ ಅಡಗಿರುವ ಪ್ರಾಣಿಸ್ವಭಾವ ಅಥವಾ ಪ್ರಾಣಿ ಪ್ರೇಮ ಇಲ್ಲಿನ ಕತೆಯ ಕೇಂದ್ರಬಿಂದು ಜಿಂಕೆಯು ಮನುಷ್ಯನ ರೂಪಾಂತರಗಳ ಸಂಕೇತವಾಗಿ ಕಾಣಿಸಿಕೊಳ್ಳುವುದು ಕತೆಯ ಕೇಂದ್ರಬಿಂದು.

ಜಿಂಕೆಯು ಮನುಷ್ಯನ ರೂಪಾಂತರಗಳ ಸಂಕೇತವಾಗಿ ಕಾಣಿಸಿಕೊಳ್ಳುವುದು. ಕತೆಯ ಕೊನೆ ಇದನ್ನು ಬಹು ಸ್ಪಷ್ಟವಾಗಿ, ವಾಚ್ಯದಲ್ಲಿಯೇ ವಿವರವಾಗಿ ಹೇಳುತ್ತದೆ. ಕಥೆಯ ಜೀವನದ ಎಲ್ಲ ಆಯಾಮಗಳನ್ನು ಗಮನಿಸುತ್ತದೆಂಬುದು ಸಮಾಧಾನದ ಅಂಶ. ಘಟನಾತ್ಮಕ ಚಿತ್ರಣವಷ್ಟೇ ಆಗದೆ ವಿಶಾಲಗೊಳ್ಳುತ್ತದೆ. ಪ್ರಾಣಿ ಪ್ರೇಮದ ಉತ್ತುಂಗ ಶಿಖರವಾಗಿ ಸೋಮ ಮತ್ತವನ ಜಿಂಕೆಯ ಮೋಹ ಈ ಕತೆಯಲ್ಲಿ ಕಾಣುವುದು ವಿಶೇಷ ಅಂಶ. ತಾಯಿ ಮತ್ತು ಹೆಂಡತಿಯ ಸಾವಿನ ತರುವಾಯ ಅವನೆಲ್ಲ ಸರ್ವಸ್ವ ಜಿಂಕೆಯಾಗಿರುವುದು ಮಾತ್ರವಲ್ಲ ಅವನನ್ನು ಭಾವುಕ ಮನೋವಿಕಲತೆಗೆ ದೂಡುವಷ್ಟು ಆ ವ್ಯಾಮೋಹ ತೀವ್ರವಾಗಿರುವುದು. ಸೋಮನ ಸರ್ವಸ್ವವೂ ನಾಶಗೊಂಡ ಧ್ವನಿ ಅವನ ಜಿಂಕೆಯ ಸಾವಿನಿಂದಲೇ ಎಂದು ತಿಳಿಯಬೇಕು. ಚಿಕ್ಕ ಹುಡುಗನಾಗಿದ್ದಾಗಿನಿಂದ ಹಿಡಿದು ಗಲ್ಲಿಗೆ ಹಾಕುವವರೆಗೂ ಸೋಮನಿಗೆ ಕಾಡುವುದು ಜಮೀನ್ದಾರಿ ಗೌಡನ ಕ್ರೌರ್ಯದ ಜಗತ್ತು. ಸೋಮನಿಗೆ ಜಿಂಕೆಯೇ ಆಗಿಬಿಡುವ ಪ್ರಕ್ರಿಯೆಯ ಸೂಚನೆಗಳು ಕತೆಯಲ್ಲಿ ಧ್ವನ್ಯಾರ್ಥದಲ್ಲಿ ಬರುತ್ತದಷ್ಟೇ. ಬಯಸಿ ಬಯಸಿ ಪ್ರೀತಿಗೆ ತಾನೇ ಅದಾಗಿ ಬಿಡುವ ಪ್ರಕ್ರಿಯೆ ಇಲ್ಲಿನ ಸೋಮನದು.

ಕಲ್ಲಿನ ಕೊಳಲು:

ಈ ಕಥೆಯ ವಸ್ತು ಹೀಗಿದೆ: ಊರಿನ ಪಕ್ಕದಲ್ಲಿರುವ ನಿರ್ಜೀವ ಬಂಡೆ ಕಲ್ಲೊಂದು ಹಳ್ಳಿಗರ ಮುಗ್ದಲೋಕದಲ್ಲಿ ಅವರ ನೋವು ನಲಿವು, ಭಕ್ತಿ, ಶ್ರದ್ಧೆ, ಪ್ರೀತಿ, ವಿಶ್ವಾಸಗಳಿಗೆ ಒಳಗಾಗಿ ಅಂತಿಮವಾಗಿ ದೈವಸ್ವರೂಪವನ್ನೇ ಪಡೆದುಕೊಳ್ಳುತ್ತದೆ. ಅಂತಹ ಮುಗ್ಧ ಲೋಕದ ಮೌಲ್ಯಗಳನ್ನು ಛಿದ್ರಗೊಳಿಸುವ ಆಧುನಿಕ, ಯಾಂತ್ರಿಕ, ನಾಗರಿಕ ಸಂಸ್ಕೃತಿಯ ಆಕ್ರಮಣವನ್ನು ಈ ಕಥೆ ಚಿತ್ರಿಸುತ್ತದೆ.

ಕಥೆಯ ಆರಂಭ ಬಂಡೇಹಬ್ಬದ ವರ್ಣನೆಯೊಂದಿಗೆ ಆರಂಭಗೊಂಡು, ಕಥೆಯ ಮುಖ್ಯ ಪಾತ್ರವಾದ ಅಜ್ಜಯ್ಯ ಮಕ್ಕಳಿಗೆ ಆ ಬಂಡೆಯ ಪುರಾಣಕ್ಕೆ ಸಂಬಂಧಿಸಿದ ಕತೆ ಹೇಳುವುದರೊಂದಿಗೆ ಆರಂಭವಾಗುತ್ತದೆ. ಅನಂತರ ಅಲ್ಲಿಗೆ ಬರುವ ಅನೇಕರ ಆರೋಗ್ಯದ ಸಮಸ್ಯೆ, ಕಳುವಿನ ಸಮಸ್ಯೆಗೆ ಹೇಗೆ ಪರಿಣಾಮವಾಗುತ್ತದೆ ಎಂಬ ಅಂಶಗಳನ್ನು ತಿಳಿಸುವ ಜೊತೆಗೆ ಇಡೀ ಊರಿಗೆ ಊರೇ ಬಂಡೆಯನ್ನು ತಮ್ಮ ಅವಿಭಾಜ್ಯ ಅಂಗವೆಂಬಂತೆ ಎಲ್ಲ ಒಳ್ಳೆಯ ಕಾರ್ಯಗಳಿಗೆ ಹೋಗುವ ಮುಂಚೆ ಅಲ್ಲಿ ಬಂದು ಹೋಗುವ ಪ್ರತೀತಿಯು ತಿಳಿದುಬರುತ್ತದೆ. ಆ

ಬಂಡೆಯ ಹತ್ತಿರ ಬಂದದ್ದರಿಂದ ಕಾಯಿಲೆ ವಾಸಿಯಾಗುವ ಮೂಲಕ ಹಿಂದೂ ಮತ್ತು ಮುಸ್ಲಿಂಮರ ಬಾಂಧವ್ಯವನ್ನು ಈ ಕತೆಯಲ್ಲಿ ಕಾಣಬಹುದು.

ಹೀಗೆ ಹಲವಾರು ಸಮಸ್ಯೆಗಳಿಗೆ ಪರಿಹಾರವಾಗಿ ಕಂಡುಬರುವ ಬಂಡೆಯ ಜೊತೆಗೆ ನಿಕಟ ಸಂಬಂಧ ಇಟ್ಟುಕೊಂಡಿರುವ ಅಜ್ಜಯ್ಯನ ಕತೆ ಜೊತೆ ಜೊತೆಯಾಗಿ ಬರುತ್ತದೆ. ತನ್ನ ಒಬ್ಬನೇ ಮಗ ದ್ಯಾವ. ಮೊಮ್ಮಗ ಮಲ್ಲು ಹೀಗೆ ಅಜ್ಜಯ್ಯನ ಬಂಡೆಯೊಂದಿಗಿನ ಸಂಬಂಧ ಗಾಢವಾದುದು.

ಬಂಡೆಯ ಕಾರಣದಿಂದಲೇ ಆ ಹಳ್ಳಿಗೆ ಬಂಡೇಹಳ್ಳಿ ಎಂಬ ಹೆಸರು ಬಂದಿದ್ದು. ಆ ನಿರ್ಜೀವ ಬಂಡೆ ಕೂಡ ಆ ಹಳ್ಳಿಗರ ಬದುಕಿನಲ್ಲಿ ಹೊಂದಿದ್ದ ಆತ್ಮೀಯತೆಯ ಜೊತೆಗೆ, ಮಲ್ಲುವಿನ ಬಾಂದವ್ಯ ಅತಿಶಯವಾದುದು ತನ್ನ ನೆಚ್ಚಿನ ಮಡದಿ ಸ್ಯಾವಂತಿಯ ಅಗಲಿಕೆಯ ನಂತರ ಮಲ್ಲುಗೆ ಆ ಬಂಡೆಯೇ ಮನೆಯಾಗುತ್ತದೆ. ಅಲ್ಲದೆ ಬೈರಾಗಿಯಿಂದ ನುಡಿಸಲು ಕಲಿತ ಕೊಳಲು ಊದುತ್ತಾ ಕೂರುತ್ತಾನೆ. ಆದರೆ ಈ ಚಿತ್ರ ಬಹುಕಾಲ ಉಳಿಯುವುದಿಲ್ಲ. ಗಣಿಮಾಲೀಕ ಮಾಣಿಕ್ಯ ಪಿಳ್ಳೆಯ ಅತಿ ಆಸೆಯ ಸಲುವಾಗಿ ಹಳ್ಳಿಯ ದೈವವಾಗಿದ್ದ ಬಂಡೆಯನ್ನು ಸ್ಫೋಟಿಸಲು ಮುಂದಾದಾಗ ಮಲ್ಲುವಿನ ಪ್ರತಿಭಟನೆ ಹೆಚ್ಚಿ ಆತನ ತಲೆಗೆ ಹೊಡೆದು ಹೊರಟು ಹೋಗುತ್ತಾರೆ. ಈ ರೀತಿ ಮಲ್ಲು ಮತ್ತು ಆತನ ಕೊಳಲು ಬಂಡೆಯಭಾಗವೇ ಆಗುತ್ತಾರೆ.

ಈ ಕಥೆಯ ಮುಖ್ಯ ತಿರುವೆಂದರೆ ಆ ಮಲ್ಲುವಿನ ಸಾವಿನ ನಂತರ ಅಲ್ಲಿ ಬಂದವರಿಗೆ ಕೊಳಲಿನ ನಾದ ಕೇಳುವ ಅನುಭವವಾಗುವುದು. ಕೊನೆಗೊಮ್ಮೆ ಅಜ್ಜಯ್ಯನಿಗೂ ಈ ಅನುಭವವಾಗುವ ಜೊತೆಗೆ ಆ ಬಂಡೆಯು ಬಿರುಕುಗೊಂಡು ಅದರಲ್ಲಿ ತನ್ನ ಪುರಾತನರ ಜೊತೆಗೆ ಮೊಮ್ಮಗ ಮಲ್ಲುವಿನ ದರ್ಶನವಾಗುತ್ತದೆ. ಅಷ್ಟರಲ್ಲಿ ಮತ್ತು ಮಾಣಿಕ್ಯ ಪಿಳ್ಳೆಯ ಲಾರಿ, ಕಾರುಗಳು ಬಂಡೆಯನ್ನು ಸ್ಫೋಟಿಸಲು ಬರುವ ಮೂಲಕ ಕಥೆ ಅಂತ್ಯವಾಗುತ್ತದೆ.

ಈ ಕಥೆಯಲ್ಲಿ ಬರುವ ಬಂಡೆ ಹಳ್ಳಿಗರ ಮುಗ್ಧ ಲೋಕದಲ್ಲಿ ವಿಶಿಷ್ಟವಾಗಿ ಕಂಡುಬರುತ್ತದೆ. ಆ ಊರಿನ ಯಾವುದೇ ಶುಭ ಕಾರ್ಯಗಳಿಗೆ ಮುಂಚೆ ಆ ಬಂಡೆಯ ಒಪ್ಪಿಗೆ ಪಡೆಯುವ ಅಂಶಗಳು ತಿಳಿದು ಬರುವುದಲ್ಲದೆ, ರೋಗ ನಿವಾರಣೆಯಾಗುವ ಜೊತೆಗೆ ಕಳುವಿನ ಸಮಸ್ಯೆ ಬಗೆಹರಿಸಲು ಹಳ್ಳಿಗರು ಬಂಡೆಯ ಮೊರೆ ಹೋಗುವುದನ್ನು ಕಾಣಬಹುದಾಗಿದೆ. ಮಾಣಿಕ್ಯ ಪಿಳ್ಳೆಯಂತ ದುರಾಸೆಯಿಂದ ಕೂಡಿದ ವ್ಯಕ್ತಿಗಳು ಮಾಡುವ ದೌರ್ಜನ್ಯ ಬರೀ ಬಂಡೆಯ ಮೇಲಲ್ಲ ಇಡೀ ಹಳ್ಳಿಗರ

ಮುಗ್ಧ ಜಗತ್ತಿನ ಮೇಲೇಯೇ ಆಗಿದೆ. ಆಧುನಿಕತೆ ಕೂಡ ಹಳ್ಳಿಗಳ ನಾಶಕ್ಕೆ ಕಾರಣವಾಗಿ ನಡೆಯುವ ದೌರ್ಜನ್ಯವನ್ನು ಹಳ್ಳಿಯ ಜನರ ಬದುಕಿನ ಒಳ ವಿವರಗಳನ್ನೂ ತೆಗೆದು ತೋರಿಸುವಲ್ಲಿ ಈ ಕಥೆ ಯಶಸ್ವಿಯಾಗಿದೆ.

ಕುಟುಂಬ

ಚದುರಂಗರ ಬಹುಪಾಲು ಕತೆಗಳು ಗ್ರಾಮ್ಯ ಜೀವನದ ಹಿನ್ನೆಲೆಯಲ್ಲೇ ಮೂಡಿಬರುವಂತಹವು. ಹಾಗೆಂದ ಮಾತ್ರಕ್ಕೆ ನಗರ ಕೇಂದ್ರಿತ ಕಥೆಗಳು ಇಲ್ಲವೆಂದು ಹೇಳುವಂತಿಲ್ಲ. ಚದುರಂಗರ ಕುಟುಂಬವು ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಚಿಕ್ಕ ಸಂಸಾರ ಹಾಗೂ ಆ ಕುಟುಂಬದಲ್ಲಿ ಹೊಂದಿಕೊಂಡು ಹೋಗುವ ಮಡದಿ ಇರುವುದನ್ನು 'ಇಣುಕುನೋಟ' ಕಥೆಯಲ್ಲಿ ಕಾಣಬಹುದು. ಈ ಕಥೆಯಲ್ಲಿ ಮುಖ್ಯವಾಗಿ ಧೀರ ಮತ್ತು ಅವನ ಹೆಂಡತಿ ಮತ್ತು ಅವನ ತಾಯಿ ಕುಟುಂಬ ಇರುವಂತೆಯೇ ಚಿತ್ರಿತವಾಗಿದೆ. ಧೀರನ ಸಂಸಾರ ಸುಗಮವಾಗಿ ಸಾಗುತ್ತಿದ್ದು ಚಿಕ್ಕದಾದರೂ ಚೊಕ್ಕವಾದ ಹಟ್ಟಿ. ಹತ್ತು ವರ್ಷದಿಂದ ಒಂದು ಶಿಶು. ಹಡೆದು ಮನೆಯನ್ನು ಬೆಳಗದಿದ್ದರೂ ಇನ್ನೆಲ್ಲಾ ವಿಚಾರಗಳಲ್ಲಿ ತನಗೆ ಅನುಕೂಲವಾದ ಮಡದಿ ಇರುವ ಒಂದು ಕುಟುಂಬ ಎಂದು ಹೇಳಿಕೊಳ್ಳುವ ಧೀರನ ಮಾತಿನಲ್ಲಿ ಅವರ ಕುಟುಂಬ ಸುಗಮವಾಗಿ ಸಾಗುತ್ತಿತ್ತು ಎಂಬುದನ್ನು ಚಿತ್ರಿಸುತ್ತದೆ. ಅನಂತರ ಅದು ತನ್ನ ಹೆಂಡತಿಯ ವರ್ತನೆಯಿಂದ ಬದಲಾಗುವುದನ್ನು ಕಾಣಬಹುದು.

ಎರಡು ಕುಟುಂಬಗಳ ನಡುವಿನ ಸಂಘರ್ಷ ಅವಿಭಕ್ತ ಕುಟುಂಬಗಳು ಅವುಗಳ ಬೇರ್ಪಡಲು ಏನೆಲ್ಲಾ ಘಟನೆಗಳು ಸಂಭವಿಸುತ್ತವೆ. ಆ ಘಟನೆಗಳಿಂದ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಮಾರ್ಪಟ್ಟು ಮತ್ತೆ ಒಂದುಗೂಡುವುದನ್ನು 'ಒಂದು ಉಂಗುರದ ಕತೆ'ಯಲ್ಲಿ ಕಾಣಬಹುದು. ಎರಡು ಕುಟುಂಬದ ಒಳಗೆ ಏನೇ ನಡೆದರೂ ಅದು ಕುಟುಂಬದ ಒಳಗೆ ಮಾತ್ರ ನಡೆಯುತ್ತದೆ. ಕುಟುಂಬದ ಮೂಢನಂಬಿಕೆಗೆ ಒಳಗಾಗಿರುವುದನ್ನು ಎರಡು ಕುಟುಂಬಗಳ ಮಧ್ಯೆ ವಸ್ತುವನ್ನು ಇಟ್ಟು ಕಥೆ ರೂಪಿಸಿರುವುದು ಅದು ಯಶಸ್ವಿಯಾಗಿರುವುದು ಈ ಕಥೆಯಲ್ಲಿ ಮುಖ್ಯವಾಗಿದೆ.

'ನಾಲ್ಕು ಮೊಳ ಭೂಮಿ' ಕಥೆಯಲ್ಲಿ ಲಾಯರ್‌ನ ಒಂದು ಕುಟುಂಬ. ಕಾಳಿಂಗಯ್ಯನ ಕುಟುಂಬ, ಹಟ್ಟಿ ದೇವಪ್ಪನ ಕುಟುಂಬ ಇರುವ ಹಾಗೆ ಚಿತ್ರಿತವಾಗಿದೆ. ಜೊತೆಗೆ ಇಲ್ಲಿ ಕುಟುಂಬಗಳ ನಡುವೆ ಸಂಘರ್ಷ ಇರುವುದನ್ನು ಕಾಣಬಹುದು.

'ಕ್ವಾಟೆ' ಕಥೆಯಲ್ಲಿ ತಂದೆ ಮಗಳು ಇರುವ ಕುಟುಂಬ ಚಿತ್ರಿತವಾಗಿದೆ. ಇಲ್ಲಿ ತಂದೆಯೇ ವಾರಸುದಾರರಾಗಿ ಕಂಡುಬರುತ್ತದೆ. 'ಅಂಕ' ಕಥೆಯಲ್ಲಿ ಕುಟುಂಬ ವ್ಯವಸ್ಥೆಯು ಹೆಚ್ಚಾಗಿ ಕಂಡುಬರುವುದಿಲ್ಲ. 'ಮೃಗಯಾ' ಕಥೆಯಲ್ಲಿ ಗಂಡ-ಹೆಂಡತಿ - ತಾಯಿ ಇರುವ ಸಂತೃಪ್ತ ಕುಟುಂಬ ವ್ಯವಸ್ಥೆಯನ್ನು ಕಾಣಬಹುದು. ಆದರೆ ಈ ಕುಟುಂಬ ಊರ ಗೌಡನ ದೌರ್ಜನ್ಯದಿಂದ ಪತನವಾಗುವುದನ್ನು ಕಾಣಬಹುದು.

'ಬಣ್ಣದ ಬೊಂಬೆ' ಕಥೆಯಲ್ಲಿ ವನಜಳ ಶ್ರೀಮಂತ ಕುಟುಂಬ ಮತ್ತು ಪುಟ್ಟರಂಗಿಯ ಬಡತನದಿಂದ ಕೂಡಿದ ಕುಟುಂಬಗಳ ವಿವರಣೆ ಇದೆ. ಅಲ್ಲದೆ ಈ ಎರಡು ಕುಟುಂಬಗಳಲ್ಲಿನ ವಿವರಗಳನ್ನು ನೈಜವಾಗಿ ಲೇಖಕರು ಚಿತ್ರಿಸಿದ್ದಾರೆ. ವನಜಳ ಕುಟುಂಬದಲ್ಲಿ ಶ್ರೀಮಂತಿಕೆ ಇದೆ. ಆದರೆ ವನಜಳಿಗೆ ಸಿಗಬೇಕಾದ ನೈಜ ಪ್ರೀತಿಯೇ ಇಲ್ಲ. ಆದರೆ ಪುಟ್ಟರಂಗಿಯ ಕುಟುಂಬದಲ್ಲಿ ಬಡತನವಿದ್ದರೂ ಅದಮ್ಯ ಪ್ರೀತಿಯ ಸೆಲೆ ಇರುವುದನ್ನು ಚಿತ್ರಿಸಿದ್ದಾರೆ. 'ಗುಲಾಬಿ' ಕಥೆಯಲ್ಲಿ ತೋಟದ ಒಡತಿ ಹಾಗೂ ತೋಟದ ಮಾಲಿಯ ಕುಟುಂಬದ ವಿವರಗಳಿವೆ. ಅಲ್ಲದೆ ಗುಲಾಬಿಯ ತೋಟದ ಒಡತಿಯ ಶ್ರೀಮಂತ ಕುಟುಂಬದ ನೈಜ ವಿವರಗಳನ್ನು ನೀಡುವ ಜೊತೆಗೆ ಶ್ರೀಮಂತ ಜನರ ಕೃತಕ ಜೀವನವನ್ನು ತೋರಿಸಿದ್ದಾರೆ. "ಬರಲು ತಿರುಗುತ್ತಿತ್ತು" ಕಥೆಯಲ್ಲಿ ತಾಯಿ ಮತ್ತು ಮಗಳು ಇಬ್ಬರೇ ಇರುವ ಕುಟುಂಬದ ವಿವರವಿದೆ. ಅಲ್ಲದೆ ಸಾಮೂದಾಯಿಕ ಸಂಘಟನೆಗೆ ಸೇರದೆ ಒಂಟಿಯಾಗಿ ಈ ಕುಟುಂಬ ಪೊಲೀಸರ ದೌರ್ಜನ್ಯಕ್ಕೆ ತುತ್ತಾಗುವ ವಿವರವಿದೆ. "ಕಲ್ಲಿನ ಕೊಳಲು" ಕಥೆಯಲ್ಲಿ ಅಜ್ಜಯ್ಯನ ಕುಟುಂಬದ ಜೊತೆಗೆ ಇನ್ನು ಹಲವಾರು 'ಕುಟುಂಬಗಳ ವಿವರಗಳ ಜೊತೆ ಹಿಂದೂ, ಮುಸ್ಲಿಂ ಕುಟುಂಬಗಳು ಕೂಡ ಸಾಮರಸ್ಯದಿಂದ ಜೀವನ ನಡೆಸುತ್ತಿರುವ ವಿವರಗಳಿವೆ.

ಹೀಗೆ ಚದುರಂಗರ ಕಥೆಗಳಲ್ಲಿ ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳನ್ನು ಕಾಣಬಹುದು. ಇವರ ಕುಟುಂಬ ವ್ಯವಸ್ಥೆಯೊಳಗೆ ಕಂಡುಬರುವ ವ್ಯಕ್ತಿಗಳು ಹೆಣ್ಣಿಗೆ ಸ್ವಾತಂತ್ರ್ಯವನ್ನು ಕೊಡಬಯಸುವರು.

ಆ) ವೃತ್ತಿ, ಸಮಾಜ ಜೀವನ:

ಚದುರಂಗರ ಕಥೆಗಳಲ್ಲಿ ನಗರ ಕೇಂದ್ರಿತ ಹಾಗೂ ಗ್ರಾಮ್ಯ ಕೇಂದ್ರಿತ ಕಥೆಗಳೆರಡು ಇದ್ದು. ನಗರ ಕೇಂದ್ರಿತ ಕಥೆಗಳಲ್ಲಿ ಹಲವಾರು ವೃತ್ತಿಯನ್ನು ಅನುಸರಿಸಿರುವ ಕಾರ್ಮಿಕ ವರ್ಗವನ್ನು ಕಾಣಬಹುದಾಗಿದ್ದು, ಆ ವರ್ಗ ಆಳುವ

ವರ್ಗದ ದಮನಕಾರಿ ನೀತಿಗೆ ತುತ್ತಾದರೆ, ಬಹುಪಾಲು ಗ್ರಾಮ್ಯ ಜೀವನ ಕೇಂದ್ರಿತ ಕಥೆಗಳಲ್ಲಿ ಮುಖ್ಯವಾದ ವೃತ್ತಿಯಾಗಿ ವ್ಯವಸಾಯವು ಕಂಡುಬರುತ್ತದೆ. ಅದರಿಂದಲೇ ಕಥಾನಾಯಕರ ಜೀವನ ಸಾಗಿಸುವ ವ್ಯವಸ್ಥೆ ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಮೇಲ್ವರ್ಗದವರ ಶೋಷಣೆಗೆ ದಮನಗೊಂಡವರು ಒಳಗಾಗುವುದು ಗೋಚರವಾಗುತ್ತದೆ.

ಇವರ ಕಥೆಗಳಲ್ಲಿ ಸಮಾಜವೇ ವ್ಯಕ್ತಿಯನ್ನು ಹಾಳು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು 'ಸಯ್ಯಾಜಿರಾವ್ ರಸ್ತೆ', 'ಶವದಮನೆ', 'ಇಣುಕುನೋಟ', ಕಥೆಯಲ್ಲಿ ಕಾಣಬಹದು. 'ಅಂಕ' ಕಥೆಯಲ್ಲೂ ಇಂತಹ ವ್ಯವಸ್ಥೆ ಇದೆ. ಮೋಸ-ವಂಚನೆ ಥಳಕುಗಳ ಅನಾವರಣವೂ 'ನಾಲ್ಕು ಮೊಳ ಭೂಮಿ', 'ಮೃಗಯಾ' ಕಥೆಗಳಲ್ಲಿದೆ. ಗ್ರಾಮೀಣ ಸಮಾಜದಲ್ಲಿರುವ ರೈತ ಕಟುಂಬದ ಒಳ ವಿವರಗಳನ್ನು ನೈಜವಾಗಿ ಕಟ್ಟಿಕೊಟ್ಟಿದ್ದಾರೆ. ಇವರ 'ನಾಲ್ಕು ಮೊಳ ಭೂಮಿ' ಕಥೆಯಲ್ಲಿ ಗ್ರಾಮಪಂಚಾಯ್ತಿ ವ್ಯವಸ್ಥೆಯನ್ನು ಇದರಿಂದ ಬಲಿಷ್ಠರಾದವರು ತಮ್ಮ ಪರವಾಗಿ ನಡೆಸಿಕೊಳ್ಳುವ ವ್ಯವಸ್ಥೆಯನ್ನು ಇದರಿಂದ ಬಲಿಷ್ಠರಾದವರು ತಮ್ಮ ಪರವಾಗಿ ನಡೆಸಿಕೊಳ್ಳುವ ವ್ಯವಸ್ಥೆಯನ್ನು ಇಂತಹ ವ್ಯವಸ್ಥೆಯು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವುದನ್ನು ಲೇಖಕರು ಚಿತ್ರಿಸಿದ್ದಾರೆ. ಇವರ ಕೆಲವು ಕಥೆಗಳಲ್ಲಿ ಕಾಣುವ ನಾಯಕಿಯರಲ್ಲಿ ಅವರ 'ಕ್ವಾಟೆ' ಕತೆಯ ನಾಯಕಿಗೆ ಸಾಮಾಜಿಕ ಭಯವಿಲ್ಲ. ಇದು ಅವರ ವ್ಯಕ್ತಿತ್ವವನ್ನು ಸೂಚಿಸುವಂತದ್ದು. ಸಮಾಜದಲ್ಲಿ ನಡೆಯುತ್ತಿರುವ ಇನ್ನಿತರ ವ್ಯವಸ್ಥೆಗಳನ್ನು ಅವರು ಕಣ್ಮುಂದೆ ಕಾಣುವಂತೆ ಚಿತ್ರಿಸಿದ್ದಾರೆ.

'ತುಲಸಿ' ಕಥೆಯಲ್ಲಿ ಟಾಂಗಾ ಹೊಡೆಯುವ ಬುಡನ್ ಸಾಬಿಯ ಜೀವನದ ಜೊತೆ ಆ ಕೆಲಸದಲ್ಲಿನ ಕಷ್ಟಸುಖಗಳನ್ನು ಚಿತ್ರಿಸಿದ್ದಾರೆ. 'ತುಚೀಪ್ ತು ದಾಂಡ್' ಕಥೆಯಲ್ಲಿ ಬಾಲಕಾರ್ಮಿಕ ವೃತ್ತಿಯನ್ನು ಕರೀಂನ ಪಾತ್ರದ ಮೂಲಕ ಸಾರಿದ್ದಾರೆ. ಬರಲು ತಿರುಗುತ್ತಿತ್ತು ಕಥೆಯಲ್ಲಿ ಕಾರ್ಮಿಕ ಜೀವನದ ಚಿತ್ರಣದ ಜೊತೆ ಕಾರ್ಮಿಕರ ಸಮಸ್ಯೆಗಳು ಮತ್ತು ಸಂಘಟನೆಯ ಮಹತ್ವವನ್ನು ಒತ್ತಿ ಹೇಳಿದ್ದಾರೆ. "ಕಲ್ಲಿನ ಕೊಳಲು" ಕಥೆಯಲ್ಲಿ ಬರುವ ಬಹುಪಾಲು ಪಾತ್ರಗಳ ವೃತ್ತಿ ಕೃಷಿಕರ ವೃತ್ತಿಯೇ ಆಗಿದೆ. ಅಲ್ಲದೆ ಈ ಕಥೆಯಲ್ಲಿ ಅವರ ಕೃಷಿ ಚಟುವಟಿಕೆಗಳ ಆರಂಭಕ್ಕೆ ಮುಂಚೆ ಬಂಡೆಗೆ ಪೂಜಿಸುವ ಸಮಾಜದ ಜನರ ವಿವರಗಳನ್ನು ನೀಡಿದ್ದಾರೆ. ಈ ರೀತಿ ಕಾರ್ಮಿಕ ಹಾಗೂ ರೈತ ಜೀವನದ ಒಳ ವಿವರಗಳನ್ನು ತಿಳಿಸಿದ್ದಾರೆ.

ಸ್ತ್ರೀ ಪಾತ್ರಗಳು

ಚದುರಂಗರ ಕಥೆಗಳಲ್ಲಿರುವ ಸ್ತ್ರೀ ಪಾತ್ರಗಳು ಪುರುಷ ಪ್ರಧಾನ ವ್ಯವಸ್ಥೆಗೆ ಸಿಲುಕಿರುವ ಹೆಣ್ಣಿನ ಪಾತ್ರಗಳಾಗಿವೆ. ಆದರೂ ಸಮಾಜಕ್ಕೆ ಹೆದರದ ಸ್ವತಂತ್ರ ಪ್ರವೃತ್ತಿಯ ಏನೇ ಆದರೂ ಧೈರ್ಯವಾಗಿ ಎದುರಿಸುವಂತಹ ಪಾತ್ರಗಳಾಗಿ, ಹಾಗೆಯೇ 'ಕ್ವಾಟೆ' ಕಥೆಯ ನಾಯಕಿಯು ಸ್ವತಂತ್ರ ಪ್ರವೃತ್ತಿಯ ನಾಯಕಿಯಾಗಿ ಚಿತ್ರಿತವಾಗಿರುವುದನ್ನು ಕಾಣಬಹುದು. ತಂದೆಯಿಂದ ಮಗಳ ಶೋಷಣೆ, ಮೇಲ್ವರ್ಗದವರ ಶೋಷಣೆಗೆ ಬಲಿಯಾಗುವುದು 'ಕ್ವಾಟೆ' ಕತೆಯಲ್ಲಿ ಕಂಡುಬರುತ್ತದೆ. 'ತೀರ್ಪು' ಕಥೆಯಲ್ಲಿ ಬರುವ ಭದ್ರಿಯ ಪಾತ್ರ ತನ್ನ ಗಂಡನ ಲಫಂಗತನವನ್ನು ಸರಿದಾರಿಗೆ ತರಲು ಭದ್ರಕಾಳಿಯೇ ಆದ ಪ್ರಸಂಗ ಮತ್ತು ಒಳಕತೆಯಲ್ಲಿ ಬರುವ 'ಕನಕಮ್ಮ'ಳ ಲೈಂಗಿಕ ಸ್ವೇಚ್ಛಾಚಾರ ಶ್ರೀಕೃಷ್ಣ ಆಲನಹಳ್ಳಿಯವರ 'ಪರಸಂಗದ ಗೆಂಡೆತಿಮ್ಮ'ದ ಮರಂಕಿ ಪಾತ್ರವನ್ನು ನೆನಪಿಸುತ್ತದೆ. ಸಂಸಾರ ನಡೆಸಲು ಅಥವಾ ಒಡೆದು ಹೋಗಲು ಸ್ತ್ರೀಯೇ ಕಾರಣ ಎಂಬಂತೆ 'ಒಂದು ಉಂಗುರದ ಕತೆ'ಯಲ್ಲಿ ಚಿತ್ರಿತವಾಗಿದೆ. ಸಿಟ್ಟು, ಅವಮಾನ, ಸಮಾಜಕ್ಕೆ ಹೆದರದ ಸ್ತ್ರೀ ಪಾತ್ರ ಚಿತ್ರಣ ಇವರ ಕಥೆಗಳಲ್ಲಿದೆ.

"ತುಲಸಿ" ಕಥೆಯಲ್ಲಿ ಬರುವ ಹೆಣ್ಣು ಕಾಮುಕ ಪುರುಷರ ಭೋಗದ ವಸ್ತುವಾದರೆ ಬುಡನ್ ಸಾಬಿಗೆ ಸಂಗಾತಿಯಾಗುವ ಪಾತ್ರವಾಗುತ್ತಾಳೆ ಅಲ್ಲದೆ "ಬಣ್ಣದ ಬೊಂಬೆ" ಕಥೆಯಲ್ಲಿ ಕಂಡುಬರುವ ಸ್ತ್ರೀಪಾತ್ರಗಳು ಶ್ರೀಮಂತ ಮತ್ತು ಬಡತನದ ಪ್ರತಿನಿಧಿಪಾತ್ರಗಳಂತೆ ಕಂಡುಬರುತ್ತವೆ. 'ಗುಲಾಬಿ' ಕಥೆಯಲ್ಲಿ ಬರುವ ಮಾಲಿಯ ಹೆಂಡತಿ ತನ್ನ ಒಡತಿಯಾದ ಶ್ರೀಮಂತಳಿಂದಲೇ ಶೋಷಣೆಗೆ ಒಳಗಾಗುವ ವಿವರಗಳಿವೆ. "ಬರಲು ತಿರುಗುತ್ತಿತ್ತು" ಕಥೆಯಲ್ಲಿ ಬರುವ ಸ್ತ್ರೀಪಾತ್ರಗಳು ಸಾಮುದಾಯಿಕ ಸಂಘಟನೆಗೆ ಸೇರದೆ ಆ ಮೂಲಕ ಸಮಾಜದ ಆಕ್ರಮಣಕ್ಕೆ ತುತ್ತಾಗಿ ಕೊನೆಗೆ ಆ ಸಂಘಟನೆಯ ಮುಖ್ಯ ವ್ಯಕ್ತಿಯಾಗಿ ಕಂಡುಬರುವ ವಿವರಗಳಿವೆ. ಹೀಗೆ ಸ್ತ್ರೀಪಾತ್ರಗಳು ಚಿತ್ರಿತವಾಗಿವೆ.

ಸಾಹಿತ್ಯಿಕ ಗುಣ:

ಚದುರಂಗರ ಕಥೆಗಳ ಭಾಷೆಯು ತುಂಬಾ ಸರಳವಾಗಿದೆ. ಇಲ್ಲಿ ಬಳಕೆಯಾಗಿರುವ ಭಾಷೆ ಹಳೇ ಮೈಸೂರು, ಹುಣಸೂರು, ಪಿರಿಯಾಪಟ್ಟಣ ಪ್ರಾಂತ್ಯಕ್ಕೆ ಸೇರಿದ್ದು. ಅಲ್ಲಲ್ಲಿ ಕೆಲವು ಜನಪದರ ನುಡಿಗಟ್ಟು ಬಳಕೆಯಾಗಿದೆ. ಭಾಷೆ ಸರಳವಾಗಿ ಆಡುಮಾತಿನಲ್ಲಿದೆ. ಶೈಲಿಯು ತುಂಬಾ ಸೊಗಸಾಗಿ ಮೂಡಿಬಂದಿದೆ. ಚದುರಂಗರ

ಭಾಷಾ ಶೈಲಿ, 'ಕ್ವಾಟೆ' ಕಥೆಯಲ್ಲಿ ಪೂರ್ಣವಾಗಿ ತೆರೆದುಕೊಂಡಿದೆ. ನಿರೂಪಣೆಯ ವಿನ್ಯಾಸದಲ್ಲಿ ಪಾತ್ರ ಚಿತ್ರಣದ ಸಂಕೀರ್ಣತೆ ಮತ್ತು ಸೂಕ್ಷ್ಮತೆಗಳಲ್ಲಿ ಕಥೆಯ ಪ್ರಬಂಧ ಧ್ವನಿಯಲ್ಲಿ ಗ್ರಾಮ್ಯ ಭಾಷೆಯ ಬಳಕೆಯ ಸಹಜ ಸೌಂದರ್ಯಗಳಲ್ಲಿ ಮತ್ತು ಸಂಕೇತಗಳ ಕಾವ್ಯಮಯ ಪ್ರಯೋಗದಲ್ಲಿ ಚದುರಂಗರ ಕಲಾವಂತಿಕೆಯನ್ನು ಪ್ರದರ್ಶಿಸುವ ಕಥೆಗಳ ಸಾಲಿಗೆ ಇದು ಸೇರುತ್ತದೆ. 'ಅಂಕ'ಕತೆಯಲ್ಲಿ ಭಾಷೆ ಕೂಡ ಕ್ಲೀಷಮಯವಾಗಿ ಅರ್ಥ ಕಳೆದುಕೊಂಡಿದೆ. ಉದ್ದರಣೆಗಳಿಲ್ಲ. ಇಲ್ಲಿ ಸಂಸ್ಕೃತ ಮಿಶ್ರಿತ ಶೈಲಿಯಿಂದಾಗಿ ಆ ಅನುಭವ ಸರಳೀಕೃತವಾಗಿದೆ.

ಚದುರಂಗರು ಗ್ರಾಮೀಣ ಬದುಕಿನ ಮೌಢ್ಯ, ಕಂದಾಚಾರಗಳ, ವಿಡಂಬನೆಯನ್ನು ಹಾಗೂ ವ್ಯಂಗ್ಯ ನುಡಿಗಳ ಮೂಲಕ ಇವುಗಳ ಅರ್ಥ ಹೀನತೆಯನ್ನು ಮುಖ್ಯವಾಗಿ ಎತ್ತಿ ತೋರಿಸುತ್ತಾರೆ. ಇವರು ತಮ್ಮ ಸಾಹಿತ್ಯಿಕ ಸಾಮಗ್ರಿಗಳಿಗೆ ಗ್ರಾಮವನ್ನು ಪ್ರಧಾನವಾಗಿ ಅವಲಂಭಿಸುತ್ತಾರೆ. ಇದಕ್ಕೆ ಅವರ ಸ್ವಾನುಭವ, ಗ್ರಾಮ ಪ್ರೇಮಗಳು ಕಾರಣ. ಗ್ರಾಮ ಬದುಕಿನ ಅವಿಭಾಜ್ಯ ಅಂಗಗಳಾದ ಜನಪದ ನಂಬಿಕೆ, ಆಚರಣೆಗಳನ್ನು ಅವರು ಪ್ರಶ್ನಿಸುವುದಿಲ್ಲ. ಒಂದು ಅಂತರದಲ್ಲಿ ನಿಂತು ವಿವರಿಸುವ ಪ್ರಾಮಾಣಿಕ ನಿರೂಪಕನಾಗಿ ಅವರು ಕಾಣುತ್ತಾರೆ. ವೈಜ್ಞಾನಿಕ, ವೈಚಾರಿಕ ಹೊರಹುಗಳನ್ನು ಓದುಗರ ತೀರ್ಮಾನಕ್ಕೆ ಬಿಡುತ್ತಾರೆ.

ಅಧ್ಯಾಯ – ೭
ಉಪಸಂಹಾರ

ಎಲ್ಲ ಕಾಲಘಟ್ಟಗಳಲ್ಲಿಯೂ, ಎಲ್ಲ ಚಳುವಳಿಗಳ ಸಂದರ್ಭದಲ್ಲಿಯೂ ಆರೋಗ್ಯಕಾರಿಯಾದ ನಿಲುವನ್ನು ಇಟ್ಟುಕೊಂಡು ಕಥೆಗಳನ್ನು ಬರೆದ ಹಿರಿಯ ಕಥೆಗಾರರಲ್ಲಿ ಚದುರಂಗರೂ ಒಬ್ಬರು. ಅವರ ಸಣ್ಣಕಥೆಗಳು ತಾವು ರಚನೆಗೊಂಡ ಸಾಹಿತ್ಯ ಘಟ್ಟದ ಪ್ರಗತಿಶೀಲ ಕಥೆಗಳ ಲಕ್ಷಣಗಳನ್ನು ಬಿಂಬಿಸುತ್ತವೆ. ಬಡತನ, ಹಸಿವು, ವರ್ಗ, ವರ್ಣ, ಲಿಂಗ ಆಧಾರಿತ ಅಸಮಾನತೆ, ಶೋಷಣೆ, ಕಾರ್ಮಿಕ ಸಮಸ್ಯೆ ಹೀಗೆ ಜೀವನದ ಹೋರಾಟದ ಹಲವು ಮುಖಗಳನ್ನು ಅಚ್ಚುಕಟ್ಟಾದ ಕಥನ ಶೈಲಿಯಲ್ಲಿ ಸರಳವಾಗಿ ನಿರೂಪಿಸುತ್ತವೆ. ಚದುರಂಗರ ಆರಂಭದ ಕಥೆಗಳ ಮಟ್ಟದಲ್ಲಿಯೇ ಮುಂದಿನ ಕಾಲಘಟ್ಟದ ಕಥೆಗಳು ಸೀಮಿತ ಯಶಸ್ಸಿನಲ್ಲಿ ಅಂತ್ಯಗೊಳ್ಳುವುದಿಲ್ಲ. 'ಕ್ವಾಟೆ' ಮತ್ತು 'ಮೃಗಯಾ'ದಂತಹ ಕಥಾಸಂಕಲನಗಳು ಚದುರಂಗರು ನವ್ಯ ಮತ್ತು ನವ್ಯೋತ್ತರ ಸಾಹಿತ್ಯ ಘಟ್ಟಗಳಿಗೆ ತೆರೆದುಕೊಂಡ ಅನುಭವ ಮತ್ತು ಅಭಿವ್ಯಕ್ತಿ ಕ್ರಮವನ್ನು ಪ್ರತಿಬಿಂಭಿಸುತ್ತವೆ.

ಚದುರಂಗರ ಕತೆಗಳಿಗೆ ಓದುಗನಲ್ಲಿ ಕುತೂಹಲವನ್ನು ಹುಟ್ಟಿಸಿ ಅವನನ್ನು ಕಥೆಯ ಕೊನೆಯವರೆಗೆ ಒಯ್ಯುವ ಶಕ್ತಿ ಇದೆ. ಸೂಕ್ಷ್ಮದರ್ಶಿಗಳಾದ ಓದುಗರು ಅವರ ಕಥೆಗಳಲ್ಲಿ ವೈವಿಧ್ಯ ವಿಸ್ತಾರಗಳನ್ನು ನಿರೀಕ್ಷಿಸಬಹುದು. ಚದುರಂಗರ ಕಥನ ಕಲೆ ಬೆಳೆದಂತೆ ಈ ಗುಣಗಳೂ ಬಂದು ಸೇರುವವೆಂಬ ಭರವಸೆ ಅವರ ಕೃತಿಗಳು ಕೊಡುತ್ತವೆ. ನಗರ ಕೇಂದ್ರಿತ ಅನುಭವಗಳನ್ನೇ ಚದುರಂಗರ ಬಹುತೇಕ ಕಥೆಗಳು ಅಭಿವ್ಯಕ್ತಿಸಿದರೂ ಗ್ರಾಮೀಣ ಕೇಂದ್ರಿತ ಕಥೆಗಳು ಯಾವುದೇ ಪೂರ್ವಗ್ರಹಗಳಿಲ್ಲದೆ ಅಲ್ಲಿಯ ಬದುಕನ್ನು ಆತ್ಮೀಯವಾಗಿ ತೆರೆದಿಡುವುದರಿಂದ ಹೆಚ್ಚು ಸಾಫಲ್ಯವನ್ನು ಗಳಿಸಿಕೊಳ್ಳುತ್ತವೆ.

ಚದುರಂಗರ ಕಥೆಗಳಲ್ಲಿ ಜೀವನ ಕುರಿತಾದ ಯಾವುದೇ ಬಗೆಯ ಗೆರೆ ಹೊಯ್ದ ಹಾಗಿನ ನೋಟವನ್ನು ನಿರೀಕ್ಷಿಸಲಾಗುವುದಿಲ್ಲ. ಜೀವನ ಕುರಿತಾದ ಅನ್ವೇಷಣೆ ನಿರೀಕ್ಷಣೆಗಳು ಇಲ್ಲಿ ಅತ್ಯಂತ ಸಂಕೀರ್ಣ ನೆಲೆಯಲ್ಲಿ ನಡೆದಿರುವುದನ್ನು ಗಮನಿಸುತ್ತೇವೆ. ಹಾಗಾಗಿಯೇ ಅವು ಚದುರಂಗರ ಕಥಾಸಾಹಿತ್ಯದ ಕಲಾ ಪರಿಣಿತಿಯ ದ್ಯೋತಕಗಳಾಗಿಯೂ 'ಶವದಮನೆ', 'ಬಣ್ಣದಬೊಂಬೆ', 'ತುಲಸಿ', 'ನಾಲ್ಕುಮೊಳ–ಭೂಮಿ', 'ಕ್ವಾಟೆ', 'ಅಂಕ', 'ಮೃಗಯಾ', 'ಒಂದು ಉಂಗುರದ ಕಥೆ'ಗಳಂಥ ಕಥೆಗಳು

ಒಂದು ಕಥೆಗೂ ಮತ್ತೊಂದು ಕಥೆಗೂ ಇರುವ ಕಲಾಪರಿಣಿತಿಯ ಏರುಮುಖದ ಬೆಳವಣಿಗೆಯಲ್ಲಿ ಚದುರಂಗರ ಪ್ರಯೋಗಶೀಲ ಗುಣವೇ ಮುಖ್ಯ ಪಾತ್ರ ವಹಿಸಿದೆ.

ಚದುರಂಗರ ಕಥೆಗಳನ್ನು ಶೈಲಿಯ ದೃಷ್ಟಿಯಿಂದ ನೋಡಿದಾಗ ಅವರು ಪ್ರಗತಿಶೀಲ ಕತೆಗಾರರಲ್ಲೆ ಪ್ರಮುಖರಾಗುತ್ತಾರೆ. ಅವರು ತಮ್ಮ ಬರವಣಿಗೆಯಲ್ಲಿ ಮೆರೆದಿರುವ ನೊಂದ ಜನರ ಬಗೆಗೆ ಇರುವ ಮರುಕ, ಮಾನವೀಯ ಅನುಕಂಪಗಳ ಜೊತೆ ಸಮಕಾಲೀನ ಸಮಾಜದಲ್ಲಿನ ಅನೀತಿ ಅನ್ಯಾಯ ನೀಚತನಗಳೂ ಮತ್ತು ಅವರನ್ನು ಕುರಿತ ವಿಷಾದವೂ ಗೋಚರಿಸುತ್ತದೆ. ಅಲ್ಲದೆ ವಸ್ತುವಿನ ಆಯ್ಕೆಯಲ್ಲಿ ಚದುರಂಗರು ತೋರುವ ಆಸ್ಥೆ ಪ್ರಮುಖವಾಗಿದೆ. ಅಲ್ಲದೆ ಕಥೆಗಳಲ್ಲಿ ಬಳಕೆಯಾಗಿರುವ ಭಾಷೆ ಬಹುತೇಕ ಗ್ರಾಮ್ಯಭಾಷೆಯಾಗಿದ್ದು ಇದು ಹುಣಸೂರು ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ಸೇರಿದಂತೆ ಹಳೇ ಮೈಸೂರು ಪ್ರಾಂತ್ಯಕ್ಕೆ ಸೇರಿದ್ದು ಕಥೆಗಳಲ್ಲಿ ಬಳಕೆಯಾಗಿರುವ ಗಾದೆಗಳು. ನಾಣ್ಣುಡಿಗಳು ಕಥೆಗೆ ಹೊಸ ಮೆರಗನ್ನು ನೀಡುವಲ್ಲಿ ಯಶಸ್ವಿಯಾಗಿವೆ. ಹೀಗೆ ಚದುರಂಗರು ಶ್ರೇಷ್ಠ ಕಾದಂಬರಿಕಾರರಷ್ಟೇ ಅಲ್ಲ ಉತ್ತಮ ಕಥೆಗಾರರ ಸಾಲಿನ ಮುಂಚೂಣಿಯಲ್ಲಿರುವರು. ಅಲ್ಲದೆ 'ಶವದಮನೆ' 'ಇಣುಕುನೋಟ' ಮತ್ತು 'ನಾಲ್ಕುಮೊಳ ಭೂಮಿ' ಮುಂತಾದ ಕಥೆಗಳು ಶ್ರೇಷ್ಟಕತೆಗಳ ಸಾಲಿನಲ್ಲಿ ನಿಲ್ಲುವಂತಹವು.

ಚದುರಂಗರ ಒಟ್ಟು ಏಳು ಕಥಾ ಸಂಕಲನಗಳಲ್ಲಿ ಪ್ರಕಟಗೊಂಡಿರುವ ಕಥೆಗಳನ್ನು ಗಮನಿಸಿದಾಗ "ಸ್ವಪ್ನಸುಂದರಿ" ಹಾಗೂ "ಶವದ ಮನೆ" ಮೊದಲಾದ ಕೆಲವು ಸಂಕಲನಗಳು ಪ್ರಗತಿಶೀಲ ಮನೋಧರ್ಮದ ಹಿನ್ನೆಲೆಯಲ್ಲಿನ ಬಡತನ, ವೇಶ್ಯಾವಾಟಿಕೆ, ಶೋಷಣೆ ಮುಂತಾದ ಅಂಶಗಳನ್ನು ಪ್ರಮುಖವಾಗಿ ಚಿತ್ರಿಸುತ್ತವೆ. ಅವರ ಕೊನೆಯ ಎರಡು ಕಥಾಸಂಕಲನಗಳಾದ 'ಕ್ವಾಟೆ' ಮತ್ತು 'ಮೃಗಯಾ' ಗಳಲ್ಲಿ ಕಂಡುಬರುವ ಕಥೆಗಳ ವಸ್ತು ಹೆಣ್ಣಿನ ಮಾನಸಿಕ ಮತ್ತು ಲೈಂಗಿಕ ಶೋಷಣೆಯನ್ನು ಹಾಗೂ ಮಾನವೀಯತೆಗೆ ಒದಗಿದ ದುಸ್ಥಿತಿಯನ್ನು ಚಿತ್ರಿಸುವಂತಹವುಗಳಾಗಿವೆ. ಹೀಗೆ ಹೊಸತನಗಳಿಗೆ ಮೈತೆರೆದು ನಿಂತ, ಚದುರಂಗರ ವ್ಯಕ್ತಿತ್ವ – ಸಾಹಿತ್ಯಗಳ ಅವಿಭಾಜ್ಯ ಅಂಗವಾಗಿರುವ ಪ್ರಯೋಗ ಶೀಲತೆಯನ್ನು ಕಾಣಬಹುದಾಗಿದೆ. ಚದುರಂಗರ ಕಥೆಗಳಲ್ಲಿ ಜೀವನ ಕುರಿತಾದ ಅನ್ವೇಷಣೆ, ನಿರೀಕ್ಷಣೆಗಳು ಇಲ್ಲಿ ಅತ್ಯಂತ ಸಂಕೀರ್ಣ ನೆಲೆಯಲ್ಲಿ ನಡೆದಿರುವುದನ್ನು ಗಮನಿಸಬಹುದಾಗಿದೆ. "ಅವರು" ಕಥೆಯಿಂದ ಆರಂಭಿಸಿ, "ನಾಲ್ಕುಮೊಳ ಭೂಮಿ," 'ಕ್ವಾಟೆ', 'ಅಂಕ', 'ಮೃಗಯಾ', 'ಒಂದು

ಉಂಗುರದ ಕಥೆ', 'ಕಲ್ಲಿನಕೊಳಲು'ಗಳಂಥ ಕಥೆಗಳ ತನಕ ಗಮನಿಸಿದಾಗ ಅವರ ಒಂದು ಕಥೆಗೂ ಮತ್ತೊಂದು ಕಥೆಗೂ ಇರುವ ಕಲಾಪರಿಣಿತಿಯನ್ನು ಗಮನಿಸಬಹುದು.

ಮೇಲಿನ ಮಾತುಗಳು ಕೇವಲ ಕಥಾಸಾಹಿತ್ಯಕ್ಕೆ ಮಾತ್ರ ಸಂಬಂಧಿಸಿದುದಲ್ಲ ಬದಲಾಗಿ, ಅವರ ಕಾದಂಬರಿಗಳು ಹಾಗೂ ನಾಟಕಗಳು ಸಹ ಅವರ ಪ್ರಯೋಗಶೀಲ ಗುಣದಿಂದ ಹೊರತಾಗಿಲ್ಲ. ಹೀಗಾಗಿ ಚದುರಂಗರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ "ಮರುಹುಟ್ಟು" ಗಳನ್ನು ಪಡೆದ ಲೇಖಕರಾಗಿದ್ದಾರೆ.

ಅ.ನ.ಕೃ. ಅವರು 'ಸ್ವಪ್ನಸುಂದರಿ" ಕಥಾ ಸಂಕಲನದ ಮುನ್ನುಡಿಯಲ್ಲಿ ಹೇಳಿರುವಂತೆ ಪ್ರಗತಿಶೀಲ ಸಾಹಿತ್ಯಘಟ್ಟದ ಈ ಸಹರಾ ಮರುಭೂಮಿಯಲ್ಲಿ ಒಂದೆರಡು ಖರ್ಜೂರ ಗಿಡಗಳನ್ನು ನೆಡಲೆತ್ನಿಸುತ್ತಿರುವವರಲ್ಲ ಚದುರಂಗರು ಒಬ್ಬರಾಗಿದ್ದಾರೆ. ಹೀಗೆ ಓದುಗನಲ್ಲಿ ಕುತೂಹಲವನ್ನು ಹುಟ್ಟಿಸಿ ಅವನ ಕಥೆಯ ಕೊನೆಯವರೆಗೆ ಒಯ್ಯುವ ಹಿರಿಶಕ್ತಿ ಚದುರಂಗರಿಗೆ ಸಾಧಿಸಿದೆ. ಅಲ್ಲದೆ ಜೀವನಪರ ಮತ್ತು ಜನಪರವಾದ ನಿಲುವುಗಳು ಚದುರಂಗರ ಸಾಹಿತ್ಯದ ಇತರ ಪ್ರಮುಖ ಅಂಶಗಳಾಗಿವೆ.

ಕಥಾಸಾಹಿತ್ಯ ಒಳಗೊಂಡಂತೆ ಚದುರಂಗರ ಇಡೀ ಸಾಹಿತ್ಯವನ್ನು ಗಮನಿಸಿದಾಗ ಅವರ ಸಾಹಿತ್ಯದಲ್ಲಿ ಬಹುಮುಖ್ಯವಾಗಿ ವರ್ಗ, ವರ್ಣ, ಜಾತಿ, ಲಿಂಗ ಇವುಗಳ ಆಧಾರದಲ್ಲಿ ಶೋಷಣೆಗೆ ಒಳಗಾದವರ ಪರವಾಗಿಯೇ ಸಮಗ್ರವಾಗಿ ಬಿಂಬಿಸಿರು-ವುದನ್ನು ಕಾಣಬಹುದು. ಬಡವರು, ಶೋಷಿತರು, ಇಲ್ಲದವರು ಚದುರಂಗರ ಸಾಹಿತ್ಯದ ನಾಯಕರಾಗಿದ್ದಾರೆ. ಅಲ್ಲದೆ ಅವರ ಕೃತಿಗಳಲ್ಲಿ ವ್ಯಕ್ತವಾಗುವ ಸ್ತ್ರೀಪರ ನಿಲುವುಗಳು ಮಹತ್ವದ ಅಂಶಗಳಾಗಿ ಗಮನಸೆಳೆಯುವಂತಹುಗಳಾಗಿವೆ. ಈ ನಿಲುವುಗಳು ಅತ್ಯಂತ ಸಹಜವಾಗಿ ಪಾತ್ರದೊಳಗಿನಿಂದಲೇ ಹುಟ್ಟಿಕೊಳ್ಳುತ್ತವೆ. ನಿಸರ್ಗ ಸಹಜವಾಗಿಯೇ ಇರುವ ಸ್ತ್ರೀಯ ಸತ್ತ್ವವನ್ನು ಚದುರಂಗರ ಕೃತಿಗಳು ಪೂರಕ ನೆಲೆಯಲ್ಲಿ ಅನಾವರಣಗೊಳಿಸುತ್ತವೆ. ಈ ಎಲ್ಲವುಗಳ ಹಿನ್ನೆಲೆಯಲ್ಲಿ ಚದುರಂಗರನ್ನು ನಾವು ಕನ್ನಡದ ಮಹತ್ತ್ವದ ಬರಹಗಾರರೆಂದು ಎರಡನೆಯ ಮಾತಿಲ್ಲದೆ ಒಪ್ಪಿಕೊಳ್ಳಬೇಕಾಗುತ್ತದೆ. ಈ ರೀತಿ ವ್ಯಕ್ತಿಯಾಗಿ, ಸಾಹಿತಿಯಾಗಿ ಕನ್ನಡದ ಸಾಂಸ್ಕೃತಿಕ ವೇದಿಕೆಯಲ್ಲಿ ಚದುರಂಗರ ಏಕಪ್ರಕಾರವಾದ ಮಾನ್ಯತೆಗಳಿಸಿಕೊಂಡವರು. ಹೀಗೆ ಸಣ್ಣ ಕಥೆಗಾರರಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ಚದುರಂಗರು ಕನ್ನಡ ಸಾಹಿತ್ಯಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ.


[illegible] ಕಾಲಕಾಲಕ್ಕೆ ಸಹಜವಾಗಿ [illegible] ಒಂದೊಂದು ಬೆಳವಣಿಗೆಯಿಂದಲೂ [illegible]ಯಬೇಕಾದುದನ್ನು ಕಲಿಯುತ್ತಾ ತಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳುತ್ತಾ, ತಮ್ಮ ಕಲಾವಂತಿಕೆಯನ್ನು ಬೆಳೆಸಿಕೊಳ್ಳುತ್ತಾ ಯಾವ ಕಾಲಕ್ಕೂ ಮುಂಚೂಣಿಯಲ್ಲಿಯೇ ನಿಲ್ಲುತ್ತಿರುವ ಚದುರಂಗರ ಚದುರನ್ನು ಎಲ್ಲ ವಿಮರ್ಶಕರೂ ಗುರುತಿಸುತ್ತಲೇ ಬಂದಿದ್ದಾರೆ. ಪ್ರಗತಿಶೀಲರ ನಡುವೆ ಪ್ರಗತಿಶೀಲರಾಗಿ ನವ್ಯರಲ್ಲಿ ನವ್ಯರಾಗಿ ಬಂಡಾಯ ಸಾಹಿತಿಗಳ ಮಧ್ಯೆ ಬಂಡಾಯ ಸಾಹಿತಿಗಳೂ ಆಗಿ ತಮ್ಮ ಜೀವನ ದೃಷ್ಟಿಯಲ್ಲಿಯೂ ತಮ್ಮ ಕಲಾ ಸೃಷ್ಟಿಯಲ್ಲಿಯೂ ಹೆಚ್ಚು ಹೆಚ್ಚಿನ ಸಂಕೀರ್ಣತೆಯನ್ನು ಸಾಧಿಸಿಕೊಳ್ಳುತ್ತಲೇ ಇರುವ ಸಾಹಿತಿ, ಸಾಹಸಿ ಚದುರಂಗರು. ಹೀಗಾಗಿಯೇ, ಒಂದೇ ಸಮನೆ ಮುಂದಡಿಯಿಡುತ್ತಿರುವ ಈ ಸದಾ ವಿಕಾಸಶೀಲ ಕಲಾವಿದರ ಹೊಸ ಹೆಜ್ಜೆಯಾಗಿ ಅವರ ಒಂದೊಂದು ಹೊಸ ಕೃತಿಯೂ ನಮ್ಮ ಸಾಹಿತ್ಯ ಸಂದರ್ಭದಲ್ಲಿ ಗಮನಾರ್ಹವಾಗುತ್ತದೆ.

ಒಟ್ಟಾರೆ ಹೇಳುವುದಾದರೆ, ತಮ್ಮ 'ವೈಶಾಖ'ದಂತಹ ಕೃತಿಯಲ್ಲಿ ತಾವು ಪ್ರದರ್ಶಿಸಿರುವಂತೆ ಪ್ರಸ್ತುತ ಹಲವು ಕತೆಗಳಲ್ಲಿಯೂ ಚದುರಂಗರು ತಮ್ಮ ಕಲಾಪರಿಣತಿಯನ್ನು ಪ್ರದರ್ಶಿಸಿದ್ದಾರೆ.

ಕೆ. ನರಸಿಂಹಮೂರ್ತಿ

ಚದುರಂಗರ ಸಮಗ್ರ ಕಥೆಗಳು





ಚದುರಂಗರ ಸಮಗ್ರ ಕಥೆಗಳು

ಚದುರಂಗ

ಜನನ	–	೧೯೧೬ರಲ್ಲಿ ಕಲ್ಲಹಳ್ಳಿಯಲ್ಲಿ
ಪ್ರಾಥಮಿಕ ಶಿಕ್ಷಣ	–	ಮೈಸೂರಿನ ಬೋರ್ಡಿಂಗ್ ಶಾಲೆಯಲ್ಲಿ
ಪ್ರೌಢ ಶಿಕ್ಷಣ	–	ಮೈಸೂರು ಮಹಾರಾಜ ಪ್ರೌಢಶಾಲೆ
ಪಿ.ಯು.ಸಿ	–	೧೯೩೮ರಲ್ಲಿ ಬೆಂಗಳೂರಿನಲ್ಲಿ
ಪದವಿ	–	ಪೂನಾದಲ್ಲಿ

ಪ್ರಶಸ್ತಿಗಳು

೧೯೬೮	–	'ಸರ್ವಮಂಗಳಾ' ನಿರ್ದೇಶನಕ್ಕೆ ಮೂರನೇ ಅತ್ಯುತ್ತಮ ಚಿತ್ರ ನಿರ್ದೇಶನ ಪ್ರಶಸ್ತಿ, ಗ್ರಾಮ ಜೀವನದ ಅತ್ಯುತ್ತಮ ಕಥಾಲೇಖಕ ಪ್ರಶಸ್ತಿ, ಅತ್ಯುತ್ತಮ ಸಂಭಾಷಣೆಗೆ ಪ್ರಶಸ್ತಿ
೧೯೬೯	–	'ಉಯ್ಯಾಲೆ' ಚಿತ್ರದ ಸಂಭಾಷಣೆಗೆ ಪ್ರಶಸ್ತಿ
೧೯೮೧	–	ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೮೧	–	'ವೈಶಾಖ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ವಿಶೇಷ ಬಹುಮಾನ
೧೯೮೨	–	'ವೈಶಾಖ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೯೩	–	ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ
೧೯೯೪	–	ಮಂಡ್ಯದಲ್ಲಿ ನಡೆದ ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ
೧೯೯೪	–	'ಮೃಗಯಾ' ಕಥಾಸಂಕಲನಕ್ಕೆ ಅತ್ಯುತ್ತಮ ಕಥಾಸಂಕಲನ ಪ್ರಶಸ್ತಿ
೧೯೯೮	–	ನಿಧನ

ಪರಾಮರ್ಶನ ಸಾಹಿತ್ಯ

೧.	ಚದುರಂಗರ ಸಮಗ್ರ ಕಥೆಗಳು ಅಭಿರುಚಿ ಪ್ರಕಾಶನ, ಮೈಸೂರು, ಮೊದಲ ಮುದ್ರಣ, ೧೯೯೯.	ಚದುರಂಗ
೨.	ಚದುರಂಗ : ವ್ಯಕ್ತಿ – ಅಭಿವ್ಯಕ್ತಿ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ಮೊದಲ ಮುದ್ರಣ, ೧೯೮೯	ಸಂ. ಡಿ.ಎ.ಶಂಕರ್
೩.	ನವಕರ್ನಾಟಕ ಸಾಹಿತ್ಯ ಸಂಪದ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕನ್ನಡ ಲೇಖಕರು, ಚದುರಂಗ, ಮೊದಲ ಮುದ್ರಣ, ೨೦೦೧.	ಸಂ. ಡಾ. ಹಾ.ಮಾ.ನಾಯಕ್ ಡಾ. ಪ್ರಧಾನ್ ಗುರುದತ್ತ
೪.	ಶತಮಾನದ ಸಣ್ಣಕಥೆಗಳ ಸಮೀಕ್ಷೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಮೊದಲ ಮುದ್ರಣ, ೨೦೦೩.	ಡಾ. ಕರೀಗೌಡ ಬೀಚನಹಳ್ಳಿ
೫.	ದಶಕದ ಕನ್ನಡ ಸಾಹಿತ್ಯ ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ ಮೊದಲ ಮುದ್ರಣ, ೨೦೦೩.	ಸಂ. ಡಾ. ಎಫ್.ಟಿ.ಹಳ್ಳಿಕೇರಿ ಡಾ. ಕೆ.ರವೀಂದ್ರನಾಥ
೬.	ಕನ್ನಡದಲ್ಲಿ ಕಥನ ಸಾಹಿತ್ಯ ಸಣ್ಣಕಥೆ ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು ಮೊದಲ ಮುದ್ರಣ ೨೦೦೩	ಜಿ.ಎಸ್.ಆಮೂರ
೭.	ಕನ್ನಡ ಸಾಹಿತ್ಯ ಚರಿತ್ರೆ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಗೋಕುಲಂ ಮೂರನೆಯ ಹಂತ ಮೈಸೂರು –೨, ಪರಿಷ್ಕೃತ ವಿಸ್ತೃತ ಆವೃತ್ತಿ – ೨೦೦೬	ತ.ಸು.ಶಾಮರಾಯ
೮.	ಸಾಲುದೀಪಗಳು ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.	ಸಂ. ಜಿ.ಎಸ್.ಸಿದ್ದಲಿಂಗಯ್ಯ ಎಂ.ಎಚ್.ಕೃಷ್ಣಯ್ಯ
೯.	ಚದುರಂಗರ ಸಾಹಿತ್ಯದಲ್ಲಿ ಗ್ರಾಮ ಸಮಾಜ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ, ೨೦೦೨ (ಅಪ್ರಕಟಿತ)	ಎಚ್.ಎಂ.ಸ್ವಾಮಿಗೌಡ

೧೦. ಹೊಸಗನ್ನಡ ಸಾಹಿತ್ಯ ಚರಿತ್ರೆ — ಪ್ರೊ. ಎಲ್.ಎಸ್.ಶೇಷಗಿರಿರಾವ್
ಅಂಕಿತ ಪುಸ್ತಕ ಪ್ರಕಾಶನ
ಬಸವನಗುಡಿ, ಬೆಂಗಳೂರು
ಪರಿಷ್ಕೃತ – ವಿಸ್ತೃತ ತೃತೀಯ ಆವೃತ್ತಿ –
೨೦೦೬

೧೧. ಕನ್ನಡ ಸಾಹಿತ್ಯ ಸಮೀಕ್ಷೆ — ಪ್ರೊ. ಎಲ್.ಎಸ್.ಶೇಷಗಿರಿರಾವ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು, ೧೯೯೯

೧೨. ೨೦ನೇ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು — ಸಂ. ಬಸವರಾಜ ಸಾದರ